"రతి కల్యాణ"

యక్షగాన

1985

& Date	History
rsday t May 1990	1. History of Medieval India from 1206 to 1756 (Revised) 2. History of United States of Amer from 1765 A.D. to Modern Time 3. History of Vijayanagar Empire Contemporary Dynastic
iday st June 1990	—
Monday 4th June 1990	1. History of East Asia from 1900 A the Present (Revised) 2. History of Modern Asia (China & Japan)
Tuesday 5th June 1990	—

Note :—1. The Examinations will be held at (a) Technology, Arcot Road, Kodamb... ...idates are requested to follow th...

ಯಕ್ಷಗಾನ.

ಶ್ರೀ ರತಿ ಕಲ್ಯಾಣ

[ಅರ್ಥ ಸಹಿತ]

ಶಾರ್ದೂಲ ವಿಕ್ರೀಡಿತ ವೃತ್ತ

ಕೃಷ್ಣಂ ಶ್ರೀ ಯದುವಂಶ ಮೌಕ್ತಿಕಮಣಿಂ ಕೃಷ್ಣಾಂಪುರಸ್ಕೃತ್ಯತಾಂ
ಕಾರ್ಷ್ಣೇಃ ಶ್ರೀರತಿಪಾಣಿ ಪೀಡನಕರಂ ಸೋಷ್ಣೀಶ ಭೂಪಾದ್ವೃತಂ
ಜಿಷ್ಣುಂ ಭೀಷ್ಮಸುತಾಖಿಲೇಷ್ಟವರದಂ ಧೃಷ್ಣುಂ ಜಗತ್ಪಾಲಕಂ
ಜಿಷ್ಣು ಪ್ರೀತಿ ವಿವರ್ಧನಂ ಸುಖತನುಂ ವಿಷ್ಣುಂಭಜೇ ಸರ್ವದಾ॥

ಭಾಮಿನಿ.

ಹರಿದಯದಿ ವನದೊಳಗೆ ಪಾಂಡವ। ರರಸರೈವರು ದ್ರೌಪದಿಯು ಸಹಿ।
ತಿರದೆ ವನವಾಸವನು ಮುಗಿಸಿದರಮಿತ ಸೌಖ್ಯದಲಿ ॥
ವರುಷವಜ್ಞಾತವನು ಕಳೆವುತ। ಧರಣಿಗೋಸುಗ ಕೌರವಾದ್ಯರ।
ಕುರದಿ ಸಂಹರಿಸಲ್ಕೆ ಧರ್ಮಜಗಾಯ್ತು ಪಟ್ಟವದು ॥ ೧ ॥

ಭಾಗವತರು- ಚಂದ್ರ ವಂಶಜರಾದ ಪಾಂಡವರು ದಾಯಾದಿಗ
ಳಾದ ಕೌರವಾದಿಗಳ ದೆಸೆಯಿಂದ ಬಹಳ ಸಂಕಷ್ಟಗಳಿಗೆ ಒಳಗಾದರು.
... ತದ ಮೂಲಕ ... ರುಕ್ಮಿಣಿ। ತರುಣಿಯರ ಮೇಳದಲಿ ಬಂದಾ। ಗರುಡಗಮನನ ...
... ತಿ ವ... ಕೆರಗಲುಪಚರಿಸುತಿಂತೆಂದ ॥೧॥

ಕೃಷ್ಣ- ಪಾಠಕರ ಜಯಘೋಷವು ನೇತ್ರಾನಂದಕರವಾದ ನೃತ್ಯವೂ
ಶ್ರವಣಾನಂದಕರವಾದ ಗಾಯನವೂ ನಾನಾ ವಿಧವಾದ ವೈಭವಗಳೂ ತುಂಬಿ
ರುವ ಈ ಸಭಾಮಂಟಪಕ್ಕೆ ದೇವೇಂದ್ರನ ಸಭೆಯೇ ಸೋಲಬೇಕು, ಇಂತಹ
ರತ್ನಮಂಟಪದ ಸಿಂಹಾಸನದಲ್ಲಿ ಹೀಗೆಯೇ ಕುಳಿತುಕೊಳ್ಳುವೆನು.

ರಾಗ- ಭೈರವಿ; ತಾಳ- ಝಂಪೆ.

ವಸುಮತೀಶನೆ ಕೇಳು। ಕುಶಲದಲಿ ಪಾಂಡವರು
ವಸುಧೆಯನು ಪಾಲಿಸುತ। ಲೆಸೆದರವರಂದು ॥ ೧ ॥
ಇತ್ತ ಕಾಂತೇಯರಿರ। ಲತ್ತ ಹರಿದ್ವಾರಕಾ।
ಪತ್ತನದೊಳೊಪ್ಪಿರ್ದ। ನಾಪ್ತಜನ ಸಹಿತ ॥ ೨ ॥

ಕೃಷ್ಣ- (ಸ್ವಗತ) ಲೋಕಕಲ್ಯಾಣ ನಿರತನಾದವನಿಗೆ ವಿಶ್ರಾಂತಿ ದರೂ ಎಲ್ಲಿದೆ? ಧರ್ಮವಿರೋಧಿಗಳಾದ ರಾಕ್ಷಸಾಧಮರನ್ನು ಬಾಲ್ಯದಿಂದ ಸಂಹರಿಸುತ್ತಾ ಬಂದೆನು. ಆದರೆ ಜಗತ್ಕಲ್ಯಾಣದ ಮಹಾಕಾರ್ಯಕ್ಕೆ ತಾ ಬ್ಬನೇ ಹೊಣೆಗಾರನಾಗಿರುವುದಲ್ಲ; ನನ್ನ ದಾರಿಯಲ್ಲಿ ಪರಿಶ್ರಮಿಸಬಲ್ಲ ಸ ತ್ರರು ಯಾರಿದ್ದಾರೆಂದು ಹುಡುಕುತ್ತಿದ್ದಾಗ ಪಾಂಡವರೇ ಸಮರ್ಥರೆ ತಿಳಿಯಿತು. ಏಕೆಂದರೆ ಅವರಲ್ಲಿ ದೈವಭಕ್ತಿ, ಪಾಪಭೀತಿ, ಪ್ರಜ್ಞಾದಿ ಗು ಗಳಿದ್ದುವು. ಇಂತಹರಿಂದಲೇ ನನ್ನ ಕಾರ್ಯದ ಬಹುಭಾಗವು ಮುಗಿ ಬೇಕೆಂದೂ ಪಾಂಡವರೇ ಶ್ರೀ ಕೃಷ್ಣನ ಪಂಚಪ್ರಾಣಗಳೆಂಬ ಮಾತು ಪ್ರಸಿ ವಾಗಬೇಕೆಂದೂ ನಿಶ್ಚಯಿಸಿದೆ. ಹಾಗೆಯೇ ಕುರುಕ್ಷೇತ್ರದಲ್ಲಿ ಯುದ್ಧ ಯಿತು. ಅಂದರೆ ಧರ್ಮಾಧರ್ಮಗಳ, ಸತ್ಯಾಸತ್ಯಗಳ ಹೋರಾಟವಾಯಿ ಕೊನೆಗೆ ಅಧರ್ಮವೇ ನಾಶವಾಗಿ ಧರ್ಮರಾಜನ ಪ್ರಭುತ್ವದಲ್ಲಿ ಸರ್ವಾ ಸುಂದರವಾದ ಸಾಮ್ರಾಜ್ಯವೂ ಸ್ಥಾಪಿತವಾಯಿತು. ಆದರೆ ನನ್ನ ಅವತಾ ಉದ್ದೇಶಗಳೇನು? ದುಷ್ಟ ಸಂಹಾರಕ್ಕಾಗಿ ಮೀಸಲಾದುದಲ್ಲ. ಲೋಕ ವ್ ಹಾರಗಳಲ್ಲಿ ತತ್ಪರರಾದ ಮಂದಿಗಳಿಗೆಲ್ಲ ದಿವ್ಯವಾದ ಅನುಭವಗಳನ್ನು ಕೊ ವುದೇ ಮುಖ್ಯ. ಆದುದರಿಂದ ಆ ಆಲೋಚನೆಯನ್ನೇ ಮನಸ್ಸಿನಲ್ಲಿಟ್ಟುಕೊ ಡು ಅನುಕೂಲ ಸನ್ನಿವೇಶಗಳನ್ನು ಕಲ್ಪಿಸುತ್ತಾ ಬಂಧುಮಿತ್ರಾದಿ ಪ್ರಜ

ಲಾದ ಧರ್ಮಪತ್ನಿಯರನ್ನೂ ಸಾಂಬ, ಪ್ರದ್ಯುಮ್ನ ಮೊದಲಾದ ಸತ್ಪುತ್ರರನ್ನೂ ಕೂಡಿ ಜೀವನ ನಡೆಸುತ್ತಿದ್ದೇನೆ ಇಂತಹ ಕೌಟುಂಬಿಕ ಜೀವನವು ಯಾರಿಗಿದೆ? ಭಗವಾನ್ ಸೂರ್ಯನಂತೆ ರಾರಾಜಿಸುವ ಪುತ್ರ ಸಂತಾನವೂ ಯಾವ ಸಂಸಾರ ದಲ್ಲಿದೆ.

ಭರಿತ ವಿಭವದಿ ಯಾದ। ವರಗಡಣದಿಂದಹಲ।
ಧರನೊಡನೆ ಮೆರೆದಿರ್ದ। ಕರುಣಾಸಾಗರನು ॥ ೪ ॥
ಸಿರಿದೇವಿ ಮೊದಲಾದ ತರುಣಿಯರನೊಡಗೊಂಡು।
ತರಣಿ ಪ್ರಕಾಶದೊಳು। ಮುರ ಮಥನನಿರ್ದ ॥ ೫ ॥

ಕೃಷ್ಣ– ಸುಖಭೋಗಗಳನ್ನು ತಾನೊಬ್ಬನೇ ಅನುಭವಿಸದೆ, ತನ್ನವರಿ ಗೆಲ್ಲ ಹಂಚಿಕೊಡುವ ಧರ್ಮಾತ್ಮನ ಸಂಪತ್ತು ಅಕ್ಷಯವೆನಿಸುವುದು. ಇದಕ್ಕೆ ಐಶ್ವರ್ಯದಿಂದ ತುಂಬಿತುಳುಕುವ ದ್ವಾರಾವತಿಯೇ ಸಾಕ್ಷಿ. ಏಕೆಂದರೆ ಪ್ರಜೆ ಗಳಾದ ಯಾದವರೆಲ್ಲರೂ ಮಹಾ ವೈಭವದಿಂದ ಮೆರೆದಾಡುತ್ತಿರುವರು. ಯಾವ ಕೆಡುಕುಗಳೂ ಬಾರದಂತೆ ನಮ್ಮಣ್ಣ ಬಲಭದ್ರನೇ ರಾಜ್ಯ ನಡೆಸುವನು ಯಾರೇ ಬರಲಿ ಏನು ಬೇಡಿದರೂ ಕಲ್ಪವೃಕ್ಷದಂತೆ ಕೊಟ್ಟು ಇನ್ನೊಬ್ಬರ ಕಷ್ಟಕ್ಕಾಗಿ ಮೈ ಕೊಡುವ ಈ ನನ್ನ ಸ್ವರೂಪವನ್ನು ಕರುಣಾಸಾಗರನೆಂದು ಜಗತ್ತಿಗೆ ಜಗತ್ತೇ ಕೊಂಡಾಡುತ್ತಿರುವುದು ಹಾಗೇ ಲಕ್ಷ್ಮಿ ಸ್ವರೂಪಳಾದ ರುಕ್ಮಿಣಿ ಮೊದಲಾದ ಹದಿನಾರು ಸಾವಿರ ಸ್ತ್ರೀಯರೊಡನೆ ಇರುವೆನೆಂಬುದು ಎಲ್ಲರೂ ತಿಳಿದ ವಿಷಯವೇ.

ಭಾಮಿನಿ.

ಪರಮಪಾವನವೆನಿಪ ದ್ವಾರಕೆ। ಪುರವರದಿ ಶ್ರೀ ವಾಸುದೇವನು। ಪರಿ ಪರಿಯ ಪಾಠಕರ ಗಡಣದಿ ಸಭೆಯೊಳೊಪ್ಪಿರಲು ॥ ಸರಸಿಜಾಯತ ನೇತ್ರೆರುಕ್ಮಿಣಿ। ತರುಣಿಯರ ಮೇಳದಲಿ ಬಂದಾ। ಗರುಡಗಮನನ ಪದ ಕೆರಗಲುಪಚರಿಸುತಿಂತೆಂದ ॥೧॥

ಕೃಷ್ಣ– ಪಾಠಕರ ಜಯಘೋಷವು ನೇತ್ರಾನಂದಕರವಾದ ನೃತ್ಯವೂ ಶ್ರವಣಾನಂದಕರವಾದ ಗಾಯನವೂ ನಾನಾ ವಿಧವಾದ ವೈಭವಗಳೂ ತುಂಬಿ ರುವ ಈ ಸಭಾಮಂಟಪಕ್ಕೆ ದೇವೇಂದ್ರನ ಸಭೆಯೇ ಸೋಲಬೇಕು, ಇಂತಹ ರತ್ನಮಂಟಪದ ಸಿಂಹಾಸನದಲ್ಲಿ ಹೀಗೆಯೇ ಕುಳಿತುಕೊಳ್ಳುವೆನು.

ರುಕ್ಮಿಣಿ- (ಸ್ವಗತ) ಎಷ್ಟು ಮಂದಿ ಸ್ತ್ರೀಯರಿದ್ದರೂ ಶ್ರೀ ಕೃಷ್ಣನ ಸೇವೆಯಿಂದ ಸಂಪೂರ್ಣ ಪುಣ್ಯಶಾಲಿಗಳಾದವರು ಬೇರಾರೂ ಇರಲಿಕ್ಕಿಲ್ಲ. ನಾನಾದರೆ ಅವಿವಾಹಿತೆಯಾಗಿದ್ದಾಗಲೇ ಕೃಷ್ಣನ ಮಹಿಮಾತಿಶಯವನ್ನು ಕೇಳಿ ಅವನನ್ನೇ ಪತಿಯನ್ನಾಗಿ ವರಿಸಬೇಕೆಂದು ಮನಸಾ ನಿಶ್ಚಯಿಸಿದ್ದೆನು. ಆದರೆ ನಮ್ಮಣ್ಣನು ಶಿಶುಪಾಲನನ್ನೇ ನಿಶ್ಚಯಿಸಿದ್ದನು. ಈ ಮಧ್ಯದಲ್ಲಿ ನಾನೇ ಕೃಷ್ಣನನ್ನು ಬರಮಾಡಿ ಅಷ್ಟಮಾಂಗನೆಯರ ಮಧ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆದು ಯಾವ ಸ್ತ್ರೀಯರಿಗೂ ದೊರಕದ ಸೌಭಾಗ್ಯವನ್ನು ಪಡೆದಿರುತ್ತೇನೆ. ಏಕೆಂದರೆ ದೇವರನ್ನು ಗಂಡನನ್ನಾಗಿ ವರಿಸಿದವಳ ಅದೃಷ್ಟವು ಅಸಾಮಾನ್ಯವಲ್ಲವೇ? ಆದರೂ ಮನಸ್ಸಿಗೇಕೋ ತೃಪ್ತಿಯಿರುವುದಿಲ್ಲ. ಸೀರೆ ಆಭರಣ ಇತ್ಯಾದಿಗಳ ಕೊರತೆ ಇಲ್ಲದಿದ್ದರೂ ಮಕ್ಕಳ ತಾಯಾಗಿ ಅನುಭವಿಸುವ ಆನಂದವೇ ಬೇರೆ. ಇದನ್ನು ಸರ್ವಜ್ಞನಾದ ಕೃಷ್ಣನೇ ಒದಗಿಸಬೇಕಾಗಿತ್ತು. ಅದೇ ಯೋಚನೆಯಿಂದಾಗಿ ನನ್ನೀ ಮನಸ್ಸು ತುಂಬಾ ಬೇಸರಗೊಂಡಿದೆ. ಈ ಹೊತ್ತು ನಿರ್ಣಯಿಸಲೇ ಬೇಕು. ಆದ್ದರಿಂದ ಜೊತೆಯಲ್ಲಿದ್ದ ಸ್ತ್ರೀಯರನ್ನು ಕೂಡಿ ಶ್ರೀ ಕೃಷ್ಣನಿದ್ದಲ್ಲಿಗೆ ಈಗಲೇ ತೆರಳುವೆನು. ಪ್ರಾಣೇಶನೇ ವಂದಿಸುವೆನು.

ಕೃಷ್ಣ- ರುಕ್ಮಿಣೀ ಏನು ಬಂದೆ? ಇಲ್ಲಿಯೇ ಕುಳಿತುಕೋ.

ರಾಗ- ಕೇತಾರಗೌಳ; ಅಷ್ಟ-ತಾಳ.

ಮಾನಿನಿ ರುಕ್ಮಿಣಿ! ಏನು ಕಾರಣ ಬಂದೆ। ನೀನತಿದುಗುಡದಿಂದ ॥
ಸಾನುರಾಗದಿ ಬಂದು ಎರಗಿದ ಹದಗನವಿ। ದೇನೆಂದುಬೆಸಗೊಂಡನು ॥ ೧ ॥

ಕೃಷ್ಣ- ಪ್ರಾಣೇಶ್ವರೀ! ನಿನ್ನ ಮುಖವನ್ನು ನೋಡಿದರೆ ಈ ದಿನದ ಸ್ಥಿತಿಯೆಲ್ಲ ವಿಚಿತ್ರವಾದಂತಿದೆ. ಘಕ್ಕನೆ ನನ್ನೀ ಸಭೆಯನ್ನು ಏತಕ್ಕಾಗಿ ಪ್ರವೇಶ ಮಾಡಿದೆ? ನಿನ್ನ ಮನಸ್ಸಿನಲ್ಲೇನೋ ಅಸ್ವಸ್ಥವಿರಬೇಕು. ಅಂತಹ ದುಃಖಕ್ಕೆ ಏನು ಕಾರಣವೋ ತಿಳಿಯೆನು. ರುಕ್ಮಿಣಿಯೇ! ಸತಿಪತಿಯರ ಸಲ್ಲಾಪವು ಅನುರಾಗದಿಂದ ಕೂಡಿರುವಾಗ ಯಾವುದನ್ನು ಹೇಳಲೂ ಸಂಕೋಚ ಪಡಬೇಡ. ಯಾವ ಅನುಮಾನವನ್ನೂ ತಂದುಕೊಳ್ಳದೆ ಈಗಲೇ ಹೇಳು ನೋಡೋಣ. ಕಿವಿಗೊಟ್ಟು ಕೇಳುವೆನು.

ಎರಿಯಲಾಲಿಪುದು ನಾನೊರೆಯುವ ವಚನವ। ಕರುಣದಿಂದೀಗನೀನು॥
ಹರುಷದಿಂದೆನ್ನಯ ತರಳ ಮನ್ಮಥನಿಗೆ। ಪರಿಣಯ ವೆಸಗಲಿಲ್ಲ ॥ ೨ ॥

ರುಕ್ಮಿಣಿ– ಪತಿದೇವ! ಕರುಣಾ ಸಮುದ್ರನೂ ಸರ್ವಜ್ಞನೂ ಆದ ನಿನ್ನ ಮುಂದೆ ನಾನೇನು ಹೇಳಲಿ? ಆದರೂ ಶಿಷ್ಟಾಚಾರದಂತೆ ನಾನು ಹೇಳುವುದನ್ನು ಪ್ರೇಮ ಪುರಸ್ಸರವಾಗಿ ಕೇಳೋಣಾಗಲಿ! ಸ್ವಾಮಿಯೇ! ತನ್ನ ಮಕ್ಕಳ ಶುಭಾಶುಭವನ್ನು ಲಕ್ಷಿಸಿ ಪ್ರಾಯಕ್ಕೆ ಬಂದ ಮಗನಿಗೆ ಮದುವೆ ಮಾಡಿಸಬೇಕಾದವರಾರು? ತಂದೆಯ ಕರ್ತವ್ಯವೆಂಬುದನ್ನು ತಿಳಿಯದೆಹೋದಿರಾ? ಅದನ್ನೇ ನಿಮ್ಮ ಮುಂದೆ ಪ್ರಸ್ತಾಪಿಸುವುದಕ್ಕಾಗಿ ನಾನಿಲ್ಲಿಗೆ ಬಂದಿರುತ್ತೇನೆ. ಮಗನಾದ ಪ್ರದ್ಯುಮ್ನನ ಲಗ್ನ ಸಂದರ್ಭವನ್ನು ನಿರೀಕ್ಷಿಸುತ್ತಾ ಈಗ ನನಗೆ ನಿರಾಶೆಯುಂಟಾಗಿದೆ. ಹಾಗೆ ಮಾಡುವುದು ವಿಚಾರಶೀಲರಾದ ನಿಮಗೆ ಸರ್ವಥಾ ಸರಿಯಾದುದಲ್ಲ.

ಕೃಷ್ಣ– ದೇವಿ! ಸ್ವಲ್ಪ ತಡೆ. ನೀನೇ ನನ್ನ ಸರ್ವಸ್ವವಾಗಿದ್ದುಕೊಂಡು ನನ್ನ ವಿಚಾರದಲ್ಲಿ ನಿರಾಶೆಪಟ್ಟೆಯಾ?

ಸರಸಿಜಗಂಧಿನಿ ಸುಮ್ಮನೆ ಚಿಂತಿಸ। ದಿರು ದಿನವೆಂಟರಲಿ॥
ತರಳೆಯ ಹುಡುಕಿ ತಂದಣುಗಕಂದರ್ಪಗೆ।
ವಿರಚಿಪೆ ಮದುವೆಯನು ॥೩॥

ಕೃಷ್ಣ– ಪದ್ಮಗಂಧಿನಿಯಾದ ರುಕ್ಮಿಣಿಯೇ! ನನ್ನ ಕರ್ತವ್ಯವೇನೆಂಬುದು ನನಗೆ ಗೊತ್ತಿದೆ. ಮಗನಾದ ಮನ್ಮಥನಿಗೆ ಸರಿಯಾದ ಸ್ತ್ರೀರತ್ನವನ್ನು ತಂದು ಮದುವೆ ಮಾಡುವ ಸಾಮರ್ಥ್ಯವು ನನಗಿರುವಾಗ ಸುಮ್ಮನೆ ಕಳವಳಿಸುವುದೇಕೆ? ಆ ಕುರಿತು ಧೈರ್ಯ ಮಾಡಿಕೊ. ಎಂಟೇ ಎಂಟು ದಿನಗಳಲ್ಲಿ ನಮ್ಮ ಕುಲಶೀಲಕ್ಕೊಪ್ಪುವ ಕನ್ಯಾರತ್ನವು ಯಾವ ಲೋಕದಲ್ಲಿದ್ದರೂ ಹುಡುಕಿ ತಂದು ಮಹಾ ವಿಜೃಂಭಣೆಯಿಂದ ಮದುವೆ ನಡೆಸುವ ಸಂದರ್ಭವನ್ನು ನೀನೇ ನೋಡುವಿ. ಅನುಮಾನಿಸಬೇಡ.

ಎನಲೆಂದಳೆಲೆನೀರ ನೀನೆಂದ ಮಾತಿನ। ಘನ ಭರವಸೆಯೆನಗೆ॥
ಇನಿತಿಲ್ಲವೆನಲು ಚಕ್ರಾಂಕಿತನುಡಿದನು। ವಿನಯದೊಳಬಲೆಯೊಳು ॥೪॥

ರುಕ್ಮಿಣಿ– ಸ್ವಾಮಿ! ಈ ವಿಚಾರದಲ್ಲಿ ನನಗೇನೂ ಭರವಸೆಯಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಏನೇನು ಹೇಳಿದರೂ ಆ ಮಾತುಗಳನ್ನೆಲ್ಲ ಸತ್ಯ

ವೆಂದೇ ನಂಬಿದ್ದೆನು. ಆದರೆ ಈ ಮಾತಿನಲ್ಲಿ ಮಾತ್ರ ಅನುಮಾನವೇ ತುಂಬಿದೆ. ಏಕೆಂದರೆ ಮನುಮಥನು ಪ್ರಾಯಕ್ಕೆ ಬಂದು ಎಷ್ಟೋ ಸಮಯವಾಯಿತು. ಲಗ್ನದ ವಿಚಾರವನ್ನೇ ಲಕ್ಷ್ಯಕ್ಕೆ ತಾರದೆ, ಆ ಪ್ರಸ್ತಾಪವನ್ನು ಮರೆತು ಬಿಟ್ಟಿರಿ.

ಕೃಷ್ಣ– ಮರೆತು ಬಿಡುವುದಾದರೂ ಹೇಗೆ?

ಕುಕ್ಷಿಯೊಳೀರೇಳು ಲೋಕವ ಧರಿಸಿಹ। ದಕ್ಷ ತಾನಾಗಿರುವೆ॥
ಈ ಕ್ಷಣನಿನ್ನಪೇಕ್ಷೆಯ ಸಲಿಸುವೆನೆನೆ। ಪಕ್ಷಿವಾಹನಗೆಂದಳು ॥ ೫ ॥

ಕೃಷ್ಣ– ಪ್ರಾಣಪ್ರಿಯೆ! ಇದೇನು ಮಾತು? ನನ್ನ ಯೋಗ್ಯತೆಗಳನ್ನು ತಿಳಿದೂ ತಿಳಿಯದವಳಂತೆ ಏನೇನೋ ಹೇಳಬೇಡ. ಈ ಹೊಟ್ಟೆಯಲ್ಲಿ ಹದಿನಾಲ್ಕು ಲೋಕಗಳನ್ನು ಹೊತ್ತುಕೊಂಡಿರುವಂತಹ ನನಗೆ ಯಾವುದೂ ಅಸಾಧ್ಯವಿಲ್ಲ. ಮನ್ಮಥನ ವಿವಾಹ ಸಿದ್ಧತೆಗಾಗಿ ಈಗಲೇ ಹೊರಟೆನು. ನಿನ್ನ ಹಿರಿದಾಸೆಯೆಲ್ಲ ಬೇಗನೆ ಫಲಿಸೀತೆಂದು ಧೈರ್ಯದಿಂದಿರು.

ಕರುಣಾಬ್ಧಿ ಕೇಳು ನೀನುಸುರಿದ ಮಾತಿದು। ನಿರುತವೊ
ಪುಸಿಯೊ ಪೇಳು॥ ಸ್ಮರನಿಗೆ ತಕ್ಕಂಥ ವಧುವೆಲ್ಲಿರುವಳೊ ನಾ।
ನರಿಯೆನೀವೈವಾಹವ ॥ ೬ ॥

ರುಕ್ಮಿಣಿ– ಕರುಣಾಸಮುದ್ರನೇ! ನಿನ್ನೀ ಮಾತನ್ನು ನಿಜವೆಂದು ನಂಬುವುದಕ್ಕೂ, ಹೆಂಡಿರಲ್ಲಾಡುವ ವಿನೋದವೆಂದು ಬಿಟ್ಟುಬಿಡುವುದಕ್ಕೂ ಕಷ್ಟ. ವಿಚಾರಕ್ಕೆ ತರುವಾಗ ಎಂಟೇ ದಿನಗಳಲ್ಲಿ ಮದುವೆ ನಡೆಸುವುದು ಹೇಗೆ? ಸರಿಯಾದ ಕನ್ಯಾರತ್ನವನ್ನು ಪರಿಶೋಧಿಸುವುದು ಯಾವಾಗ? ಹಾಗೆ ಲಗ್ನವಾಗುವುದಕ್ಕೆ ಸರ್ವಾಂಗ ಸುಂದರಿಯಾದ ವಧುವಾದರೂ ಎಲ್ಲಿರುವಳು? ಈ ವಿಷಯದಲ್ಲಿ ನನಗೇನೂ ಧೈರ್ಯ ಬರುವುದಿಲ್ಲ.

ದ್ವಿರದಗಾಮಿನಿ ನೀನು ಮನೆಯೊಳಗಿರು ಪಂಚ। ಶರನಿಗೆ
ಯೋಗ್ಯವಾದ॥ ವರಕನ್ಯಾರತ್ನವೆಲ್ಲಿದ್ದರು ತರಿಸಿ ನಾ।
ಭರದಿ ಲಗ್ನವ ಮಾಳ್ಪೆನು ॥ ೭ ॥

ಕೃಷ್ಣ– ಮದ್ದಾನೆಯಂತೆ ಹೆಜ್ಜೆಯಿಡುವ ಪ್ರಾಣಕಾಂತೆಯೆ! ಸುಮ್ಮನೆ ಸಂದೇಹಪಡುತ್ತಾ ನನ್ನೀ ಸಾಮರ್ಥ್ಯವನ್ನು ಉಪೇಕ್ಷಿಸಬೇಡ. ಸ್ತ್ರೀಯರಾದವರು ಪುರುಷರ ಕಾರ್ಯಕ್ಷೇತ್ರದ ನೆಲೆಯನ್ನು ಹೇಗೆ ಬಲ್ಲರು? ಆದ್ದರಿಂದ

ಯಾವ ವಿಚಾರವನ್ನೂ ತಂದುಕೊಳ್ಳದೆ ಅಂತಃಪುರದಲ್ಲಿಯೇ ಕಾಲಕಳೆಯುತ್ತಿರು. ನಾನು ಹೇಳಿದ ಅವಧಿಯಲ್ಲಿ ಪಂಚಾಸ್ತ್ರನಿಗೊಪ್ಪುವ ನಾರೀರತ್ನವನ್ನು ತರಿಸಿ ವಿವಾಹ ನಡೆಸುವೆನು. ಅಂತಹ ಲಕ್ಷಣೋಚಿತವಾದ ಕನ್ನಿಕೆಯು ಎಲ್ಲಿಯೋ ಇರಬಹುದು. ಒಟ್ಟಾರೆ ಮದುವೆ ನಡೆದರೆ ಸಾಕಲ್ಲವೆ?

ಪದುಮನಾಭನೆಕೇಳು ನೀನುಡಿದವಧಿಯೊಳ್। ಮದುವೆಯು
ಮಾಡದಿರೇ ॥ ಪದಿನಾರು ಸಾವಿರ ಸತಿಯರೊಡನೆ ನಿಮ್ಮ।
ಪದವಗಲುವೆನೆಂದಳು ॥ ೮ ॥

ರುಕ್ಮಿಣಿ– ತಾವು ದೊಡ್ಡ ಮಹಾನುಭಾವರು. ಬ್ರಹ್ಮದೇವನು ಹುಟ್ಟಿದ ಕಮಲವೇ ನಾಭಿಯಾಗುಳ್ಳ ಜಗತ್ಕರ್ತರು. ನುಡಿದಂತೆ ನಡೆಯುವ ಸತ್ಯಸ್ವರೂಪರು. ಆದ್ದರಿಂದ ಮನ್ಮಥನ ವಿವಾಹವನ್ನು ತಾವು ಹೇಳಿದ ಅವಧಿಯಲ್ಲಿಯೇ ನೆರವೇರಿಸುವಿರೆಂದು ನಂಬಿಕೊಳ್ಳುತ್ತೇನೆ. ಆದರೆ ಯಾವುದೇ ಕಾರಣದಿಂದ ಮದುವೆಯಾಗದಿದ್ದರೆ ನಾನೂ ಮತ್ತು ಹದಿನಾರು ಸಾವಿರ ಸ್ತ್ರೀಯರು ಕೂಡಾ ನಿಮ್ಮ ಸೇವೆಯಿಂದ ದೂರವಾಗುವುದು ನಿಶ್ಚಯ. ಇದಕ್ಕೇನು ಹೇಳುತ್ತೀರಿ?

ಕೃಷ್ಣ– ಅಂತಹ ಸಂದರ್ಭವು ಎಂದೂ ನಡೆಯಲಾರದು.

ತರುಣಿಯಂದುದ ಕೇಳಿ ಗೋವಿಂದಖ್ಯಾತಿಯೊ। ಳರುಹಿದ
ನವಳೊಡನೆ ॥ ಭರದಿ ಲಗ್ನವಮಾಡದಿರೆ ನಿಮ್ಮೆಲ್ಲರ ಸ್ನೇಹ।
ತೊರೆದಗಲುವೆನೆಂದನು ॥ ೯ ॥

ಕೃಷ್ಣ– ಮನೋಹರಿ! ಸರಿಯಾದ ಮಾತುಗಳನ್ನೇ ಆಡಿದೆ. ನನ್ನ ಸೇವೆಯನ್ನು ನೀವೇ ಬಿಡುವ ಬದಲು ನಾನಾಗಿಯೇ ಬಿಟ್ಟು ಬಿಡುವೆನು. ಆದರೆ ಅಂತಹ ಸಂದರ್ಭವನ್ನು ನಾನು ಬಯಸುವವನಲ್ಲ. ಯೋಗ್ಯತೆಯೂ ಸಾಮರ್ಥ್ಯವೂ ಇರುವಾಗ ಪುರುಷಪ್ರಯತ್ನವನ್ನು ಮಾಡಿಯೇ ತೀರುವೆನು. ಯಾವ ಕಾರಣದಿಂದಲೋ ನನ್ನೀ ಪ್ರಯತ್ನವು ನಿರರ್ಥಕವಾದರೆ ನಮ್ಮೊಳಗಣ ಸ್ನೇಹ ಪಾಶವು ಹರಿದು ಹೋಯಿತೆಂದೂ ಇದನ್ನೇ ಕೊನೆಯ ದರ್ಶನವೆಂದೂ ತಿಳಿ.

ರುಕ್ಮಿಣಿ– ಎಲ್ಲವೂ ದೈವೇಚ್ಛೆ; ಈಗ ಹೋಗುವೆನು.

ವಾರ್ಧಿಕ

ಧರಣಿಪತಿ ಲಾಲಿಸೈ ಮುರಮಥನನೀ ತೆರದಿ। ತರುಣಿಯರೊ
ಳತಿ ಪಂಥವೆರಸಿ ವಿನಯದಿ ಸ್ವಾದು। ತರದ ಭೋಜನ
ಗೈದು ಹರುಷದಲಿ ಸ್ಮರಿಸಿದನು ತ್ವರಿತದಿಂ ವಿನತೆಸುತನ ॥
ಅರಿವುತವನಾಕ್ಷಣದಿ ಬರೆ ವಾಸುದೇವನುಪ ಚರಿಸು
ತಾತನ ಪೆಗಲನಿರದೇರಿ ಲಗ್ನವಂ। ವಿರಚಿಸುವೆನೆಂದೆನುತ
ಧರಣಿಪರ ಭವನಗಳನರಸುತಲಿ ನಡೆತಂದನು ॥ ೧ ॥

ಕೃಷ್ಣ- ಇನ್ನು ತಡಮಾಡಕೂಡದು. ಈಗಲೇ ಕಾರ್ಯಕ್ಷೇತ್ರಕ್ಕಿಳಿಯ ಬೇಕಾಗಿದೆ. ರುಕ್ಮಿಣೀದೇವಿಗೆ ಆ ತೆರದ ಪಂಥವಿರುವಾಗ ಸರ್ವಶಕ್ತನಾದ ನಾನೇನು ಸುಮ್ಮನಿರುವೆನೇ? ಹೂಡಿದ ಪ್ರತಿಜ್ಞೆಯನ್ನು ಪೂರೈಸಿಯೇ ಬಿಡುವೆನು. ಅದಕ್ಕಾಗಿ ಮೃಷ್ಟಾಹ್ನ ಭೋಜನವನ್ನು ತೀರಿಸಿದಂತಾಯಿತು. ದೇಶ ದೇಶಗಳ ಸಂಚಾರಾರ್ಥವಾಗಿ ಹೊತ್ತು ತಿರುಗುವ ಗರುಡದೇವನನ್ನೂ ಮನಸ್ಸಿನಲ್ಲಿ ಸ್ಮರಿಸಿದೆ. ಇನ್ನೇನು? ಗರುಡನೂ ಬಂದುದಾಯಿತು. ಓಹೊ! ಪಕ್ಷಿರಾಜನೆ! ನಮ್ಮ ಕುಮಾರನಾದ ಕಂದರ್ಪನಿಗೆ ಮದುವೆಯಾಗಬೇಕಾಗಿದೆ. ಯೋಗ್ಯವಾದ ಸ್ತ್ರೀರತ್ನವನ್ನು ಹುಡುಕುವುದಕ್ಕಾಗಿ ಈಗಲೇ ಹೋಗಬೇಕಾಗಿದೆ. ನೀನೂ ಸಿದ್ಧನಾಗಬೇಕು.

ರಾಗ- ಮಾರವಿ; ತಾಳ- ಏಕ.

ಧರಣಿಪ ಕೇಳೈ ಹರಿಯಿಾಪರಿಯಲಿ ಭರದಿಂ ಗರುಡನಲಿ ॥
ಹರುಷದಿ ಕುಳಿತಾಕ್ಷಣ ನಡೆದನುತಾ। ಧರ ಧುರ ಶೌರ್ಯದಲಿ ॥ ೧ ॥
ಅಂಗ ವಂಗ ಕಳಿಂಗ ಕರ್ಣಾಟಕ। ವಿಂಗಡದೆರ ಮನೆಯ ॥
ಹಿಂಗದೆ ತಾನೀ ಪರಿಯೊಳಗರಸಿದ। ಸಂಗಡಿಗರು ಸಹಿತ ॥ ೨ ॥

ಕೃಷ್ಣ- ವಾಯು ದೇವನಿಗಿಂತಲೂ ಮುಂದಾಗಿ ಸಾಗುವ ಪಕ್ಷಿರಾಜನ ಗಮನವೆಂದರೇನು? ತಾನು ತಾನಾಗಿ ಬಂದು ಸೇರಿದ ನಮ್ಮ ಯಾದವರ ಸಂಭ್ರಮಗಳೆಂದರೇನು? ಈಗಾಗಲೇ ಗರುಡನನ್ನೇರಿ ಇಡೀ ವಿಶ್ವವನ್ನೇ ಸುತ್ತಿಬಿಡುವುದು ಖಂಡಿತ ॥ ೧ ॥

ಏನಾಶ್ಚರ್ಯವಿದು. ಅಂಗ, ವಂಗ, ಕಳಿಂಗ ಮೊದಲಾದ ಹಲವು ದೇಶಗಳ ರಾಜಮಂದಿರಗಳನ್ನು ಹೊಕ್ಕರೂ ನಮಗೊಪ್ಪುವ ಕನ್ನಿಕೆಯೇ ದೊರಕಲಿಲ್ಲವಲ್ಲ ॥ ೨ ॥

ಬಂದನು ನಾನಾ ದೇಶದ ರಾಜರ । ಮಂದಿರವನು ಕಳೆದು ॥
ಹೊಂದದೆ ಕಾರ್ಯವು ಮುಂದಕೆ ಬರುತಿರೆ। ಸಂದುದುದಿನವಾರು॥೩॥

ಕೃಷ್ಣ- ಆರಂಭದಲ್ಲಿ ನಿರಾಶೆಯಿದ್ದರೂ ಆಗಾಗ ಸಂಭವಿಸಿದ ಕಾರ್ಯೋತ್ಸಾಯದಿಂದ ಎಷ್ಟೋ ಅರಮನೆಗಳನ್ನು ಸುತ್ತಿದೆನು, ಎಲ್ಲಿನೋಡಿದರೂ ಕಂದರ್ಪನಿಗೊಪ್ಪುವ ಕನ್ನೆಯರೇ ಕಾಣಲಿಲ್ಲ. ಮತ್ತೂ ಮತ್ತೂ ಹುಡುಕೋಣವೆಂದು ಪ್ರಯತ್ನಪಡುತ್ತಾ ಲೆಕ್ಕ ಹಾಕಿ ನೋಡಿದರೆ ಆರು ದಿವಸಗಳೂ ಸಂದು ಹೋದುವು, ಏನು ಮಾಡೋಣ? ನಾನು ಮಾಡಿದ ಪ್ರತಿಜ್ಞೆಯೇ ವ್ಯರ್ಥವಾಯಿತೆಂದು ಭಾಸವಾಗುತ್ತದೆ.

ಇಂತೀ ಪರಿಯಲಿ ಹುಡುಕುತ ಬರೆ ಶ್ರೀ। ಕಾಂತನು ಮನ್ಮನಗಿ॥
ಎಂತೀ ಕೆಲಸವು ಫಲಿಸುವುದೆನುತಲಿ। ಚಿಂತಿಸಿದನು ಮನದಿ ॥

ಕೃಷ್ಣ- ಅಯ್ಯೋ ಶಿವನೇ! ಸಮಯವು ವ್ಯರ್ಥವಾಯಿತೆಂದೂ ಪ್ರಯತ್ನಕ್ಕೆ ಫಲ ಸಿಗಲಿಲ್ಲವೆಂದೂ ಸುಮ್ಮನೇ ಕುಳಿತಿರುವುದು ಮನುಷ್ಯತ್ವವಲ್ಲ. ಈ ದೃಷ್ಟಿಯಲ್ಲಿ ಎಷ್ಟು ಹುಡುಕಿದರೂ ವ್ಯರ್ಥವಾಯಿತಲ್ಲಾ. ಹೀಗಾದರೆ ನನ್ನೀ ಕೆಲಸವು ಪೂರೈಸುವುದು ಹೇಗೆ? ಇರಲಿ! ಈ ವಿಚಾರವನ್ನು ನನ್ನಲ್ಲಿ ನಾನೇ ನಿಶ್ಚಯಿಸಿಕೊಳ್ಳುವೆನು.

ಸಾಂಗತ್ಯ; ರೂಪಕ-- ತಾಳ.

ಹರಹರ ಪಟ್ಟದರಸಿ ರುಕ್ಮಿಣಿಯೊಳೀಕೆ। ಬರಿದೆ ಪಂಥವನೆಸಗಿದೆನು॥
ಸ್ಮರಗೆ ವಿವಾಹವ ವಿರಚಿಸಲಾರದೀ। ಪರಿಯಿಂದ ತೊಳಲುವುದಾಯ್ತು॥

ಕೃಷ್ಣ- ಪರಮೇಶ್ವರನೇ! ಎಂತಹ ಸಂಕಷ್ಟವನ್ನು ತಂದುಕೊಂಡೆನು. ರುಕ್ಮಿಣೀದೇವಿಯಲ್ಲಿ ಏತಕ್ಕಾಗಿ ಪಂಥ ಕಟ್ಟಿದೆನು. ಈಗ ವಿಮರ್ಶಿಸುವಾಗ ಆ ರೀತಿಯಲ್ಲಿ ಮಾತು ಕೊಡಬಾರದಿತ್ತು. ಎಂಟೇ ದಿನಗಳಲ್ಲಿ ಮನ್ಮಥನ ಲಗ್ನ ನಡೆಸುವೆನೆಂದು ಮಾತುಕೊಟ್ಟು, ಅಂತಹ ಶುಭಕಾರ್ಯವನ್ನು ನಡೆಸದೆ ಸುಮ್ಮನೆ ಕಷ್ಟಪಡುವಂತಾಯಿತಲ್ಲಾ!

ಉದಯವಾಗಲು ನಾಳೆ ಸತಿಯರಗಲುವರೀ।
ವಿಧವ ನಿನ್ನಾರೊಳು ಪೇಳೆ ॥ ವಿಧಿವಶವಲ್ಲದೆ
ಬೇರಿಲ್ಲವೆನುತಲಿ। ಮದನಜನಕನಳಲಿದನು ॥ ೨ ॥

ಕೃಷ್ಣ- ಲೋಕಬಾಂಧವನಾದ ಸೂರ್ಯನಾರಾಯಣನು ನಾಳೆಬೆಳಗ್ಗೆ

ಮೂಡಿ ಬರುವುದೇ ತಡ. ರುಕ್ಮಿಣಿದೇವಿಯು ಹದಿನಾರು ಸಾವಿರ ಸ್ತ್ರೀಯರೊಡನೆ ತೊಲಗಿ ಹೋಗುವಳು, ಅದರಂತೆ ನಾನು ಕೂಡಾ ಅವರನ್ನು ಬಿಟ್ಟು ಬೇರೆಯೇ ಇರಬೇಕಾಗುತ್ತದೆ. ಇದಲ್ಲವೇ ವಿಧಿಯ ವೈಚಿತ್ರ್ಯ ಈ ಅವಸ್ಥೆಯನ್ನು ಯಾರಲ್ಲಿ ಹೇಳಲಿ? ಹೇಳಿದರೂ ಕೇಳುವವರಾರು?

ನರಲೋಕದವರಿಂಗೆ ಹರಿಯುನಾನೆಂದೆಂಬ। ಬಿರುದ
ತೋರಿಸಲವತರಿಸಿ॥ ಪರರಿಗೇನೊಂದುಪಕಾರ ಗೈಯ್ಯದರಿಂದ।
ಲರಸುವುದಾಯ್ತು ಕನ್ನಿಕೆಯ ॥ ೩ ॥

ಕೃಷ್ಣ– ನನ್ನೀ ಅವತಾರವನ್ನು ಲೋಕವೆಲ್ಲ ತಿಳಿದಿದೆ. ಸಾಕ್ಷಾತ್ ವಿಷ್ಣುವೆಂದು ಕೊಂಡಾಡುವವರಿದ್ದಾರೆ. ಆದರೇನಾಯಿತು? ಬಹಳ ಮಂದಿಗಳ ಕಷ್ಟಕ್ಕಾಗಿ ನೆರವಾಗುತ್ತಿದ್ದರೆ ಈ ದುರ್ದಶೆಯು ಪ್ರಾಪ್ತವಾಗುತ್ತಿರಲಿಲ್ಲ. ಆದುದರಿಂದ ಯಾವ ಪ್ರಯೋಜನವನ್ನೂ ಉಂಟುಮಾಡದ ಕಾರಣ ಯೋಗ್ಯ ಕನ್ನಿಕೆಯನ್ನ ಹುಡುಕುವುದು ಕಷ್ಟವಾಗಿರಬೇಕು. ಇದಕ್ಕಾಗಿ ಯಾರನ್ನು ಕರೆಯಲಿ? ಯಾರು ಸಹಾಯಕ್ಕಾಗಿ ಬರುವವರಿದ್ದಾರೆ.

ದುರುಳ ದುಶ್ಶಾಸನ ದ್ರೌಪದಿಗಪಮಾನ। ವಿರಚಿಸಲಾಗ
ಮಾನಿನಿಯು॥ ಸೆರಗನ್ನು ಪಿಡಿದೆಳೆಯಲು ಸಭೆಯೊಳಗೆನ್ನ।
ಸ್ಮರಿಸಿದಳಧಿಕ ಭಕ್ತಿಯಲಿ ॥ ೩ ॥

ಕೃಷ್ಣ– ಈಗ ತಿಳಿಯಿತು. ನನ್ನಿಂದ ಉಪಕಾರ ಪಡೆದವರೂ ಇದ್ದಾರೆ. ಪ್ರಾಣಕ್ಕಿಂತ ಮಿಗಿಲಾದ ಮಾನರಕ್ಷಣೆ ಮಾಡಿದ ದೊಡ್ಡ ಸಹಾಯವೂ ಇದೆ. ಅಂದರೆ ಪಾಂಡವರ ಧರ್ಮಪತ್ನಿಯಾದ ದ್ರೌಪದಿಯನ್ನು ಕೌರವರ ಸಭಾ ಮಧ್ಯಕ್ಕೆ ಎಳೆದುತಂದು ದುಷ್ಟ ದುಶ್ಶಾಸನನು ವಸ್ತ್ರಾಪಹಾರದ ಯತ್ನ ನಡೆಸಿದ್ದನು. ಆಗ ಅವಳು ಭಯಭೀತಳಾಗಿ ಕೃಷ್ಣಾ! ಎಂದು ಮೊರೆಯಿಟ್ಟು ಸುರಕ್ಷಿತಳಾಗಿರುತ್ತಾಳೆ.

ಸೀರೆಗಕ್ಷಯವಿತ್ತು ಸಲಹಿದೆನಿಂದೆಮ್ಮ। ಮಾರನಲಗ್ನ
ಕೆನ್ನಿಂದ॥ ತೀರದೆ ತೊಳಲಿದೆ ನೀದಾಕೆಬರಲೆಂದು।
ವಾರಿಜಾಕ್ಷಿಯ ಸ್ಮರಿಸಿದನು ॥ ೪ ॥

ಕೃಷ್ಣ– ಎಂತಹ ಘಟನೆಯದು. ದ್ರೌಪದಿಯು ಮೊರೆಯಿಡುತ್ತಿದ್ದಾಗ ಅವಳುಟ್ಟ ಸೀರೆಯೇ ಅಕ್ಷಯವಾಗಲೆಂದು ಅನುಗ್ರಹ ಮಾಡಿದ್ದೆ. ಆ ಉಪ

ಕಾರವನ್ನು ಅವಳೆಂದಿಗೂ ಮರೆಯಲಾರಳು. ಅದುಕಾರಣ ಅವಳನ್ನೇ ಸ್ಮರಿಸಿಕೊಳ್ಳುತ್ತೇನೆ. ದ್ರೌಪದಿಯೇ! ಬಾರಮ್ಮಾ, ಮಾರನಿಗೊಪ್ಪುವ ಕನ್ಯಾಮಣಿಯನ್ನು ಕಂಡು ಹುಡುಕುವುದಕ್ಕಾಗಿ ತುಂಬಾ ಆಯಾಸಪಟ್ಟೆನು. ಸಫಲವಾಗಲಿಲ್ಲ. ನೀನಾದರೂ ಬಂದು ನನ್ನ ಸತ್ಯವನ್ನು ಪೂರೈಸಿಕೊಡಬೇಕಾಗಿ ಕೇಳುತ್ತಿದ್ದೇನೆ.

ಭಾಮಿನಿ.

ತಂಗಿ ದ್ರೌಪದಿ ಕೋಮಲಾಂಗಿಯೆ। ಮಂಗಲಾತ್ಮಕಿ ಮಧುರಭಾಷಿಣಿ।
ಹಿಂಗದೆನ್ನಯ ಮಾನವನು ನೀಕಾಯಬೇಕೆಂದು ॥
ಅಂಗಜನಪಿತನಿಂತು ಧ್ಯಾನಿಸೆ। ತುಂಗ ಕುಚಯುಗೆ ದ್ರುಪದನಂದನೆ
ಸಿಂಗರದಿ ಮಲಗಿರಲು ಪಾರ್ಥಸಮೇತ ಸಜ್ಜೆಯೊಳು ॥ ೧ ॥

ಕೃಷ್ಣ– ತಂಗಿಯೇ ! ದ್ರುಪದ ಪುತ್ರಿಯೇ! ಮೃದುವಾದ ಅಂಗಾಂಗಗಳಿಂದಶೋಭಿಸುವ ಮಾಂಗಲ್ಯ ಮೂರ್ತಿಯೇ! ಇದೋ! ನಿನ್ನನ್ನು ಪ್ರೇಮಪೂರ್ವಕವಾಗಿ ಕರೆಯುತ್ತಿದ್ದೇನೆ. ಬೇಗನೆ ಬಂದು ನನ್ನೀ ಮಾನವನ್ನು ಕಾಪಾಡಬೇಕು. ಈ ಕೆಲಸಕ್ಕೆ ನೀನೇ ಸಮರ್ಥಳೆಂದು ಮನಸಾ ನಂಬಿದ್ದೇನೆ.

ರಾಗ– ಸೌರಾಷ್ಟ್ರ। ತಾಳ– ತ್ರಿವುಡೆ.

ಇತ್ತ ಗಜಪುರದೊಳಗೆ ದ್ರೌಪದಿ। ಯರ್ತಿಯಲಿ ಸರಿರಾತ್ರಿಯೊಳಗೆ।
ಚಿತ್ತರ್ಜ ಸಜ್ಜಾಗೃಹದೊಳಿರಲಾ। ಹೊತ್ತಿನಲ್ಲಿ ॥ ೧ ॥

ದ್ರೌಪದಿ– ಈ ರಾತ್ರಿಯಲ್ಲಿ ಪಾರ್ಥ ಮಹಾಶಯನೊಡನೆ ಸಜ್ಜೆಮನೆಯನ್ನು ಸೇರಿ ನಿದ್ರೆಯಲ್ಲಿರುವಾಗ ಯಾರದೋ ಧ್ವನಿ ಕೇಳುತ್ತಿದೆ. ಫಕ್ಕನೆ ಎದ್ದು ನೋಡಿದರೆ ಯಾರೂ ಕಾಣಿಸುವುದಿಲ್ಲ. ಧರ್ಮ, ಭೀಮಾದಿಗಳು ನಿದ್ರೆಯಲ್ಲಿರುವರು. ಮತ್ತೆ ಯಾರು ಕರೆದಾರು. ಲಕ್ಷ್ಯ ಕೊಟ್ಟರೆ ಆ ಧ್ವನಿಯಂತೂ ಅಪರಿಚಿತವಲ್ಲ. ಅಣ್ಣ ಕೃಷ್ಣನದೇ ಇರಬೇಕು. ಛೇ, ಛೇ! ನನಗೆಲ್ಲಿ ಹುಚ್ಚು? ಈ ರಾತ್ರಿಯಲ್ಲಿ ಏಕೆ ಕರೆದಾನು? ಅದೊಂದೂ ಅಲ್ಲ. ಆತನ ಮಹಿಮಾತಿಶಯವನ್ನು ಸ್ಮರಿಸುತ್ತಾ ಮಲಗಿದ್ದುದರಿಂದ ಹಾಗೆಯೇ ಕೇಳಿಸಿರಬೇಕು. ಆಹಾ! ಶ್ರೀ ಲೋಲನ ದಯೆಯಿಲ್ಲದಿದ್ದರೆ ಈ ವೈಭವವು ನಮಗೆಲ್ಲಿ ಬಂತು? ಕೌರವರ ವಿನಾಶನವೂ ಆಗುತಿತ್ತೇ? ಅಂತಹ ದಯಾಘನನನ್ನು ಹೇಗೆ ಮರೆಯಲಿ? ಹಸ್ತಿನಾವತಿಯ ಮಹಾರಾಣಿಯಾದರೂ ಎಲ್ಲ ಅವಸ್ಥೆ

ಗಳಲ್ಲಿ ತುಂಬಿಕೊಂಡಿರುವನು. ಹೀಗಿರುವಾಗ ಈ ಸಮಯದಲ್ಲಿ ಯಾರಾದರೂ ಕರೆಯುವವರಿದ್ದಾರೆಯೇ? ಆದರೂ ಸ್ವಲ್ಪ ಹೊತ್ತು ಪರೀಕ್ಷಿಸಿ ನೋಡುವೆನು.

ಮತ್ತೆ ಹರಿನುಡಿ ಶಬ್ದವಾಗಲು। ಭಕ್ತಿಯಲಿ ಪಾಂಚಾಲೆ ಕೇಳ್ದಿ।
ಚ್ಚರ್ತು ತಾನಾಲಿಸಿದಳತ್ಯಾ। ಸಕ್ತಿಯಿಂದ ॥ ೨ ॥

ದ್ರೌಪದಿ– ಈಗೀಗ ಸ್ಪಷ್ಟವಾಗಿ ಕೇಳಿಸುತ್ತಿದೆ. ಕೃಷ್ಣಸ್ವಾಮಿಯು ಕರೆಯೆಂಬುದಕ್ಕೆ ಸಂದೇಹವಿಲ್ಲ. ಆ ಪ್ರೇಮಪೂರ್ಣವಾದ ಮನೋಹರ ಧ್ವನಿಯು ನನ್ನೀ ಹೃದಯದ ಮಬ್ಬನ್ನು ಹೊಡೆದೋಡಿಸಿ ಬಿಟ್ಟಿತು. ಮತ್ತೂ ಮತ್ತೂ ಆಸಕ್ತಿಯಿಂದ ಕಿವಿಕೊಟ್ಟು ಕೇಳಿದರೆ ಈ ಹೃದಯದಲ್ಲಿ ಭಕ್ತಿರಸವೆಂಬುದು ಉಕ್ಕುತ್ತಾ ಬರುತ್ತಿದೆ.

ಅಣ್ಣನೆಂಬುದ ತಿಳಿದು ಮತ್ತಾ। ಬಣ್ಣಿಸುತ ಮಾನಿನಿಯು ಮನದಲಿ
ಮಿಣ್ಣನಾಲೋಚನೆಯ ಮಾಡಿದ। ಳಿನ್ನು ತಾನು ॥ ೩ ॥

ದ್ರೌಪದಿ– ಕೃಷ್ಣಾ! ಈ ವಾತಾವರಣವು ಅಂಧಕಾರದಿಂದ ತುಂಬಿದೆ. ನೀನು ಮಾತ್ರ ನನ್ನ ಮನಸ್ಸಿನ ಮನೆಯಲ್ಲಿ ನಂದಾದೀಪದಂತೆ ಬೆಳಗುತ್ತಿರುವೆ ತಂಗಿಯೇ! ಬಾ ಬಾ ಎಂದು ಪ್ರೀತಿಯಿಂದ ಕರೆಯುತ್ತಿರುವೆ. ಈಗೇನು ಮಾಡಲಿ? ಯಾವ ಮಾರ್ಗವೂ ಕಾಣುವುದಿಲ್ಲ. ಕೂಗಿ ಕರೆಯುವವನು ಕೃಷ್ಣನೆಂಬ ನಿಶ್ಚಯವಾದರೂ ಹೊರಡಲಾರದ ಸಂಕಟವೇ ಒದಗಿ ಬಿಟ್ಟಿದೆ. ಅಯ್ಯೋ ಕೃಷ್ಣನೇ! ಯಾವ ದಾರಿ ಹೇಳು.

ಪಾರ್ಥ ನಿದ್ರಾಸಕ್ತನಾಗಿಹ। ರಾತ್ರಿಯೊಳಗಾನೆಬ್ಬಿಸಲು ಬಲು।
ಧೂರ್ತೆಯೆನ್ನದೆ ಬಿಡನು ಕೋಪೋ। ದ್ರಿಕ್ತನಾಗಿ ॥ ೪ ॥

ದ್ರೌಪದಿ– ಪ್ರಾಣ ಕಾಂತನಿಗೆ ತಿಳಿಸುವುದು ಹೇಗೆ? ಬೇಗನೆ ಎಚ್ಚರವಾಗುವ ಲಕ್ಷಣವೂ ಇಲ್ಲ, ಮೈ ಮುಟ್ಟಿ ಎಬ್ಬಿಸುವಾ ಎಂದರೆ ನಿದ್ರಾಭಂಗವಾಗಬಹುದು. ಏನೇನೋ ನಿಂದಿಸಬಹುದು. ಸಿಟ್ಟಿನಿಂದಾಗಿ ಧಿಟ್ಟೆಯೆನಬಹುದು. ಇದಕ್ಕೆ ಯಾವ ಮಾರ್ಗವೋ ತಿಳಿಯದಾದೆನಲ್ಲಾ! ಇಂತಹ ವಿಷಾದದಲ್ಲಿ ಸಿಲುಕಿ ಬೀಳದ ಹಾಗೆ ಮಾಡಣ್ಣ!

ಅಣ್ಣನೆನ್ನನು ಕರೆವನೀಗಳು। ಮನ್ನಿಸುತ ನಾ ಪೋಗದಿರೆ ಮು।
ಕ್ಕಣ್ಣಸಖ ಖತಿಗೊಳುವನೆಂವಳ। ಖಿನ್ನಳಾಗಿ ॥ ೫ ॥

ದ್ರೌಪದಿ- ಅಣ್ಣನು ಇನ್ನೂ ಇನ್ನೂ ಕರೆಯುತ್ತಿರುವನು. ಹೀಗೆ ನಂಬಿ ಕೆಯಿಟ್ಟು ಕರೆಯುತ್ತಿರುವಾಗ, ತಾನಾಗಿ ಸೇವೆ ಮಾಡಲು ಶಕ್ತಳಾಗಿರುವಾಗ ಸುಮ್ಮನೆ ಕುಳಿತುಕೊಂಡರೆ ಹೇಗಾದೀತು? ತಂದೆಗೆ ಸಮಾನನೂ ಮುಕ್ಕಣ್ಣನಿಗೆ ಪರಮ ಮಿತ್ರನೂ ಆದ ಶ್ರೀ ಕೃಷ್ಣನು ಸಿಟ್ಟಾಗದಿರುವನೇ? ಹೀಗಾಗಿ ಒಂದು ಕಡೆಯಲ್ಲಿ ಪತಿಭಕ್ತಿ, ಇನ್ನೊಂದು ಕಡೆಯಲ್ಲಿ ದೈವಭಕ್ತಿ, ಈ ಎರಡರ ಮಧ್ಯದಲ್ಲಿ ಸಿಕ್ಕಿಬಿದ್ದು ನೊಂದುಹೋದೆನು; ಇದಕ್ಕೆ ತಕ್ಕ ಉಪಶಾಂತಿಯನ್ನು ದೇವರೇ ಬಲ್ಲ.

ಆದುದಾಗಲೆನುತ್ತ ಪೊರಟು-ವಿ। ನೋದದಲಿ ನಡೆತಂದಳಂಸುತ
ಮಾಧವನ ನರಸುತ್ತ ದ್ರೌಪದಿ। ಸಾದರದೊಳು ॥ ೬ ॥

ದ್ರೌಪದಿ- ಖಂಡಿತ. ನಾನಿನ್ನು ಕಾಲಹರಣ ಮಾಡಲಾರೆ. ಜಗದೀಶ್ವರನೇ ಕರೆಯುತ್ತಿರುವಾಗ ಈ ಸಂದೇಹಗಳೇಕೆ? ಆತನು ಸರ್ವ ಶಕ್ತನೂ ಜೀವಿಗಳ ಸುಖ ದುಃಖಕ್ಕೆ ನಿಯಾಮಕನೂ ಆಗಿರುವನು. ಆದ್ದರಿಂದ ನಮ್ಮವರಿಗೆ ಕೋಪವಾಗಲಿ, ದುಃಖವಾಗಲೀ ಅದನ್ನೇ ಚಿಂತಿಸುವ ಕಾಲ ಬೇರಿದೆ. ಈಗಲೇ ಅಣ್ಣನಿರುವ ಸ್ಥಳವನ್ನು ಹುಡುಕುತ್ತಾ ಹೋಗುವೆನು. ಹಾ ಕೃಷ್ಣಾ! ಕೇಶವ!

ಹರಿ ಜನಾರ್ದನ ಕೃಷ್ಣ ಕೇಶವ। ಪರಮ ಮಂಗಳಮೂರ್ತಿ ಲಕ್ಷ್ಮೀ।
ವರನೆ ಪಾಲಿಸೆನುತ್ತಲಾತನ। ಚರಣಕೆರಗೆ ॥ ೭ ॥

ಓಹೋ! ನನ್ನಣ್ಣನು ಇಲ್ಲೆ ಇರುವನು. ಸೂರ್ಯನಂತೆ ಬೆಳಗುತ್ತಾ ಇತ್ತಲೇ ನೋಡುತ್ತಿರುವನು. ಅಣ್ಣಾ! ಇಗೋ ಬಂದಿರುವೆನು. ದ್ರೌಪದಿಯು ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾಳೆ. ಕೃಷ್ಣಾ! ಜನಾರ್ದನ, ಲಕ್ಷ್ಮೀಕಾಂತನೇ ರಕ್ಷಿಸು.

ಸಾಂಗತ್ಯ। ತಾಳ- ರೂಪಕ.

ಅಡಿಗೆರಗಿದ ಸಹಭವೆಯ ಮಸ್ತಕವನ್ನು। ಹಿಡಿದೆತ್ತಿಬಳಿಕ
ಮಾಧವನು ಕಡು ಕರುಣದೊಳುಪಚರಿಸುತ್ತ ತೋಷದಿ।
ನುಡಿಸಿದನಾ ದ್ರೌಪದಿಯನು ॥ ೧ ॥

ಕೃಷ್ಣ- ತಂಗೀ ಎದ್ದೇಳು! ನಿನಗೆ ಶ್ರೇಯಸ್ಸಾಗುವಂತೆ ಆಶೀರ್ವದಿಸಿದ್ದೇನೆ. ಅಮ್ಮಾ! ನಿನ್ನನ್ನು ನೋಡಿ ಬಹಳಾನಂದವಾಯಿತು. ಯಾವ ಸಂಪ

ರ್ಭವನ್ನು ಲಕ್ಷ್ಯ ಮಾಡದೆ ಬಂದು ಬಿಟ್ಟಿಯಲ್ಲಾ! ಅದೇ ಸಾಕು ನನಗೆ.

ಬಂದೆಯಾತಂಗಿ ನಿನ್ನಯ ಪುರುಷರುಸುಖ। ದಿಂದಲಿರುವರೆ
ಮಂದಿರದಿ॥ ಚಂದದಿಂದಿಲ್ಲಿಗೆಯ್ತಂದುದು ಲೇಸಾಯಿ।
ತೆಂದು ಶ್ರೀ ಹರಿಯು ಪೇಳಿದನು ॥ ೨ ॥

ಕೃಷ್ಣ– ಸಹೋದರೀ! ಚೆನ್ನಾಯಿತು. ನೀನು ಬಂದುದನ್ನು ನೋಡಿ ನನ್ನೀ ಮನಸ್ಸು ತೃಪ್ತಿಪಟ್ಟಿದೆ. ನಿನ್ನ ಮನೆಯಲ್ಲೆಲ್ಲರೂ ಕ್ಷೇಮವಷ್ಟೇ? ಪಾಂಡವರೈವರೂ ಸುಖವಾಗಿದ್ದಾರಲ್ಲವೇ. ಕೌರವಾದಿಗಳೂ ನಿರ್ನಾಮವಾದ ಮೇಲೆ ಯಾವ ಕಷ್ಟವೂ ಬರಲಿಲ್ಲವಷ್ಟೆ!

ದ್ರೌಪದಿ– ನಿನ್ನ ಅನುಗ್ರಹವೇ ಕವಚದಂತಿರುವಾಗ ದುಃಖವೆಂದರೇ?

ಮುರಮಥನನೆ ಲಾಲಿಸವರೆಲ್ಲ ಕ್ಷೇಮಗ। ಳರಿಕೆ ಮಾಡುವೆ
ನಿನ್ನೊಳೊಂದು ॥ ಇರುಳಿನೊಳೆನ್ನನು ಸ್ಮರಿಸಿದುದೇಕೆಂದು।
ಚರಣಕೆರಗಲುಸುರಿದನು ॥ ೩ ॥

ದ್ರೌಪದಿ– ಮುರಾಸುರ ಮರ್ದನ! ಭಿನ್ನವಿಸಿಕೊಳ್ಳುತ್ತೇನೆ. ನಿನ್ನ ಕೃಪಾಕಟಾಕ್ಷವೇ ನಮ್ಮ ಮೇಲಿರುವಾಗ ಯಾವ ಸುಖಕ್ಕೂ ಲೋಪವಿಲ್ಲ. ಎಲ್ಲರೂ ಕ್ಷೇಮದಲ್ಲಿರುವರು. ಆದರೆ ಮಧ್ಯ ರಾತ್ರಿಯ ಕಾಲದಲ್ಲಿ ಹೆಣ್ಣಾದ ನನ್ನನ್ನು ಏತಕ್ಕಾಗಿ ಸ್ಮರಿಸಿದೆ. ನನ್ನಿಂದ ಆಗಬೇಕಾದ ಕೆಲಸವಾದರೂ ಯಾವುದು? ದಯೆಯಿಟ್ಟು ಹೇಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಕೃಷ್ಣ– ತಂಗೀ! ಮಧ್ಯ ರಾತ್ರಿಯ ಕಾಲವೆಂದು ನಾನೂ ಬಲ್ಲೆ. ಆದರೆ ನಿನ್ನನ್ನು ಕರೆಯದೆ ಉಪಾಯವೇ ಇಲ್ಲ.

ದ್ರೌಪದಿ– ಅದೇನಣ್ಣಾ! ಅಂತಹ ಕಷ್ಟ ನಿನಗೂ ಬಂತೇ?

ತಂಗಿ ಕೇಳಿಂಟನೆದಿನದಿವ್ಯವಾಪವ। ನಂಗಜನಿಗೆ ಮಾಳ್ಪೆನೆಂದು॥
ಅಂಗನೆ ರುಕ್ಮಿಣಿಯೊಡನೆ ಪೇಳಲು ಮತ್ತಾ।
ತುಂಗಸ್ತನಿಯು ಪೇಳ್ದಳೆನಗೆ ॥ ೪ ॥

ಕೃಷ್ಣ– ಪಾಂಚಾಲೆಯೆ! ಈ ಸಂಗತಿ ನಡೆದು ಹೆಚ್ಚು ದಿನವಾಗಲಿಲ್ಲ. ನಾನು ನನ್ನ ಸಭಾಮಂಟಪದಲ್ಲಿರುವಾಗ ಅರಸಿಯಾದ ರುಕ್ಮಿಣಿಯು ಬಂದು ನಮ್ಮ ಮಗನಾದ ಪುಷ್ಪಬಾಣನಿಗೆ ಇಷ್ಟರತನಕ ಮದುವೆ ಮಾಡಲಿಲ್ಲವೆಂದು ಆರೋಪಿಸಿದಳು. ಆಗ ನಾನು ಅದಾವ ದೊಡ್ಡ ಕೆಲಸ? ಎಂಟೇ ದಿನಗಳಲ್ಲಿ

ಮದುವೆ ನೆರವೇರಿಸುತ್ತೇನೆಂದು ವಾಗ್ದಾನ ಮಾಡಿ ಸಮಾಧಾನ ಪಡಿಸಿದೆ. ಅವಳು ಬರವಸೆ ಪಡಲಿಲ್ಲ.

ದ್ರೌಪದಿ- ಹುಡುಗನಿಗೆ ಮದುವೆ ಮಾಡಿಸುವುದು ಕಷ್ಟದ ಕೆಲಸವೆ?

ನೀನೆಂದ ತೆರದೊಳೆಂಟೇದಿನದೊಳಗೆನ್ನ। ಸೂನುಗೆ ಲಗ್ನವಾಗದಿರೆ॥
ಮಾನಿನಿಯರು ಪದಿನಾರುಸಾವಿರವೆನ್ನಾ। ಧೀನದಿಂದಗಲುವೆನೆನುತ ॥೫॥

ಕೃಷ್ಣ- ನನ್ನ ಮಾತು ರುಕ್ಮಿಣಿಗೆ ಹಿಡಿಸಲಿಲ್ಲವೇನೊ! ನೀವಂದಂತೆ ಎಂಟೇ ದಿನಗಳಲ್ಲಿ ಮನ್ಮಥನ ಲಗ್ನವಾಗದಿದ್ದರೆ ನಿಮ್ಮ ಪಾದವನ್ನು ಸೇವಿಸುತ್ತಿದ್ದ ಹದಿನಾರು ಸಾವಿರ ನಾರಿಯರೊಡನೆ ಖಂಡಿತ ತೊಲಗಿ ಹೋಗುವೆನು ಎಂದು ಭಾಷೆ ತೊಟ್ಟಳು. ತಂಗೀ ಎಂತಹ ಛಲವಾದಿಯೋ ಅವಳು!

ದ್ರೌಪದಿ–ಏನಣ್ಣಾ! ಅಷ್ಟು ಅಶಕ್ತನೇ ನೀನು? ರುಕ್ಮಿಣಿಗೆ ಪಶ್ಚಾತ್ತಾಪವಾಗುವಂತೆ ಲಗ್ನ ಮಾಡಿಸಲಾಗದೆ?

ಪಂಥವಗೈದೆ ನಾನರಿಯದೀ ಪರಿಯಿಂದ। ಸಂತೀಗ ಏನವೇಳರವಧಿ॥
ಎಂತಾದರೀಕಾರ್ಯವನು ನೀನೆ ಮುಂದೆ ನಿ। ಶ್ಚಿಂತೆಯೊಳೆಸಗಬೇಕೆಂದ ॥ ೬ ॥

ಕೃಷ್ಣ- ರುಕ್ಮಿಣಿಯೇ ಮೊದಲಾದವರು ತೊಲಗಿ ಹೋಗುವುದೇಕೆ? ಇಂತಹ ಸಣ್ಣ ಕಾರ್ಯವನ್ನು ಪೂರೈಸಲಾಗದಿದ್ದರೆ ನಾನೇ ನಿಮ್ಮಿಂದ ಬೇರೆಯಾಗುವೆನು ಎಂದು ಪಂಥ ಕಟ್ಟಿದೆ ಅದರಂತೆ ವಧುವನ್ನು ಹುಡುಕಲು ಹೊರಟು ಎಷ್ಟೋ ಕಷ್ಟಪಟ್ಟೆ. ಆದರೆ ಎಲ್ಲಿ ನೋಡಿದರೂ ಕಾಮನಿಗೆ ಸಮಜೋಡಿಯಾದ ಸುಂದರಿ ಕಾಣಸಿಗಲಿಲ್ಲ. ಇನ್ನು ಸಮಯವಾದರೂ ಉಂಟೆ? ಮಾತಿನಂತೆ ಏಳು ದಿನಗಳು ಸಂದುವು. ನಾಳೆ ಬೆಳಗಾದರೆ ಏನಾಗುವುದೋ ತಿಳಿಯದೆ ನಿನ್ನನ್ನು ಸ್ಮರಿಸಿದೆ. ತಂಗಿ! ಈ ಕಾರ್ಯವನ್ನು ನೀನೇ ನಡೆಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಉತ್ತಮ ರತ್ನವನ್ನು ಅನ್ವೇಷಿಸುವುದಕ್ಕೆ ನೀನೇ ಸಮರ್ಥಳಿರುತ್ತೀ.

ದ್ರೌಪದಿ- ಇದೇನು ಹೇಳಿದೆ? ನನಗರ್ಥವೇ ಆಗುವುದಿಲ್ಲ.

ರಾಗ- ಸುರುಟಿ; ತಾಳ-ಏಕ.

ಅಣ್ಣ ಲಾಲಿಸೆಲ್ಲ। ಪೇಳ್ವುದು-ಬಣ್ಣದ ಮಾತಲ್ಲ। ಬಣ್ಣಿಸುತೀಪರಿ
ಯಿಂದಲಿ ನುಡಿದರೆ। ಹೆಣ್ಣುನಾನು-ಕೇಳೆನ್ನಿಂದಪ್ಪುದೆ ॥೧॥

ದ್ರೌಪದಿ– ಅಣ್ಣಾ! ಇದೇನು ವಿನೋದವಾಡುವೆ? ಪರೀಕ್ಷೆಗಾಗಿ ಹೇಳಿದೆಯಾ? ನಿನ್ನ ಆ ಚಿಂತೆಯು ಹೇಗೆ ನನ್ನಿಂದ ಪರಿಹಾರವಾದೀತು? ನಾನು ಕೇವಲ ಅಬಲೆಯಾಗಿರುವಾಗ ನೀನೆಷ್ಟು ಹೇಳಿದರೂ ಧೈರ್ಯ ಬರುವುದಿಲ್ಲ. ಆದ್ದರಿಂದ ಆ ಕೆಲಸವನ್ನು ನನ್ನ ಮೇಲೆ ಹೇರುವುದು ಬೇಡ.

ಕೃಷ್ಣ– ನನಗೆ ಸಹಾಯ ಮಾಡುವ ಸಾಮರ್ಥ್ಯವು ನಿನ್ನಲ್ಲಿದೆ. ಇಲ್ಲದಿದ್ದರೆ ಭೀಮಾರ್ಜುನರನ್ನೇಕೆ ಕರೆಯಲಿಲ್ಲ?

ನಿನ್ನೊಳಗಂಗದಿರೆ। ಮೇಣದ-ನೆನ್ನೊಳು ಪೇಳುವರೇ।
ಚಿನ್ಮಯ ಮೂರುತಿ ನೀನೆಂದುದ ಕಾ।
ನಿರ್ಣಯ ಮಾತೊಂದೂರೆಯುವೆ ಕೇಳು ॥೬॥

ದ್ರೌಪದಿ– ನಿನು ಸರ್ವಜ್ಞನು. ತಿಳಿದೂ ತಿಳಿಯದವನಂತೆ ಒತ್ತಾಯ ಮಾಡಬೇಡ. ನನ್ನ ಯೋಗ್ಯತೆಯು ನಿನಗೆ ತಿಳಿದಿದೆ. ಜಗತ್ತಿನ ಜೀವಿಗಳಲ್ಲೆಲ್ಲ ತುಂಬಿರುವ ಚಿನ್ಮಯಾತ್ಮಕನೇ! ನಿನ್ನಿಂದಾಗದ ಮಹಾಕಾರ್ಯಕ್ಕೆ ನಾನೆಂದೂ ಸಮರ್ಥಳಲ್ಲ. ನಿಜವಾಗಿಯೂ ಇದು ನನ್ನಿಂದ ಸಾಧ್ಯವಾಗದ ಕೆಲಸ.

ಕೃಷ್ಣ– ಸೋದರಿ! ನಿನ್ನ ಪಾಲಿನ ಸೇವೆಗೆ ಹೀಗೇಕೆ ಅಳುಕುವೆ?
ಹರಿಯದಿದೆನ್ನಿಂದ। ಈ ಪರಿ। ಯೊರೆದರೆ ಗೋವಿಂದ।
ಹರಿ ಸರ್ವೋತ್ತಮ ನೀನೆಂದೆನುತಲಿ।
ಚರಣಕೆರಗೆ ಮುರಹರ ತಾನುಸುರಿದ ॥೩॥

ದ್ರೌಪದಿ– ಅಣ್ಣಾ! ನನ್ನ ಹೃದಯವನ್ನು ನೀನು ಬಲ್ಲೆ. ಅಸಾಧ್ಯವಾದ ಕಾರ್ಯಭಾರವನ್ನು ಹೇಗೆ ನಾನು ಹೊತ್ತುಕೊಳ್ಳಲಿ? ಸರ್ವೋತ್ತಮನೇ! ಕೋಪಿಸಬೇಡ. ಈ ಕೆಲಸವು ಸರ್ವಥಾ ನನ್ನಿಂದಾಗದು. ದಯೆಯಿಟ್ಟು ಕ್ಷಮಿಸೋಣಾಗಲಿ! ಇದೋ ನಿನ್ನ ಪಾದಕ್ಕೆ ಪ್ರಣಾಮ.

ಕೃಷ್ಣ– ಇದಲ್ಲವೇ ನಿನ್ನ ನಿಶ್ಚಯ? ಬಹಳ ಲೇಸಾಯಿತು.

ಸಾಂಗತ್ಯ, ತಾಳ-ರೂಪಕ.

ತಂಗಿ ದ್ರೌಪದಿ ಕೇಳು ಕೊರಳಕೊಯ್ಯುದಿರ್ಮಾನ।
ಭಂಗವಿಂತೆಸಗದಿರಬಲೆ॥ ಅಂಗಜನಿಗೆ ತಕ್ಕ ವಧುವನೀ
ನರಸುತ್ತ । ಹಿಂಗದೆ ಕೈಗೊಳಿಸೆನಲು ॥೧॥

ಕೃಷ್ಣ– ತಂಗಿಯೇ! ಹೀಗೇಕೆ ಹೇಳುವೆ? ನನ್ನ ಮಾನವು ನಿನ್ನಿಂದಾದರೂ ಉಳಿದೀತೆಂದು ನಂಬಿದ್ದೆ ಅಣ್ಣನ ಮಾನಭಂಗಕ್ಕೆಡೆಕೊಡಬೇಡ. ಮನ್ಮಥನಿಗೆ ಅನುರೂಪಳಾದ ವಧುವನ್ನು ನೀನೇ ಹುಡುಕಿ ತರಬೇಕಾಗಿದೆ. ಅಸಾಧ್ಯವೆಂದು ಕೊರಳು ಕೊಯ್ಯುವ ಮಾತನ್ನು ಇನ್ನಾದರೂ ಆಡಬೇಡ.

ದ್ರೌಪದಿ– ನನ್ನಿಂದಲೇ ಈ ಕಾರ್ಯ ಸಾಧ್ಯವೆಂದು ಅಷ್ಟು ವಿಶ್ವಾಸವಿದೆಯೇ? ಮನಃಪೂರ್ವಕವಾಗಿ ಹೇಳುವೆಯಾ ಅಣ್ಣಾ!

ಕೃಷ್ಣ– ಸಂದೇಹವೇನು? ಈ ಕಾರ್ಯ ನಿನ್ನಿಂದಲ್ಲದೆ ಸಾಧ್ಯವಿಲ್ಲ.

ಅಣ್ಣ ಕೇಳಿಷ್ಟು ನೀ ಪೇಳ್ವುದಾದರೆ ನಾಳೆ। ಎನ್ನಿಂದಾಗುವ
ಪ್ರಯತ್ನವನು॥ ಮಿಣ್ಣನಯ್ತೆಂದು ನಾ ಮಾಳ್ಪೆ ನಿಶ್ಚಯವದ।
ನೆಣ್ಣಿಸದಿರು ಮನದೊಳಗೆ ॥೨॥

ದ್ರೌಪದಿ– ನನ್ನ ವಿಷಯದಲ್ಲಿ ನಿನಗಷ್ಟು ಭರವಸೆಯಿದ್ದರೆ ನಾನು ಸುಮ್ಮನಿರಲಾರೆ. ಕೈಲಾದಷ್ಟು ಪ್ರಯತ್ನ ಮಾಡಿ ನೋಡುವೆನು. ಈ ಕುರಿತು ಸಂಶಯ ಪಡಬೇಡ. ನಾಳೆ ಉದಯಕ್ಕೆ ಸರಿಯಾಗಿ ಬಂದು ನನ್ನ ಪಾಲಿನ ಸೇವೆಯನ್ನು ಪೂರೈಸುವುದು ಖಂಡಿತ.

ಕೃಷ್ಣ– ಇದು ಒಂದು ಸೇವೆಯೊ? ಮರ್ಯಾದೆಯ ಪ್ರಶ್ನೆ.

ದ್ರುಪದಜೆ ನೀನಿಂತೇಕಾಡುವುದೀ ಪರಿ। ವಿಪರೀತ ಮಾತನೆನ್ನೊಡನೆ ॥
ಶಪಥಗೈದುದರಿಂದ ನೆನೆದೆನು ನಾ ನಿನ್ನ।ನಪಹಾಸ್ಯಮಾಡದಿರಿನ್ನು ॥೩॥

ಕೃಷ್ಣ ದ್ರುಪದ ಕುಮಾರಿಯೆ ! ಅಪಹಾಸ್ಯ ಮಾಡುವ ಕಾಲವಿದಲ್ಲ. ನೀನು ನಾಳೆ ಬಂದು ಸಹಾಯ ಮಾಡಿದರೂ ನನಗೇನು ಪ್ರಯೋಜನ? ಇದರಿಂದ ನನ್ನ ಪ್ರತಿಜ್ಞೆ ಭಂಗವಾದಂತೆಯೇ. ತಂಗಿಯೇ! ನನ್ನ ಭಾಷೆಯನ್ನು ಉಳಿಸುವುದಕ್ಕಾಗಿ ಈಗಲೇ ಕರೆದಿರುವಾಗ ಹೀಗೆ ಹೇಳಿ ನೋಯಿಸುವೆಯಾ? ವಿಚಾರಮಾಡಿ ಹೇಳು ನೋಡೋಣ!

ಮನ್ಮಥ ಜನಕ ಲಾಲಿಸಿಕೇಳು ನಾನೆಂಬ। ಸವ್ಯಿತ
ನುಡಿಗಳನೀಗ॥ ನಿನ್ನ ಕಟಾಕ್ಷದೊಳೀ ಕಾರ್ಯವನು ಮಾಡ।
ಲಿನ್ನೊಂದುಂಟದನು ಪೇಳುವೆನು ॥೪॥

ದ್ರೌಪದಿ– ಮನ್ಮಥ ಜನಕನೆ! ನಿನ್ನ ಮಾತುಗಳನ್ನು ಕೇಳುವಾಗ

ಮೂಕನೂ ಮಾತಾಡುವನು; ಹೆಳವನು ಪರ್ವತವೇರುವನು. ನಾನು ಈ ಕಾರ್ಯಕ್ಕೆ ಅಸಮರ್ಥಳಾಗಿದ್ದರೂನಿನ್ನ ಕೃಪಾಕಟಾಕ್ಷವು ದೊರೆತಿದ್ದರೆ ಅನುಕೂಲವಾದೀತೆಂದು ಒಪ್ಪುತ್ತೇನೆ. ಆದರೆ ನನ್ನ ರೀತಿಗೊಂದು ತೊಂದರೆ ಬರುವುದು ಬಲ್ಲೆಯಾ?

ಪಾರ್ಥ ನಿದ್ರೆಯೊಳಿರಲಯ್ತಂದೆನಿಲ್ಲಿಗೆ। ಚ್ಚರ್ತರಿನ್ನೇನ
ಮಾಡುವನೋ॥ ಕೀರ್ತಿ ನಿನ್ನದು ಕರುಣಿಪುದೆನ್ನನೆಸುಕಲೆ।
ಭಕ್ತಿಯೊಳೆರಗಿದಳಡಿಗೆ ॥

ದ್ರೌಪದಿ- ಅಣ್ಣಾ! ಈಗ ರಾತ್ರಿಯಲ್ಲವೇ? ನಾನು ನನ್ನ ಪತಿದೈವವಾದ ಪಾರ್ಥನ ಜತೆಯಲ್ಲಿ ಮಲಗಿರುವಾಗ ನಿನ್ನ ಕರೆಗೆ ಓಗೊಟ್ಟು ಬಂದೆ. ಅವರು ಎಚ್ಚೆತ್ತರೆ ಏನು ಮಾಡುವರೊ. ನನ್ನ ರಕ್ಷಣೆಯ ಭಾರವೆಲ್ಲ ನಿನ್ನನ್ನು ಹೊಂದಿಕೊಂಡಿದೆ. ಈ ಕೆಲಸದಲ್ಲಿ ಬರುವ ಯಶಸ್ಸಿಗೂ ನಿನ್ನ ಕರುಣೆಯೇ ಕಾರಣ. ಅನುಗ್ರಹಿಸೋಣಾಗಲಿ!

ಭಾಮಿನಿ

ಮುಕ್ತಿದಾತನನೆನೆವುತಧಿಕವಿ। ರಕ್ತಿಯಲಿ ದ್ರೌಪದಿಯು ಮನದಲಿ।
ಯುಕ್ತಿಯಲಿ ಮನ್ಮಥನರಸಿಯಂತಿರ್ಪ ಕನ್ನಿಕೆಯು॥
ಶಕ್ತಿಯಿಂದಲಿ ನೋಳ್ಪೆನೆನುತಲೆ। ಭಕ್ತಿಯಲಿ ಭಾವಿಸುತ ಹರಿಯನು।
ಭಕ್ತವತ್ಸಲ! ಕಾಯೊ ನೀನೆಂದೆನುತಲೆರಗಿದಳು ॥೧॥

ದ್ರೌಪದಿ- ಮೋಕ್ಷದಾಯಕನಾದ ಲಕ್ಷ್ಮೀರಮಣನ ಮಹಿಮೆಯನ್ನು ಏನೆಂದು ವರ್ಣಿಸಲಿ! ತಾನೇ ಸರ್ವ ಸಮರ್ಥ. ತನ್ನ ಮಗ ಸುಕುಮಾರನ ಮದುವೆಗೆ ಅಬಲೆಯಾದ ನನ್ನ ಸಹಾಯಕೋರುವುದು. ಇದೂ ಅವನಾಡುವ ಒಂದು ನಾಟಕವೇ! ಈ ಸಂದರ್ಭವು ನನ್ನ ಪಾಲಿಗೊಂದು ಭಾಗ್ಯವೇ ಸರಿ! ಇರಲಿ. ದೈವ ಕಾರ್ಯಕ್ಕಾಗಿ ಹೊರಡುವ ಮೊದಲೊಮ್ಮೆ ಪುನಃ ವಂದಿಸುವೆ.

ರಾಗ- ಮಾರವಿ, ತಾಳ- ಏಕ.

ಧರಣಿಪ ಕೇಳಗ್ರಜನಡಿಗೆರಗುತ। ಭರದಲಿ ದ್ರೌಪದಿಯು ॥ ಅರಸುವೆ
ತರುಣಿಯನೆನುತಾಕ್ಷಣದಲಿ। ಪೊರಟಳು ಧೈರ್ಯದಲಿ॥

ಕೃಷ್ಣ- ತಂಗೀ! ಶುಭವಾಗಲಿ. ಉದಯಕ್ಕೆ ಮುನ್ನವೇ ಮಂಗಲ ವಾರ್ತೆಯೊಂದಿಗೆ ಹಿಂದಿರುಗು.

ದ್ರೌಪದಿ- ಇನ್ನೇನು ಭಯ? ಕೃಷ್ಣ ಪರಮಾತ್ಮನಿಂದ ಉತ್ತಮ ಆಶೀರ್ವಾದಗಳನ್ನು ಪಡೆದೆ. ರತಿಯಂತಿರುವ ಕನ್ನೆಯನ್ನು ಹುಡುಕುವುದೇ ನನ್ನ ಈಗಿನ ಕಾರ್ಯ. ಆದರೆ ಅಂತಹ ಕನ್ನಿಕೆಯು ಸುಲಭದಲ್ಲಿ ದೊರಕುವುದು ಹೇಗೆ? ಒಂದೊಂದೇ ನಗರಗಳನ್ನು ತಿರುಗಿದೆ.

ತಿರುಗಿಯೆ ಹುಡುಕಲು ದಿನವೊಂದರಲೀ। ದೊರಕದು ತನಗೆಂದು॥
ಹರಿಯ ಮನದಿ ನೆನೆದಾಕ್ಷಣನೋಡುವೆ। ಸ್ಮರನಿಗೊಪ್ಪುವ ರತಿಯಾ ॥

ದ್ರೌಪದಿ- ತಿರುಗಿ ಕಾಲಕಳೆಯಲು ಸಮಯವೆಲ್ಲಿದೆ? ಸೂರ್ಯೋದಯದೊಳಗೆ ಮಾರನಿಗೊಪ್ಪುವ ಕನ್ಯಾಮಣಿಯನ್ನು ಹುಡುಕುವುದೇ ಅಣ್ಣನ ಆಜ್ಞೆ. ಹಿಡಿದ ಕೆಲಸ ಪೂರೈಸುವುದು ಕಷ್ಟಕ್ಕೆ ಬಂತಲ್ಲ! ತಂಗಿಯನ್ನು ಪರೀಕ್ಷಿಸುವುದು ಈ ರೀತಿಯೋ? ಅಣ್ಣಾ! ಕೃಷ್ಣಾ! ನೀನೇ ದಾರಿ ತೋರು.

ಧರಿಸಿಯೆ ದಿವ್ಯದೃಷ್ಟಿಯನಾಕ್ಷಣ। ಧರಣಿಪರರಮನೆಯ॥
ನಿರುಕಿಸಲದರೊಳು ಕಂಡಳು ಮತ್ತಾ। ಪುರವೊಂದನು ಜವದಿ॥

ದ್ರೌಪದಿ- ದೇವರ ದಯೆ ನನ್ನ ಮೇಲಿದೆಯೆನ್ನುವುದಕ್ಕೆ ಅನುಮಾನವೇ ಇಲ್ಲ. ನನ್ನ ಚೇತನವೂ ದೃಷ್ಟಿಯ ವೇಗವೂ ಅತಿಶಯವಾಗಿ ಹಲವಾರು ದೇಶಗಳನ್ನು ಶೋಧಿಸಿದ್ದಾಯಿತು. ನನ್ನಿಚ್ಛೆಯ ಹುಡುಗಿ ಈ ವರೆಗೆ ಸಿಗಲಿಲ್ಲವಾದರೂ ಮನಸ್ಸಿನಲ್ಲಿ ಧೈರ್ಯವಿದೆ. **ಓಹೋ ಇತ್ತ ಕಾಣುವ ಈ ಅರಮನೆ** ಇಷ್ಟರತನಕದಂತಿಲ್ಲ ಅಲ್ಲದೆ ಮೊದಲಾಗಿ ಸುಂದರಿಯೋರ್ವಳು ತೋರುತ್ತಾಳೆ. ಸಮೀಪಿಸಿ ಪರೀಕ್ಷಿಸಬೇಕಾಗಿದೆ. ಕಮಲಾಕೃತಿಯ ಮಹಾದ್ವಾರ ಕಾಣುತ್ತಿದೆ.

ಬಂದಳು ಕೇಳ್ ಕಮಲಾವತಿಪಟ್ಟಣ। ಕಂದಿನ ರಾತ್ರಿಯೊಳು॥
ಚಂದದಿ ಚರರನು ಕರೆದಿಂತೆಂದಳು। ಮಂದಗಮನೆ ಕಡೆಗೆ ॥

ದ್ರೌಪದಿ- ಇದು ಕಮಲಾವತಿ ಪಟ್ಟಣವಿರಬೇಕು. ಈ ದ್ವಾರವನ್ನು ಹೇಗೆ ಪ್ರವೇಶಿಸಲಿ? ಮಹಾರಾಜನ ದರ್ಶನವು ಹೇಗೆ ದೊರಕುವುದು? ಓ! ದ್ವಾರ ಪಾಲಕರಿರಾ! ಎದ್ದೇಳಿರಿ! ಇಲ್ಲಿ ಕೇಳಿರಿ.

ರಾಗ- ಶಂಕರಾಭರಣ, ತಾಳ-ಮಟ್ಟೆ.

ಯಾರಯ್ಯ ಬಾಗಿಲ ಕಾಯ್ವ। ಧೀರಚರರು ಪೇಳಿರಯ್ಯ।
ನಾರಿಯೋರ್ವಳ್। ಹೊರಗೆ ಬಂದ ವಾರತೆಯನು ॥೧॥

ದ್ರೌಪದಿ- ದ್ವಾರಪಾಲಕರೇ! ನನ್ನ ಮಾತುಗಳನ್ನು ಕಿವಿಗೊಟ್ಟು ಕೇಳುತ್ತೀರಾ? ರಾಜಕಾರ್ಯಕ್ಕಾಗಿ ಮಹಾದ್ವಾರವನ್ನು ಕಾಯುತ್ತಿರುವ ಸೇವಕರಲ್ಲವೇ ನೀವು? ವಿಶೇಷ ಕಾರ್‍ಯಾರ್ಥಿಯಾಗಿ ನಾರಿಯೋರ್ವಳು ಬಂದಿರುವಳೆಂದು ತಿಳಿಸಿ ಸಮ್ಮತಿ ಪಡೆದುಕೊಂಡು ಬನ್ನಿ.

ನಾರಿಯಾದರೇನು ನಮಗೆ। ಮಾರಿಯಾದರೇನು ಕಡೆಗೆ।
ಸೂರ್‍ಯ ಉದಯವಾಗದನಕ। ಯಾರು ಪೇಳ್ವರು ॥೨॥

ದ್ವಾರಪಾಲಕರು- ನೋಡ್ಲಾ! ಸುಮ್ಕೆ ಕಿರ್ಕಿರಿ ಮಾಡ್ಬೇಡ್ವೊ. ನೀ ನಾರಿಯಾಗೊ, ದೊಡ್ಮಾರೀನೆ ಆಗೊ, ನಮ್ಗೆ ಬಂದ್ ತೊಂದ್ರೇನ್. ಸೂರೋ ನಾರಾಣ್ ದೇವ್ರು ಮೂಡಿ ಮೇಲ್ಬರೋತನ್ಕ ಈ ಜಾಗಾ ಬಿಟ್ಟದ್ಲೊ ಹಾಂಗಿಲ್ಲ. ಒಡೆಗರ್ಗೆ ತಿಳ್ಸೋ ಹಾಂಗೂ ಇಲ್ಲ. ಏನೂಂತಾ ತಿಳ್ಕೊಂಡ್ಯಾ. ಅರಸ್ರು ಕಡೇವ್ರು ನಾವ್ಗೊತ್ತಾಯ್ತಾ? ನಮ್ಗೆಲ್ಲಾ ನಿಗಂಟಿನ್ದೇ ಕೆಲ್ಸ ನೊಡ್ಲಾ. ನೀನೆಲ್ಯಾದ್ರು ಹೊಗ್ಕನ್ಕಂಡ್ ಬಿಟ್ಟು ಬೆಳ್ಗಾತ್ಲೇ ಬಂದ್ಬಿಡು ತಿಳೀತಾ?

ದ್ರೌಪದಿ- ಅಯ್ಯಾ ಭಟರೇ ತಾಳಿ! ಅವಸರದ ಕೆಲಸದಿಂದ ಬಂದಿದ್ದೇನೆ. ನಿಮ್ಮ ಕೆಲಸವನ್ನು ನಾನು ದೂಷಿಸಿಲ್ಲ. ನನ್ನ ಕೆಲಸವಾಗಬೇಕು ಅಷ್ಟೆ.

ದ್ವಾ. ಪಾ- ಎಲಾ ಇವ್ಳ? ಅಯ್ಯಾ, ಆಪ್ರು ಏನೂ ನಡ್ಯೊದಿಲ್ಲ. ನಮ್ದೆಲ್ಲಾ ಒಂದೇ ಮಾತು. ನಮ್ಮಾತ್ ಕೇಳೋ ಹಾಂಗಿಲ್ವೆ ನಿನ್ಗೆ?

ಕೇಳಿರಪ್ಪ ಕೈಯ್ಯ ಮುಗಿವೆ। ಲಾಲಿಸುತ್ತಲೆನ್ನ ಮಾತ।
ಪೇಳಿರಯ್ಯ ಧರಣಿಪತಿಗೆ। ಚಾಳಿಸದಿರಿ ॥೩॥

ದ್ರೌಪದಿ- ಅಣ್ಣಗಳಿರಾ! ಹೀಯಾಳಿಸಬೇಡಿರಿ. ಕೈಮುಗಿದು ಹೇಳುತ್ತೇನೆ. ಮೊದಲು ನಿಮ್ಮೊಡೆಯನಿಗೆ ವರ್ತಮಾನ ಮುಟ್ಟಿಸಿ ಉಪಕಾರಮಾಡಿ.

ದ್ವಾ. ಪಾ.- ಏನ್ತಾಯಿ! ಬಾಳಾ ಉದ್ದೂದ್ದ ಮಾತಾಡ್ತೀಯಲ್ಲೊ ನಿಂಗೇನು ಬುದ್ದೀ ಗಿದ್ದೀ ಐತಾ ಇಲ್ವಾ. ಈ ಕಾಲಾಗೆ ಹೊತ್ತ್ಗೆಟ್ಟು ಗೊತ್ತಾ.

ಮಧ್ಯರಾತ್ರಿಕಾಲದಲ್ಲಿ। ಎದ್ದು ನೀನು ತಿರುಗಲೇಕೆ?
ಬದ್ಧವೇ ನಮ್ಮರಸನೊಡನೆ। ಸುದ್ದಿ ಯಾವುದು? ॥ ೪ ॥

ದ್ವಾ. ಪಾ.- ಏನಂತೀ? ಈ ನಡೊ ಇರ್ಳಾಗೆ ಊರಾಗೆಲ್ಲ ಮಂದಿ ನಿದ್ರೆ ಮಾಡಾವ್ರೆ ನಿಂಗೇನವ್ವಾ ಬಂದಿರೋದು. ನಮ್ಮ ಜೀವ ತಿಂತೀಯಲ್ಲಾ

ಈ ರಾತ್ರಿಯಾಗೆ ಮಾರಾಜ್ರಾ ಹತ್ರ ಹೋದ್ರೆ ಬಡ್ದು ಅಟ್ಬಿಟ್ವಾರು ಬಲ್ಲೇನು? ನೀಂಗೇನಾಯ್ತು ಮಾರಾಯಾ, ಸಂಬಂದಾ. ಅವರ್ತಾವಾ ಏನ್ ಕೆಲ್ಸ? ಏನಿದ್ರೂ ನಾಳೆ ನೋಡೋಣಾಂತೀವಿ ತಿಳೀತಾ.

ದ್ರೌಪದಿ– ಅದೆಲ್ಲಾ ಸಂಗತಿ ನಿಮಗೇಕಪ್ಪಾ!

ಚಾರಕರಿರ ನಿಮಗೇಕಿಷ್ಟು। ಪಾರುಪತ್ಯ ವೆನ್ನೊಳಿನಿತು।
ಧಾರಿಣೀಶಗರುಹಿದರೆ ವಿಚಾರಿಸುವನು ॥ ೫ ॥

ದ್ರೌಪದಿ– ದೂತರಾದ ನಿಮಗೆ ಈ ಪಾರುಪತ್ಯವೆಲ್ಲಾ ಏತಕ್ಕೆ? ಸುಮ್ಮನೆ ಅಧಿಕ ಪ್ರಸಂಗಕ್ಕೆ ಬಾಯ್ಬಿಡಬೇಡಿ. ಅರಸನಲ್ಲಿಗೆ ಈ ವಾರ್ತೆ ಮುಟ್ಟಿಸಿದರೆ ಸಾಕು. ಅರಸನಾದವನು ತಾನೇ ಕರೆಸಿಕೊಳ್ಳುತ್ತಾನೆ. ಮೇಲೆ ನಾವೇ ವಿಚಾರ ನಡೆಸುತ್ತೇವೆ ಇನ್ನಾದರೂ ತಿಳಿಯಿತಷ್ಟೆ.

ಭ್ರಷ್ಟ ಮಾಳಿಸಲಗೆಯೇನೆ। ಮುಟ್ಟಲಂಜಾವೆವು ಕೇಳು!
ಗುಟ್ಟನಿಂದ ನೀಪೋಗದರೆ। ತಟ್ಟನೊಯ್ವೆವು ॥ ೬ ॥

ದ್ವಾ. ಪಾ.– ಎಲೋ ಕೆಟ್ಟ ಹೆಂಗ್ಸೇ, ಏನೂಂತ ತಿಳ್ಕೊಂಡ್ಯಾ ಬಾಗ್ಲೊ ಕಾಯೊ ಕುನ್ನಿಗಳೊಂದ್ಕೊಂಡ್ಯಾ, ನಮ್ಕಡೆ ಹಿಂಗೂ ಹೇಳೋಕೊ ಸದ್ರಾಯ್ತೇನಾವ್ವ, ಹಾಂಗಾದ್ರೆ ನಿನ್ನುದ್ದಿ ಹೇಳೋಕೆ ಆಗಾಕ್ಕಿಲ್ಲ. ಸವ್ವಾರೋಪತ್ಯ ಇಲ್ಲೇ ಇರೋದು ತಿಳಿತೇನು, ಬಂದ್ಹಾಂಗೆ ಹೊಂಟ್ಹೋಗು, ಹೆಣ್ಣಂಗಸ್ಸಾಂತ ಬಿಟ್ಟೇವಿ. ಇಲ್ಲಾದ್ರೆ ಕತ್ತೇ ಕೋಣನ ಮಾಡ್ತಾ ಒಯ್ತ್ತಾ ಬಿಡ್ತಿದ್ದೇವಿ ಕಾಣೋ.

ದ್ರೌಪದಿ– ಒಯ್ದು ಬಿಡಲಿಕ್ಕೆ ನಾನೇನೂ ಅಪರಾಧಿಯಲ್ಲ.

ಕಳ್ಳಿಯಲ್ಲ ಕೇಳರಯ್ಯಾ। ಪಳ್ಳು ಮಾತನಾಡಬೇಡಿ।
ಖುಲ್ಲತನವಿದೆನ್ನೊಳೀಗ। ಸಲ್ಲದು ನೋಡಿ ॥ ೭ ॥

ದ್ರೌಪದಿ– ಏನು ಮಾತಾಡುತ್ತೀರಿ. ನರಿಗಳ ಹಾಗೆ ಒದರುತ್ತೀರಲ್ಲಾ! ನಾನೇನು ಕಳ್ಳೆ ಹೆಂಗಸು ಎಂತ ತಿಳಿದುಕೊಂಡಿರಾ? ಬೇಗನೆ ಬಾಯ್ಮುಚ್ಚಿದರಾಯಿತು. ಯಾವ ದುಷ್ಟ ವೃತ್ತಿಗಳೂ ನನ್ನಲ್ಲಿ ನಡೆಯುವ ಹಾಗಿಲ್ಲವೆಂದು ತಿಳಿಯಿರಿ.

ಛೀ ಛೀ ಹೆಣ್ಣು ಮಾಳಿ ನಿನಗೆ। ನಾಚಿಕಿಲ್ಲವೇನೆ ಕಡೆಗೆ।
ಯೋಚನೆಯಿಲ್ಲದೆ ಪೋಪುದಾಚೆಗೆಂದರು ॥ ೮ ॥

ದ್ವಾ. ಪಾ.– ಛೀ ಛೀ ಹೆಣ್ಮೂಳಿ। ನಿಂಗೇನ್ ನಾಚ್ಕೆ ಇಲ್ಲಾಂತ್ಕಾಣೆ ಈ ಕತ್ಲೆಯೊಳ್ಗೆ ನಮ್ಮೊಡೇರ ಕೂಡೆ ಏನ್ನೆಲ್ಲಾ ನಿಂಗ್ಯೆತೆ. ಬಂದ್ಹಾಂಗೆ ಚಪ್ ಚಿಪ್ ಮಾತಾಡ್ದೆ ಹೋಗ್ತಾಯ್ಕೆ ಇಲ್ಲಾ ಇಲ್ಲಾದ್ರೆ ಹೊಡ್ದುಬಿಡ್ತೀವಿನೋಡು.

ದ್ರೌಪದಿ– ಇದೇನು ನಿಮಗೆ ಹುಚ್ಚು ಹಿಡಿಯಿತೇ?

ಹುಚ್ಚು ನಾಯಿಗಳಿರ ನಿಮ್ಮ । ಕೊಚ್ಚಿ ಬಲಿಯ ಕೊಡುವೆ ಹೀಗೆ।
ತುಚ್ಛಗೊಳುವಿರೇತಕೆನುತ। ಲುಚ್ಚರಿಸಿದಳು ॥ ೯ ॥

ದ್ರೌಪದಿ– ಎಲೋ ಹುಚ್ಚು ಪ್ರಾಣಿಗಳಿರಾ! ಏನೆಂದು ತಿಳಿದಿರಿ. ಕುನ್ನಿಗಳ ಹಾಗೆ ಬಗುಳುತ್ತೀರಲ್ಲಾ, ರಾಜನಿಗೆ ಹೇಳುವುದು ಬಿಟ್ಟು ಹೊಡೆದಾಟಕ್ಕೂ ತಯಾರಾದೀರೇನು? ಈಗಲೇ ನಿಮ್ಮನ್ನು ಕಡಿದುಹಾಕಿ ದಿಕ್ಕು ದಿಕ್ಕುಗಳಿಗೆ ಬಲಿಕೊಡುತ್ತೇನೆ ನೋಡಿ.

ದ್ವಾ. ಪಾ.– ಅಯ್ಯಯ್ಯೋ ದೇವ್ರೇ! ಭಾರಿ ಮೃತ್ಯುನ ಹಾಂಗೆ ಹೊಡೆಯೋಕೆ ಬರ್ತಾಳಲ್ಲಾ. ಅಣ್ಣಾ- ಇನ್ನೇನು ಹೇಳೋದು?

ಮೃತ್ಯುವೋ ಮಾರಿಯೋ ಎಂದು। ಮತ್ತೆ ಚರರು ಕಮಲ ನೃಪನ।
ಹತ್ತರಕೆಯ್ತಂದು ಬೊಬ್ಬಿ। ಡುತ್ತನುಡಿದರು ॥ ೧೦ ॥

ದ್ವಾ. ಪಾ.– ಅಯ್ಯೋ ನಾರಾಯ್ಣ ದೇವ್ರೇ! ಏನಪ್ಪೋ ಇದು. ಆಗ ನೋಡ್ಹಾಕೆ ಒಳ್ಳೆ ಹೆಣ್ಣಾಗಿದ್ದವ್ಳು! ಈಗ್ನೊಡ್ತ ಮಾರಿ. ಮೃತ್ಯು ದೇವ್ತೆ ಇದ್ಹಾಂಗಿದ್ಹಾಳಲ್ವೆ! ಇನ್ನೇನ್ಮಾಡೋದು. ಬದ್ಕೋದು ಹೇಂಗೊ? ಬೇಗ್ನೆ ಹೊಯ್ಕೊಂಡು ಅರಸರ್ತಾವ ಹೇಳ್ಬಿಡಾನ.

ರಾಗ- ಸಾರಂಗ। ತಾಳ– ಅಷ್ಟ.

ಕೇಳಯ್ಯ ದೊರೆಯೆ ನೀನು, ನಾನೆಂಬುದ- ಲಾಲಿಸಬೇಕಿದನು।
ಪೇಳಲೆಮ್ಮಳವಲ್ಲ ಲೋಕದೊಳಿದಿರಿಲ್ಲ। ಪಾಲಿಸೊ ನಮ್ಮ
ಕೃಪಾಳು ನೀದಯೆಯಿಟ್ಟು ॥ ೧ ॥

ದ್ವಾ. ಪಾ.– ಮಾರಾಜ್ರೇ! ಕೇಳ್ಬೇಕು. ದೋವ್ರೋರ ಪಾದಕ್ಕೆ ಬಿದ್ದು ಹೇಳ್ಕೊಳ್ತೀವಿ. ಆದ್ರೆ, ಹೇಂಗೇಳ್ಬೇಕೋ ಬರೋದಿಲ್ಲ, ದಯಾ ಮಾಡ್ಬೇಕು. ಒಡ್ಯಾ! ಈ ಊರಾಗೆ ಯಾವ್ದೋ ಒಂದ್ ಹೆಣ್ಬಂದೈತೇ ನೋಡ್ರಿ. ಇಂತಾಂದೊಂದು ಲೋಕ ಲೋಕದೊಳ್ಗೂ ಸಿಗೋಕ್ಕಿಲ್ಲಾ ರಾಯ್ರೇ!

ಪುರ ವಲಯದೊಳೊರ್ವಳು। ತರುಣಿ ಬಂದು । ಪರಿತೋಷ
ದಿಂದಿಹಳು। ಪರಿಯ ನೋಡಿದರೆಮ್ಮ ರತಿಯಂತೆ ತೋರ್ಪಳು।
ಸುರನರೋರಗರಲ್ಲಿ ಸರಿಯಿಲ್ಲವವಳಿಗೆ ॥ ೨ ॥

ದ್ವಾ. ಪಾ – ನಾವ್ ಒಟ್ಕೂಡಿ ಬಾಗ್ಲು ಕಾಯ್ಕೊಂಡಿರೋವಾಗ ಒಳ್ಳೆ ಚಿನ್ನಾದ್ದಂಗ ಒಬ್ಳು ಹೆಣ್ ಹೆಂಗ್ಸು ಬಂತು ಬುದ್ಧಿ. ನೋಡೋಕೆ ನಮ್ಮ ಸಣ್ಣಮ್ನೋರ ಹಾಂಗೆ ಅವ್ಳೆ, ಮೂಲೋಕದಾಕೆ ಇಂಥಾ ಹೆಣ್ಣು ಇರೋಕಿಲ್ಲ ರಾಯ್ರೇ! ಆದ್ರೆ ಬುದ್ಧಿ ಕಾಣೋಕೆ ಚಂದಾಗಿದ್ರೂ, ಅವ್ಳವ್ಯಾರಾ ಬೇರೇ ಐತೆ ಬುದ್ಧಿ. ಕೇಳ್ಬೇಕು ದೇವ್ರೇ!

ನೋಡಲು ನಾರಿಯಂತೆ। ತೋರ್ಪಳು ಮಾತ-ನಾಡಲು
ಮೃತ್ಯುವಂತೆ। ರೂಢಿಯೊಳವಳಂಥ ಪಾಡಿನ ಪೆಣ್ಗಳ।
ನಾಡಿಕೆಯಿಂದಲಿ ನೋಡಲಿಲ್ಲೆಂದರು ॥ ೩ ॥

ದ್ವಾ. ಪಾ.– ಎಂತಾ ಗಡ್ಸು ಹೆಂಗ್ಸೋ ಅವ್ಳು. ಈ ರಾತ್ರಿಗೆ ಕಾಣ್ಬೇಕೊಂತ ಹೇಳಿದ್ಳು ಬುದ್ಧಿ, ಈಗಾ ಆಗೋಕಿಲ್ಲ. ನಾಳೆ ಬೆಳಗ್ಗಾತಾ ಎಂದ್ರೆ ದೊಡ್ಡ ಮಾರಿನ ಹಾಂಗೆ ಮಾಡ್ತವ್ಳೆ. ಇಂತಾ ಮಾರಿ ಹೆಂಗ್ಸಿನ ಹಾಂಗಿದ್ದೋರು ಎಲ್ಲೂ ಕಾಣಾಕಿಲ್ಲ ದೇವ್ರೇ!

ಎಂದ ಮಾತನು ಕೇಳಿದ। ಕಮಲ ಭೂಪ। ನಂದು
ತೋಷವ ತಾಳಿದ। ಮಂದಗಮನೆಯನ್ನು ಕರೆಯಿರೆಂದೆ
ನುತಲಿ' ಚೆಂದದಿಂದೋಲಗವಿತ್ತು ಕುಳಿತನಾಗ ॥ ೪ ॥

ಕಮಲ ಭೂಪ– ದ್ವಾರ ಪಾಲಕರ ಮಾತು ವ್ಯರ್ಥವಲ್ಲ. ಈಗಾ ವುದೋ ಒಂದು ರಾಜಕೀಯದ ಸಂದರ್ಭವು ಒದಗಿರಬೇಕು. ಆ ವಿಚಾರ ವನ್ನು ಚರ್ಚಿಸಲು ಹಗಲಾದರೇನು? ಇರುಳಾದರೇನು? ರಾಜ ಧರ್ಮವೂ ಹಾಗಿರುವಾಗ ಬಂದವಳನ್ನು ಸ್ವಾಗತೀಕರಿಸುವುದು ಸಂತೋಷವೇ ಸರಿ. ಎಲೈ ದ್ವಾರ ರಕ್ಷಕರೇ! ಹೆದರಬೇಡಿರಿ. ಬಂದವಳು ಯಾರೇ ಇರಲಿ ನಮ್ಮ ಓಲಗ ಶಾಲೆಗೆ ಕರೆದುಕೊಂಡು ಬನ್ನಿರಿ.

ದ್ವಾ. ಪಾ.– ದೇವ್ರೋರ ಅಪ್ಪಣೆ.

ಭಾಮಿನಿ॥

ಧರಣಿಪತಿ ಕೇಳಿಂತು ವಿಭವದೊ। ಳಿರೆ ಕಮಲ ಭೂಪಾಲನಾಗಲೆ।

ಭರದಿ ಚರರಿಗೆ ನೇಮವಿತ್ತಬಲೆಯನು ಕರೆಸಿದನು॥ ಪರಮ
ಸಂತೋಷದಲಿ ಸುತ್ತಾ। ತರುಣಿಗಾಸನವಿತ್ತು ರಾತ್ರಿಯೊ। ಳಿರದೆ
ಬಂದುದ ಪೇಳೆನುತ ಬೆಸಗೊಂಡನಾಕೆಯನೂ।

ಕಮಲ ಭೂಪ- ಕಮಲಾವತಿಯ ಕಮಲ ಭೂಪನ ಆಸ್ಥಾನ ಮಂಟಪವು ಇಂದ್ರನ ಸುಧರ್ಮ ಸಭೆಗಿಂತಲೂ ಮೇಲು. ಈ ದೇಶವು ಸ್ವರ್ಗಕ್ಕೆ ಸಮಾನವಾದುದು. ಈ ರೀತಿಯಲ್ಲಿ ಮಂದಿಗಳು ಕೊಂಡಾಡುವ ಹಾಗೆ ಪ್ರಜೆಗಳ ಸುಖವನ್ನೇ ನನ್ನ ಸುಖವೆಂದು ತಿಳಿದು ನಾನೀವರೆಗೆ ರಾಜ್ಯ ಭಾರವನ್ನು ನಡೆಸುತ್ತಿದ್ದೇನೆ. ಅಲ್ಲದೆ ಯಾವ ತಪ್ಪುಗಳೂ ಇಲ್ಲವೆಂಬ ತೃಪ್ತಿ ಯಲ್ಲಿದ್ದೇನೆ. ಆದರೆ ಇಂದು ಮಾತ್ರ ಹೀಗೇಕಾಯಿತೋ ಕಾಣೆ. ಒಬ್ಬಳೇ ಒಬ್ಬಳು ಹೆಂಗಸಾದವಳು ಈ ರಾತ್ರಿಯಲ್ಲಿ ಏಕೆ ಬರಬೇಕು? ಏನೋ ವಿಶೇಷ ವಿದೆ; ಅದಕ್ಕಾಗಿ ಸಭೆಯನ್ನು ಕೂಡಿಸಿ ರಾಜಾಸನದಲ್ಲಿ ಕುಳಿತುಕೊಳ್ಳುವವ ನಾದೆನು. ಯಾರೋಅಲ್ಲಿ? ಆ ಹೆಂಗಸನ್ನು ಈ ಕಡೆಗೆ ಬರುವಂತೆ ಮಾಡಿರಿ. ಬಾರಮ್ಮಾ! ಇದೋ ಆಸನವಿದೆ. ಅಲಂಕರಿಸಬಹುದು.

ರಾಗ- ಕೇತಾರಗೌಳ । ತಾಳ- ಅಷ್ಟ.

ತರುಣಿ ನೀನೆಲ್ಲಿಂದ ಬಂದುದೀ ರಾತ್ರಿಯೊ। ಳುರತರ ತೋಷದಲಿ॥
ವರನಾರು.ದೇಶವಾವುದು ಪೇಳೆಂದೆನುತಲಿ। ಧರಣಿಪ ಬೆಸಗೊಂಡನು
॥ ೧ ॥

ಕಮಲ ಭೂಪ- ಯಾರಮ್ಮಾ ನೀನು, ಯಾವ ದೇಶದವಳು? ನಿನ್ನ ಪುರುಷನ ಹೆಸರಾದರೂ ಏನು? ಇಂತಹ ರಾತ್ರಿ ಕಾಲದಲ್ಲಿ ಇಷ್ಟು ಧೈರ್ಯ ದಿಂದ ಏತಕ್ಕಾಗಿ ಬಂದೆ? ನಿನ್ನ ದೇಶ, ಪತಿಯ ಹೆಸರು ಯಾವ ಪರಿಚಯವೂ ಇಲ್ಲದಿರುವುದರಿಂದ ಆ ವಿಚಾರಗಳನ್ನು ಸವಿಸ್ತಾರವಾಗಿ ಕೇಳಬೇಕೆಂದಿದ್ದೇನೆ

ಎಂದ ಮಾತನು ಕೇಳಿ ದ್ರುಪದ ನಂದನೆಯೆದ್ದು। ನಿಂದು
ಮುದದಿ ನಗುತ॥ ಬಂದ ಕಾರ್ಯವ ನೀವುದಾದರೆ
ನಿನಗದ। ರಂದ ಪೇಳುವೆನೆಂದಳು ॥ ೨ ॥

ದ್ರೌಪದಿ- ಮಹಾನುಭಾವನೇ! ನಿನ್ನ ನಡೆಸುದಿಗಾಗಿ ಸಂತೋಷ ಪಟ್ಟೆನು. ರಾತ್ರಿಯಾದರೂ ವಿಚಾರಿಸುವುದಕ್ಕಾಗಿ ಓಲಗ ಕೊಟ್ಟಿರುವ ಈ ನಿನ್ನ ಸಮಯವನ್ನು ವ್ಯರ್ಥ ಮಾಡಬಾರದೆಂದು ತಿಳಿದಿರುತ್ತೇನೆ. ಆದರೂ

ನನ್ನ ಧೈರ್ಯಕ್ಕಾಗಿ ಕೇಳುತ್ತಿದ್ದೇನೆ. ನನ್ನ ಕೆಲಸವನ್ನು ನೆರವೇರಿಸಿಕೊಡುವುದಾಗಿ ಭಾಷೆಕೊಡು. ಆ ಮೇಲೆ ಎಲ್ಲಾ ಹೇಳುವೆನು.

ತರುಣಿ ಸಂಶಯಬೇಡ ತಿಳುಹು ನೀಬಂದಿಹ। ಪರಿಯನೀಗೆನ್ನೊಡನೆ॥
ಹರುಷದಿಪೇಳ್ದರೆ ಕರುಣಿಸಿ ಕೊಡುವೆನು। ಭರದಿಂದಲೀಗ ನಾನು ॥೩॥

ಕಮಲ ಭೂಪ- ನಾರೀಮಣಿ! ನನ್ನ ವಿಚಾರದಲ್ಲಿ ಸಂಶಯಪಡಬೇಡ. ನಾನೇ ರಾಜನಾದುದರಿಂದ ಧರ್ಮ ನೀತಿಗಳನ್ನು ಬೇರೆಹೇಳಬೇಕಾಗಿಲ್ಲ. ನೀನು ಬಂದ ಕೆಲಸವಾವುದು? ಸ್ಪಷ್ಟವಾಗಿ ಹೇಳಿದರೆ ಈಕ್ಷಣವೇ ನಡೆಸಿಕೊಡುತ್ತೇನೆ. ಏತಕ್ಕಾಗಿ ಅನುಮಾನಪಡುವೆ?

ಕೊಡುವುದಾದರೆ ಎನ್ನಕರದಿ ಭಾಷೆಯನೀಡು। ಸ್ಪಷ್ಟ
ವಾಗಿ ಪೇಳ್ವೆನೆಂದು ॥ ಸಡಗರದಿಂದಲಿ ದ್ರೌಪದಿ
ಯುಸಿರಲು। ನುಡಿದಕಮಲಭೂಪನು ॥ ೪ ॥

ದ್ರೌಪದಿ- ಭೂಪಾಲನೇ! ನನ್ನ ಕಾರ್ಯವನ್ನು ನಿಜವಾಗಿಯೂ ನಡೆಸುವುದಾದರೆ ಈಗಲೇ ಭರವಸೆ ಕೊಡು. ಹಾಗೆ ಕೈತಟ್ಟಿ ಮಾತುಕೊಟ್ಟೆಯಾದರೆ ನನ್ನ ವಿಷಯವನ್ನು ಸವಿಸ್ತಾರವಾಗಿ ಹೇಳಲಿರುವೆನು. ಇದಕ್ಕೇನು ಸಂದೇಹ?

ಕ್ಷತ್ರಿಯ ನೃಪರಾಡಿದ ಮಾತು ಪುಸಿಯಲ್ಲ। ಚಿತ್ತಶುದ್ಧದೊಳು ನೀನು॥
ಸತ್ಯದಿ ಬೇಡಿದರಿತ್ತಪೆನೆನಲಾಗ। ಪೃಥ್ವಿಪಾಲಕಗೆಂದಳು ॥ ೫ ॥

ಕಮಲ ಭೂಪ- ಲಲನಾಮಣಿ! ನಾವು ಯಾರು? ಕ್ಷತ್ರಿಯರಲ್ಲವೇ? ಬಾಯಿಲ್ಲಾಡಿದುದನ್ನು ಕಾರ್ಯರೂಪಕ್ಕೆ ತರುವವರಿದ್ದೇವೆ. ಹೀಗಿರುವಾಗ ನೀನು ಹೇಳುವುದು ಸತ್ಯವೇ ಆಗಿದ್ದರೆ ಅವಶ್ಯವಾಗಿ ಭಾಷೆಕೊಡುತ್ತೇನೆ. ನಿಶ್ಚಲವಾದ ಶುದ್ಧ ಮನಸ್ಸಿನಿಂದಲೇ ಹೇಳುವವಳಾಗು.

ಸೃಷ್ಟೀಶ ಕೇಳಿದು ದಿಟವಿದಾದರೆ ನೀ ಕೈತಟ್ಟಿ ಪೇಳಿದರೆ ನಾನು ॥
ತಟ್ಟನೆ ಪೇಳುವೆನೆಂದೆನುತುಸುರಲು। ಕೊಟ್ಟನು ಭಾಷೆಯನು ॥ ೬ ॥

ದ್ರೌಪದಿ- ಸೃಷ್ಟಿ ಪಾಲಕನೇ! ಈ ಮಾತು ಸತ್ಯವೇ? ಕೈತಟ್ಟಭಾಷೆ ಕೊಡುತ್ತೀಯಾದರೆ ಖಂಡಿತ ಹೇಳದಿರಲಾರೆನು.

ಕಮಲಭೂಪ- ಸತ್ಯಧರ್ಮದಂತೆ ರಾಜ್ಯಾಡೆಸುತ್ತಿರುವ ಈ ಸಂದರ್ಭ

ದಲ್ಲಿ ಮಾತು ತಪ್ಪುವುದೆಂದರೇನು? ಇದೋ ಕೈತಟ್ಟಿ ಭಾಷೆಕೊಡುತ್ತಿದ್ದೇನೆ. ಹೇಳುನೋಡೋಣ.

ದ್ರೌಪದಿ– ಸಂತೋಷವಾಯಿತು. ಇನ್ನು ನಿಶ್ಚಯ.

ಇಷ್ಟಾದಮೇಲೆ ನಾ ಪೇಳುವೆ ನೀಕಿವಿ। ಗೊಟ್ಟು ಲಾಲಿಪುದಿದನೆ॥
ಸೃಷ್ಟಿಗಧಿಕವಾದ ವರ ಹಸ್ತಿನಾವತಿ। ಪಟ್ಟಣದರಸುಗಳು ॥ ೭ ॥

ದ್ರೌಪದಿ– ರಾಜೇಂದ್ರ! ಧೈರ್ಯಪಟ್ಟೆನು. ನನ್ನ ವಿಚಾರದಲ್ಲಿ ಮತ್ತಿಷ್ಟು ಆಶ್ಚರ್ಯವಾಗಲಿಕ್ಕಿದೆ. ಲಕ್ಷ್ಯ ಕೊಟ್ಟು ಕೇಳೋಣಾಗಲಿ. ಭೂಲೋಕದಲ್ಲಿ ಅತ್ಯಂತ ಪ್ರಸಿದ್ಧವಾದ ಹಸ್ತಿನಾವತೀ ಪಟ್ಟಣದ ರಾಜರಾರೆಂದು ಬಲ್ಲೆಯಾ?

ಕ. ಭೂ.– ಹಸ್ತಿನಾವತಿಯು ಹಿಂದಿನಿಂದಲೂ ಪ್ರಸಿದ್ಧಪಡೆದಿದೆ.

ಪಂಚಪಾಂಡವರಿರುತಿಹರವರಂಗನೆ। ಪಾಂಚಾಲೆ ದ್ರೌಪದಿಯು॥
ಪಾಂಚಾಲ ರಾಜನ ಕುವರಿಯೆಂದೆನ್ನ ಪ್ರ। ಪಂಚದಿ ಕರೆಯುವರು ॥೮॥

ದ್ರೌಪದಿ– ಈಗ ಹಸ್ತಿನಾವತಿಯ ಅರಸರೆಂದರೆ ಪಂಚಪಾಂಡವರು. ಅಂತಹ ಲೋಕ ವಿಖ್ಯಾತರಾದ ಐದುಮಂದಿ ಪಾಂಡವರ ಧರ್ಮಪತ್ನಿ ನಾನು. ನನ್ನ ಹೆಸರು ದ್ರೌಪದಿಯೆಂದು. ಪಂಚಾಲದೇಶದ ದೊರೆಯಾದ ದ್ರುಪದನೇ ನನ್ನ ತಂದೆ. ಲೋಕದಲ್ಲಿ ನನ್ನನ್ನು ಪಾಂಚಾಲಿಯೆಂದೂ ಕರೆಯುವರು.

ಕ. ಭೂ.– ಪಾಂಡವರ ಪತ್ನಿಯೇ! ಆಶ್ಚರ್ಯ. ಈ ಮಧ್ಯರಾತ್ರಿಯಲ್ಲಿ ಒಬ್ಬಳೇ ಹೊರಟು ಬರಲು ಏನು ಕಾರಣ?

ದ್ವಾರಕಿಯೊಳು ಸಚ್ಚಿದಾನಂದನಾಗಿಹ। ಧೀರನೆನ್ನಗ್ರಜನು॥
ವಾರಿಜಾಂಬಕನಿಗೆ ತರಳನಾಗಿರುತಿಹ। ಮಾರನೆಂಬವನು ತಾನು ॥೯॥

ದ್ರೌಪದಿ– ಸಮುದ್ರ ಮಧ್ಯದಲ್ಲಿ ಮೆರೆಯುತ್ತಿರುವ ದ್ವಾರಕಾನಗರಿಯನ್ನು ಕೇಳಿಬಲ್ಲೆಯಷ್ಟೆ! ಆ ಮಹಾನಗರಿಯಲ್ಲಿ ವಾಸಮಾಡುತ್ತಿರುವ ಸಚ್ಚಿದಾನಂದ ಮೂರುತಿಯಾದ ಶ್ರೀ ಕೃಷ್ಣನೇ ನನ್ನಣ್ಣನು. ಆತನಿಗೆ ಅತ್ಯಂತ ಸುಂದರನಾದ ಮಾರನೆಂಬ ಕುಮಾರನೊಬ್ಬನಿದ್ದಾನೆ.

ಕ. ಭೂ.– ಕೇಳಿದ್ದೊಂದು ಹೇಳುವುದಿನ್ನೊಂದು. ಕೃಷ್ಣನಿಗೆ ಮಗನಿದ್ದರೇನಾಯಿತು? ಅಗತ್ಯವಿದ್ದಷ್ಟು ಹೇಳಿದರೆ ಸಾಲದೇ?

ದ್ರೌ– ಕೃಷ್ಣನ ಕುಮಾರನಿಗಾಗಿಯೇ ಬಂದಿರುತ್ತೇನೆ.

ಮಂದರಧರನ ಕುಮಾರಗೆ ನಿನ್ನಯ। ನಂದನೆ ರತಿಯನೀಗ ॥
ಚಂದದಿ ಲಗ್ನವ ಮಾಡಲೋಸುಗ ನಡೆ। ತಂದಿಹೆ ನಾನೆಂದಳು ॥೧೮॥

ದ್ರೌ— ನಿನಗೊಬ್ಬಳು ಮಗಳಿರುತ್ತಾಳಲ್ಲ! ಆಕೆಗೆ ಅನುರೂಪನಾದ ವರನಾರೆಂಬುದನ್ನು ನಿಶ್ಚಯಿಸಿರುವೆಯಾ? ಆತನೇ ಮಂದರಪರ್ವತವನ್ನೆತ್ತಿದ ಶ್ರೀ ಕೃಷ್ಣನ ಮಗನು. ಆತನಿಗೆ ನಿನ್ನ ಮಗಳನ್ನು ನಿಶ್ಚಯಿಸಿ ಲಗ್ನ ಮಾಡಿಸುವುದಕ್ಕಾಗಿ ಬಂದಿರುತ್ತೇನೆ.

ಕ. ಭೂ– ಪಾಂಚಾಲಿಯೇ! ಇನ್ನೂ ಹೇಳಲಿಕ್ಕಿದ್ದರೆ ಅಡಗಿಸುವುದು ಬೇಡ.

ವಿಸ್ತಾರದಲಿ ನಾಳೆ ರಚಿಸುವ್ವೆವಾಹವ। ಸ್ವಸ್ಥಾನವಹುದೆಲ್ಲರ್ಗೆ॥
ಮತ್ತೆ ನಿಮ್ಮೆಲ್ಲವರ ಪೊರೆವ ಶ್ರೀಹರಿಯೆಂದು। ಚಿತ್ತರಿಸಿದಳವಗೆ ॥೧॥

ದ್ರೌ– ಇಂತಹ ಸುಯೋಗವು ಎಲ್ಲರಿಗೂ ದೊರೆಯದು. ನಿನ್ನ ಸೌಭಾಗ್ಯವೆಂಬಂತೆ ನಾನೇ ಕನ್ಯಾರ್ಥಿಯಾಗಿ ಬಂದಿರುತ್ತೇನೆ. ನಾಳೆಯೇ ವಿವಾಹವಾಗಲಿ. ಅದರಿಂದ ಎಲ್ಲರಿಗೂ ಶ್ರೇಯಸ್ಸಿದೆ. ಶ್ರೀ ಕೃಷ್ಣಪರಮಾತ್ಮನು ದಯಾಭಾವದಿಂದ ನಿಮ್ಮನ್ನೆಲ್ಲ ರಕ್ಷಿಸಲಿರುವನು.

ಭಾಮಿನಿ

ಕರಿಪುರಾಧಿಪ ಕೇಳುದ್ರುಪದಜೆ। ಯೊರೆಯೆ ಲಾಲಿಸುತಾಕಮುಲನೃಪ।
ನುರುತರದ ರೋಷದಲಿಕಂಗಳೊಳಾಗ ಕಿಡಿಗೆದರಿ ॥
ಭರದಿ ಹೂಂಕರಿಸುತ್ತಲಾಕ್ಷಣ। ತರುಣಿಪಾಂಚಾಲೆಯನು ನೋಡುತ।
ಲಿರದೆ ಪಲ್ಮೊರೆವೆಂದನೊಂದುತ್ತರವನವಳೊಡನೆ ॥೧॥

ಕ. ಭೂ.– ಏನಾಶ್ಚರ್ಯ? ಈಕೆಯ ಮಾತು ಶಾಂತವಾದ ನನ್ನ ಮನಸ್ಸನ್ನು ಉದ್ರೇಕಗೊಳಿಸುತ್ತದೆ. ಹರ ಹರಾ! ಲೋಕದಲ್ಲಿ ಹೀಗೂ ಇದೆಯೇ! ನನ್ನ ಮಗಳನ್ನು ಕೃಷ್ಣನ ಮಗನಿಗೆ ಮದುವೆಮಾಡಿಕೊಡುವಂತೆ ಹೇಳಬೇಕಾದರೆ ಈಕೆಯ ಧೈರ್ಯವೆಷ್ಟಿರಬಹುದು? ಆದರೂ ಹೇಳಬೇಕಾದುದನ್ನು ಹೇಳಿಬಿಡುತ್ತೇನೆ. ಪಾಂಚಾಲಿಯೇ! ನನ್ನ ಮಗಳನ್ನು ಯಾರಿಗೆ ಕೊಡಬೇಕು?

ರಾಗ– ಮಾರವಿ। ತಾಳ– ಏಕ

ಕೆಟ್ಟ ಗೋವಳನ ಕುಮಾರಗೆ ಕೊಡುವೆನೆ। ಹುಟ್ಟಿದ ಕುವರಿಯನು॥

ಎಷ್ಟೆಂದರು ಮನಮುಟ್ಟದು ಸುಮ್ಮನೆ। ಸಿಟ್ಟಾಗದಿರಿನ್ನು ॥ ೧ ॥

ಕ. ಭೂ.— ನಿನ್ನ ಮಾತುಗಳ ಅರ್ಥವಾಯಿತು. ಇದಕ್ಕಾಗಿಯೇ ಈ ಮಧ್ಯರಾತ್ರಿಯಲ್ಲಿ ಬಂದು ಕಿರುಕುಳ ಮಾಡುವುದು, ಅಸಾಧ್ಯವಾದುದನ್ನು ಸಾಧಿಸುವುದಕ್ಕೆ ಬಂದ ನಿನ್ನಯತ್ನವೇ ವ್ಯರ್ಥ. ದ್ರೌಪದಿ! ನನಗೆ ದೇವರು ಕೊಟ್ಟಿರುವ ಸಂತಾನವೆಂದರೆ ಒಂದೇ ಒಂದು ಹೆಣ್ಣು ಮಗು. ಅವಳನ್ನು ಒಬ್ಬ ಕುಲವಂತನಿಗೆ ಮದುವೆಮಾಡಿಕೊಡುವುದು ನನ್ನ ಕರ್ತವ್ಯವಿರುವಾಗ ಒಬ್ಬ ಗೋವಳನ ಮಗನಿಗೆ ಲಗ್ನಮಾಡುವುದೆಂದರೆ ಎಷ್ಟು ಮಾತ್ರಕ್ಕೂ ನನ್ನ ಮನಸ್ಸೊಪ್ಪದು. ಈ ವಿಷಯವಾಗಿ ವೃಥಾ ಬೇಸರಗೊಳಿಸಬೇಡ. ನಡೆಯದ ಮಾತನ್ನಾಡಿದರೆ ಯಾವ ಸುಖವೂ ಇಲ್ಲ ನೋಡು.

ಮಾತನು ಕೊಟ್ಟಿಹೆ ಮೊದಲಿನಗೀಪರಿ। ನೀತಿಯು ತಪ್ಪಿದರೆ॥
ಏತರ ನೃಪತಿ ನೀನೆನುತಲಿಜರಿವರು। ಭೂತಳದವರೆಲ್ಲ ॥ ೨ ॥

ದ್ರೌಪದಿ— ಕಮಲಭೂಪಾಲ! ಚೆನ್ನಾಯಿತು ನಿನ್ನ ಮಾತು. ಸ್ವಲ್ಪ ಹೊತ್ತಿಗೆ ಭಾಷೆ ಕೊಟ್ಟು ಈಗ ಮರತೇ ಬಿಟ್ಟೆಯಾ? ಕ್ಷತ್ರಿಯರು ಆಡಿದಂತೆ ನಡೆಯುವುದು ರಾಜನೀತಿ ಎಂದೆಲ್ಲಾ ಹೇಳಿದವನು ಈಗಲೇ ಅಸಾಧ್ಯವೆಂದರೆ ಲೋಕದವರು ಏನೆಂದಾರು? ಈ ಪ್ರಶ್ನೆಯನ್ನು ನಿನ್ನ ಜನರೇ ಕೇಳಿದರೆ ಏನು ಉತ್ತರ ಕೊಡುವೆ? ನೀನೇ ಯೋಚಿಸು.

ದ್ರುಪದಾತ್ಮಜೆ ನೀಲಾಲಿಸಿ ಕೇಳೀ। ವಿಪರೀತದ ನುಡಿಗೆ॥
ಗುಪಿತದಿ ಕೊಡೆನೆನ್ನಣುಗೆಯ ನುಡಿಯದಿ। ರಪಹಾಸ್ಯದ ಮಾತ ॥ ೩ ॥

ಕ. ಭೂ.— ದ್ರುಪದ ಪುತ್ರಿಯೇ! ಈ ವಿಚಾರವಾಗಿ ಮತ್ತೂ ಮಾತು ಬೆಳಸಿದರೆ ಯಾವ ಪ್ರಯೋಜನವೂ ಸಿಗಲಾರದು. ಈ ವಿಪರೀತ ವರ್ತನೆಗೆ ನಾನೆಂದೂ ಎಡೆಗೊಡಲಾರೆ. ನಿನಗೆ ಮಾತು ಕೊಟ್ಟಿದ್ದೇನೆ ಎಂಬ ಒಂದೇ ಒಂದು ಕಾರಣಕ್ಕಾಗಿ ಲಗ್ನ ನಡೆಸುವ ಹಾಗಿಲ್ಲ. ಲೋಕಕ್ಕೇ ತಿಳಿಸದೆ ಮದುವೆ ನಡೆಸಿದರೆ ನಮ್ಮ ಯೋಗ್ಯತೆಗೂ ಕೊರತೆ. ತಿಳಿಸಿದರೆ ನಮ್ಮ ಸಂಬಂಧಿಗಳ ಹೆಸರನ್ನು ಕೇಳಿ ಕೈತಟ್ಟಿ ನಕ್ಕಾರು. ಛೀ ಛೀ! ಎಂತಹ ಅಪಹಾಸ್ಯದ ಮಾತಿದು.

ಧರಣಿಪ ಈ ಪರಿಯೊಳಗೇಕಾಡುವೆ। ಕೊರತೆಯಲ್ಲವೆ ನಿನಗೆ॥
ಒರೆದಿಹ ಭಾಷೆಯು ತಪ್ಪುವುದುಂಟೇ। ಸರಿಯಲ್ಲಿದು ನಿನಗೆ ॥ ೪ ॥

ದ್ರೌ.– ರಾಜೇಂದ್ರಾ! ಆಗೊಂದು ಈಗೊಂದಾಡುವುದು ಜನಸಾಮಾನ್ಯರ ಕ್ರಮ. ಏನಾದರೂ ಸರಿ. ನಿನ್ನ ಇಷ್ಟವನ್ನು ನಡೆಸಿ ಕೊಡುತ್ತೇನೆಂದು ಕೈತಟ್ಟಿ ನಂಬುಗೆಯಿತ್ತಮೇಲೆ ಇಷ್ಟು ಬೇಗ ಮರೆತು ಬಿಡುವುದು ಸರಿಯಲ್ಲ. ಮಾತು ತಪ್ಪುವವರನ್ನು ಯಾರು ಮಹನೀಯರೆನ್ನುವರು? ಮಹಾರಾಜನೇ! ಈ ಸಂಬಂಧದಿಂದ ನಿನಗೇನು ಕೊರತೆಯೆಂಬುದನ್ನು ಸ್ಪಷ್ಟವಾಗಿ ಹೇಳು.

ಗೊಲ್ಲರ ಮನೆಗಳ ಪೋಗುತಲಿ ಪಾಲ್ಮೊಸ। ರೆಲ್ಲವ ಸವಿದುಂಡ॥
ಕಳ್ಳನಸುತನಿಗೆ ಕೊಡೆನಾ ಪುತ್ರಿಯ। ಸುಳ್ಳಲ್ಲಿದು ನಿಜವು ॥ ೫ ॥

ಕ. ಭೂ.– ನಾನು ಆಡಿದ ಮಾತು ಮರೆಯುವವನಲ್ಲ. ಅದಕ್ಕಾಗಿ ಮಾನ ಬಿಡು ಎನ್ನುತ್ತೀಯಾ? ಕ್ಷತ್ರಿಯರಿಗೆ ಪ್ರಾಣಕ್ಕಿಂತ ಮಾನವೇ ದೊಡ್ಡದು. ಅದನ್ನು ಎಂತಹ ಕಾಲದಲ್ಲೂ ಬಿಡದಿರುವಾಗ ಕೃಷ್ಣನ ಸಂಬಂಧವೂ ಹೇಗಿದೆ. ಗೊಲ್ಲರ ಮನೆಯನ್ನು ಹೊಕ್ಕು ಹಾಲು ಬೆಣ್ಣೆ ಕದ್ದು ತಿಂದು ಗೋವಳತಿಯರ ಕೂಡೆ ಕುಣಿದಾಡುವವನಲ್ಲವೇ? ಅಂಥವನ ಮಗನಿಗೆ ನನ್ನ ಮಗಳನ್ನು ಕೊಡುವುದೆಂದರೆ ಎಂದಿಗೂ ಆಗದ ಮಾತು. ಇದೊಂದನ್ನು ಬಿಟ್ಟು ಬೇರೇನಿದ್ದರೂ ಹೇಳು, ನಡೆಸಿಕೊಡುತ್ತೇನೆ.

ಕ್ಷತ್ರಿ ಕುಲಜ ನೀನಾಡಿದ ಭಾಷೆಯ। ವ್ಯರ್ಥದಿ ಕಳೆಯದಿರು॥
ಸ್ವಾರ್ಥದಿ ಪರಗತಿ ಕೆಡುವುದು ನಿನಗಪ। ಕೀರ್ತಿಯು ಬಂದಪುದು॥೬॥

ದ್ರೌ.— ಧರಣೀಂದ್ರ! ಹುಟ್ಟಿದ ಕುಲವನ್ನು ಮರೆತು ಆಡಿದ ಮಾತನ್ನು ಅಲ್ಲಗಳೆದು ಬಾಳುವಂತವರಿಗೆ ಕ್ಷತ್ರಿಯರೆಂಬ ಹೆಸರು ಹೇಗೆ ಒಪ್ಪೀತು? ಅಲ್ಲದೆ ಈ ಲೋಕದ ವ್ಯವಹಾರವು ಪರಗತಿಗೆ ಕಾರಣವಾಗಿರುವಾಗ ಮಾತು ತಪ್ಪಿದ ಮಹಾ ಸ್ವಾರ್ಥಿಗೆ ಈ ಲೋಕದಲ್ಲಿ ಅಪಕೀರ್ತಿಯೂ ಪರಲೋಕದಲ್ಲಿ ಅಧೋಗತಿಯೂ ನಿಶ್ಚಯ. ರಾಜೇಂದ್ರಾ! ಅಂತಹ ದುಃಸ್ಥಿತಿಯನ್ನು ತಂದುಕೊಳ್ಳಬೇಡ. ಇನ್ನಾದರೂ ಈ ಸಂಬಂಧವನ್ನು ಬೆಳಸಿ, ಮಾತನ್ನು ಉಳಿಸುವವನಾಗು.

ಕ. ಭೂ.– ಸಾಕು ಸಾಕು ನಿನ್ನ ಉಪದೇಶ. ಕೇಳಿ ಕೇಳಿ ಕಿವಿ ಕಿವುಡಾಯಿತು. ವೃಥಾ ಹಟಟೆ ಮಾತಾಡಬೇಡ.

ಚಾರಕರೆತ್ತಲು ಪೋದರೊ ಮತ್ತೀ। ನಾರಿಯ ಕರಪಿಡಿದು॥
ಭೊರನೆ ನೂಕಿರೆನುತ್ತಿರೆ ಪೇಳ್ದಳು। ಭೂರಮಣನೊಳವಳು ॥ ೭ ॥

ಕ. ಭೂ.– ಚಾರಕರೆ! ಎಲ್ಲಿ! ಏನನ್ನು ನೋಡುತ್ತೀರಿ. ಬಾಯಿಗೆಬಂದ ಹಾಗೆ ಹರಟೆ ಮಾತಾಡುವ ಈ ನಾರಿಯನ್ನು ಬೇಗ ಕೈಹಿಡಿದು ನೂಕಿಬಿಡಿರಿ.

ದ್ರೌ.– ಅರಸನೇ! ಸ್ವಲ್ಪ ಶಾಂತನಾಗು. ಕೋಪಿಸಿಕೊಳ್ಳಬೇಡ.

ರಾಗ– ಶಂಕರಾಭರಣ। ತಾಳ– ಏಕ.

ಇಷ್ಟು ಕೋಪವೇತಕಯ್ಯ। ಸೃಷ್ಟಿಪಾಲ ಕೇಳು ನಿನ್ನ।
ದಿಟ್ಟತನವು ಸಲ್ಲದೆಂದು। ತಟ್ಟನುಸುರುವೆ ॥ ೧ ॥

ದ್ರೌ.– ಕಮಲ ಭೂಪಾಲ! ಇದೇನು ಸಿಟ್ಟು? ದುಡುಕತನದಿಂದ ಅನರ್ಥ ತಂದುಕೊಳ್ಳುವುದು ವಿಚಾರಶೀಲರ ಲಕ್ಷಣವಲ್ಲ. ಇದೋ ಒಂದು ಮಾತು ಹೇಳುತ್ತೇನೆ. ನೀನೊಬ್ಬ ದೇಶಪಾಲಕ. ವಿವೇಕವಿಲ್ಲದೆ ಈ ನಿರ್ಧಾರ ಮಾಡುವುದು ನ್ಯಾಯವೆ? ಹೆಮ್ಮೆಯಿಂದ ದಿಟ್ಟತನ ತೋರಿಸುವುದು ರಾಜ ಭೂಷಣವೇ ಎಂದು ತಿಳಿದುಕೊಂಡೆಯಾ?

ತೃಣವ ಮುರಿದು ಸಾರುವೆನಿ। ನ್ನಣುಗೆ ರತಿಯುಸ್ಮರನಿಗೀಯು।
ದಣಕವಾಡಿದರೆ ಕೆಡುವೆ। ಕ್ಷಣದೊಳೆಂದಳು ॥೨॥

ದ್ರೌ– ಕಡ್ಡಿ ಮುರಿದು ಹೇಳಿದ ಮೇಲೆ ಬೇರೆ ಮಾತಿನ ಅಗತ್ಯವಿಲ್ಲವೆಂದು ನೀನೂ ತಿಳಿದಿರುತ್ತಿ. ಹಾಗೆ ನಾನೂ ಹೇಳುತ್ತೇನೆ. ಈ ನಿನ್ನ ಮಗಳನ್ನು ನನ್ನಳಿಯನಾದ ಮನ್ಮಥನಿಗೆ ಮದುವೆ ಮಾಡಿಕೊಡು. ಅವಿವೇಕದಿಂದ ವಿರೋಧಕೊಟ್ಟರೆ ಖಂಡಿತ ಕೆಟ್ಟುಹೋಗುತ್ತೀ. ಈ ದಿನದಿಂದಲೇ ನಿನ್ನ ಅವನತಿಯೂ ಆರಂಭವಾಯ್ತೆಂದು ತಿಳಿದುಕೋ ಇನ್ನೂ ಏಕೆ ಹೀಗೆ ಹೇಳುತ್ತೇನೆಂದು ಬಲ್ಲೆಯಾ?

ಇಷ್ಟಾದ ಮೇಲಿನ್ನು ಹರಿಯು। ಸಿಟ್ಟಿನಿಂದಿಲ್ಲಿಗಯ್ತಂದು।
ಕುಟ್ಟಿ ನಿನ್ನ ಬಳಿಕ ಸುತೆಯು। ತಟ್ಟನೊಯ್ವನು ॥೩॥

ದ್ರೌ– ರಾಜನೇ! ಮಾತು ಕೊಟ್ಟು ಅದರಂತೆ ನಡೆಯದ ವಂಚಕನೆಂದು ಕೃಷ್ಣಸ್ವಾಮಿಗೆ ಹೇಳಿದರೆ ಏನಾಗುವುದು ಗೊತ್ತೇ? ಅವನ ಕ್ರೋಧಾಗ್ನಿಯು ಮುಂದೆ ಉರಿದುಹೋದವರನ್ನು ನೆನಪಿಗೆ ತಂದುಕೊ. ಏಕೆಂದರೆ ಮೊದಲು ನಿನ್ನ ವಧೆಮಾಡಿ, ಮಗಳಾದ ರತಿಯನ್ನು ಕೊಂಡು ಹೋಗುವುದು ಖಂಡಿತ ಅದಕ್ಕಿಂತ ಮುಂಚೆಯೇ ಈ ಸಂಬಂಧವನ್ನು ಒಪ್ಪಿಕೊಳ್ಳುವುದು ಲೇಸಾದ ಕಾರ್ಯ.

ಕ. ಭೂ- ನಿನ್ನಂತಹ ಹೆಂಗಸಿಗೆ ಎಷ್ಟು ಹೇಳಿದರೂ ಅಷ್ಟೆ! ಆ ಹರಿ ಎಲ್ಲಿ? ಕೊಲ್ಲುವುದಾರನ್ನು? ಎಂತಹ ಹುಚ್ಚು ಮಾತು.

ಕೊಟ್ಟ ಭಾಷೆನಡೆಸದಿಂತು। ಸೃಷ್ಟಿಗೊಡೆಯನಿರಲು ಕಂಡು।
ಬಟ್ಟೆದೋರದಾಗ ಪೊರ। ಮುಟ್ಟಳು ಕೃಷ್ಣೆ ॥೪॥

ದ್ರೌ- ತಾನು ಹೇಳಿದ್ದನ್ನು ಅಲ್ಲಗಳೆಯುವ ಈ ಅರಸನಲ್ಲಿ ಇನ್ನೇನು ಮಾತು? ಹೀಗೆ ಮಾತಾಡುತ್ತಾ ಅಪಮಾನ ಪಡುವುದಕ್ಕಿಂತ ಹೊರಡುವುದೇ ಉತ್ತಮ. ಕೃಷ್ಣಾ! ಕೈಗೆ ಬಂದುದು ಬಾಯಿಗೆ ಬರಲಿಲ್ಲ. ನನ್ನೀ ಸೇವೆಯನ್ನು ಸಂಪೂರ್ಣಗೊಳಿಸುವ ಯೋಗವೂ ಇಲ್ಲ. ಇರಲಿ. ಬೇಗನೆ ಹೊರಡುವೆನು. ಈ ರಾಜನ ಕಠಿನ ಹೃದಯವು ಎಂದು ಬದಲಾಗುವುದೋ. ಕೃಷ್ಣಾ! ಮುಕುಂದಾ! ನೀನೇ ಯೋಚನೆ ಹೂಡು.

ರಾಗ- ಭೈರವಿ, ತಾಳ- ಝಂಪೆ.

ಧರೆಯಧಿಪ ಕೇಳಿಂತು। ವರಕಮಲ ಭೂಪನಿಗೆ।
ತರುಣಿಮಣಿ ರತಿಯುದಿಸಿ। ಮೆರೆದಿರಲ್ಕಂದು ॥೧॥

ರತಿ ದೇವಿ- ರಾಜ ಕುಮಾರಿಯಾದ ನನ್ನ ಭಾಗ್ಯಕ್ಕೆ ಏನು ಕಡಮೆ? ತಂದೆಯವರ ಸಂಪೂರ್ಣ ಪ್ರೇಮವೂ ನನ್ನ ಮೇಲಿದೆ. ಆದರೆ ಮನಸ್ಸು ಮಾತ್ರ ಅಸ್ವಸ್ಥವಾಗಿದೆ. ಅದೇಕೆ? ಜೀವನದಲ್ಲಿ ಪಡೆಯಬೇಕಾದ ಸ್ಥಾನವನ್ನು ಇನ್ನೂ ಸೇರಲಿಲ್ಲ. ಹಿಂದಿನ ಜನ್ಮಸ್ಥಿತಿಯನ್ನು ಸ್ಮರಿಸಿಕೊಂಡರೆ ನಿದ್ರೆಯೂ ಇಲ್ಲ. ಇಷ್ಟರಲ್ಲಿ ಸಖಿಯೋರ್ವಳು ಬಂದು ನಮ್ಮಪ್ಪನ ಓಲಗದಲ್ಲಿ ನಡೆದ ಸಮಾಚಾರವನ್ನೂ ತಿಳಿಸಿದಳು. ಇದರಿಂದ ನಿದ್ರೆ-ಸಂತೋಷಗಳೆರಡೂ ಇಲ್ಲ. ಅಯ್ಯೋ ಸಂತಾಪವೇ! ಇದಕ್ಕೇನು ಉಪಾಯವಿರಬಹುದು?

ಕುಂತಿಸುತರರಸಿಯೊಡ। ನಿಂತುಪಿತನಾಡಿದುದ।
ನಂತರಂಗದಿ ತಿಳಿದು। ಚಿಂತಿಸಿದಳವಳು ॥೨॥

ರತಿ- ಹಾ ದೈವವೇ! ನನ್ನ ತೀರ್ಥರೂಪರು ಹೀಗೇಕೆ ಮಾಡಿದರು? ಕನ್ಯಾರ್ಥಿಯಾಗಿ ಬಂದ ದ್ರೌಪದೀ ದೇವಿಯನ್ನು ಧಿಕ್ಕರಿಸಿದರಂತೆ. ಯಾವ ಮಹಾ ಯೋಗವನ್ನು ನಾನು ಪ್ರತೀಕ್ಷಿಸುತ್ತಿದ್ದೆನೋ ಆ ಸನ್ನಿವೇಶವು ಹತ್ತಿರವಾದರೂ ದೂರವಾಗುವುದೆಂದರೆ ಏನು ಅವಿಚಾರವೋ? ಇರಲಿ. ಮೌನವಾಗಿ ಕುಳಿತು ಕರಗಿಕೊಳ್ಳುವುದಕ್ಕಿಂತ ತಂದೆಯವರ ಸಮೀಪಕ್ಕೆ ಹೋಗಿ

ನನ್ನ ವಿಚಾರಗಳನ್ನು ಹೇಳುವೆನು. ಆಗ ಅವರಲ್ಲಿದ್ದ ಅನುಮಾನಗಳು ನೀಗದಿರಲಿಕ್ಕಿಲ್ಲ.

ಬಂದು ತಾತನಿಗೆರಗಿ। ನಿಂದು ಕರಗಳ ಮುಗಿದು।
ಚಂಗದಿಂದುಸುರಿದಳು। ಬಂದ ಕಾರ್ಯವನು ॥೩॥

ರತಿ– ಅಪ್ಪಾ! ಮಗಳಾದ ರತಿಯು ಪ್ರಣಾಮ ಮಾಡುವಳು.

ಕ. ಭೂ– ಯಾರು? ರತಿಯೇ! ಸೌಭಾಗ್ಯವತಿಯಾಗು. ಏನಮ್ಮಾ ಇದು? ಈ ರಾತ್ರಿಕಾಲದಲ್ಲೇಕೆ ಎದ್ದು ಬಂದೆ? ಏನಾದರೂ ಕಾರ್ಯವಿದೆಯೇ? ಅಥವಾ ನಿದ್ರೆ ಬರಲಿಲ್ಲವೆ? ಎಲ್ಲಾ ನಾಳೆ ವಿಚಾರಿಸುವಾ. ಈಗ ಹೋಗು. ನಿದ್ರೆ ಮಾಡು ಕಂದಾ!

ರತಿ– ತಂದೆಯೇ. ಇಂದಾಗಬೇಕಾದ ಕೆಲಸ ನಾಳೆ ಮಾಡುವುದಲ್ಲವಲ್ಲ! ಅಲ್ಲದೆ ತಮ್ಮ ಜಾಗರವನ್ನು ಕಂಡು ನಾನೂ ಬಂದೆ.

ರಾಗ- ಸೌರಾಷ್ಟ್ರ. ತಾಳ- ತ್ರಿವುಡೆ

ಏನಿದು ಹೊಸಪರಿ ರಾತ್ರಿಯೊಳು ಸಭೆ। ತಂದೆ ಕೇಳು॥
ಈಗ-ನೀನೆನ್ನ ಮೇಲತಿದಯವಿಟ್ಟು ವಿನಯದಿ। ತಂದೆ ಕೇಳು ॥೧॥

ರತಿ– ಇದೇನು ಹೊಸ ಕ್ರಮ? ಈ ಮಧ್ಯರಾತ್ರಿಯಲ್ಲಿ ಏಕೆ ಸಭೆ ಕೊಟ್ಟಿರಿ? ಏನೋ ವಿಶೇಷವಿದ್ದಂತೆ ಕಾಣುವುದು. ಮಗಳಾದ ನನಗೆ ದಯಾಭಾವದಿಂದ ಹೇಳಬಹುದೇನಪ್ಪಾ!

ಕ. ಭೂ– ಮಗಳೇ! ನಿನಗೇಕಮ್ಮಾ ರಾಜಕೀಯದ ವಿಚಾರ? ಅರಸನಿಗೆ ರಾತ್ರಿ-ಹಗಲುಗಳೆಂಬ ಭೇದವಿಲ್ಲ. ಯಾವುದೋ ಮುಖ್ಯ ವಿಚಾರಕ್ಕಾಗಿ ಸಭೆ ಸೇರಿದೆ. ಅದರರ್ಥ ನಿನಗಾಗಲಿಕ್ಕಿಲ್ಲ. ಈಗ ಹೋಗು.

ರತಿ– ಅರ್ಥವಾಗಿದೆ. ಎಲ್ಲ ತಿಳಿದೇ ಬಂದಿದ್ದೇನೆ.

ಬಾಲೆ ದ್ರೌಪದಿಯ ನುಡಿಯ ಕೇಳ್ದೆ ನಾನೀಗ। ತಂದೆ ಕೇಳು॥
ಬಹು-ಲೀಲೆಯಿಂದವಳೇನನುಸುರಿದಳೆಂಬುದ। ತಂದೆ ಕೇಳು ॥೨॥

ರತಿ– ತಮ್ಮಲ್ಲಿಗೆ ಪಾಂಡವರ ಮಹಾರಾಣಿಯಾದ ಪಾಂಚಾಲಿಯು ಏಕೆ ಬಂದಿರುವಳು? ಅದು ಮಾತ್ರವಲ್ಲ. ಯಾವ ಕಾರ್ಯಕ್ಕಾಗಿ ಬಂದಿರುವಳೆಂಬುದೂ ತಿಳಿದಿರುತ್ತೇನೆ. ಅಪ್ಪಾ! ಅವಳು ಹೇಳಿದ ಮಾತೆಲ್ಲವೂ ಸತ್ಯ

ವಿರುವಾಗ ನೀವೇಕೆ ಅರ್ಥಮಾಡಿಕೊಳ್ಳಲಿಲ್ಲ? ವೃಥಾ ಗಜರಿಕೊಂಡಿರೀ?

ಪಂಥಪೌರುಷವಾಡಿದಂತರಂಗವಿದೇನು। ತಂದೆ ಕೇಳು॥
ನಿಶ್ಚಿಂತೆಯೊಳ್ಮಗಳೆಂಬ ಮಮತೆಯೊಳೆನಗೀಗ। ತಂದೆಕೇಳು ॥೩॥

ರತಿ— ತಂದೆಯವರೇ! ವಿಚಾರವಿಲ್ಲದೆ ಏನು ಕೆಲಸ ಮಾಡಿದಿರಿ? ಹಾಗೆಲ್ಲಾ ಪಂಥಕಟ್ಟಿ ಮಾತನಾಡಿದ್ದು ಸರಿಯಲ್ಲ. ಅದರಿಂದಾಗುವ ಪರಿಣಾಮಗಳನ್ನು ತಾವೇ ಯೋಚಿಸದೆ ತಿರಸ್ಕರಿಸಿ ಬಿಟ್ಟಿರಲ್ಲಾ! ಅದಕ್ಕೇನು ಕಾರಣ? ನನ್ನ ಮೇಲೆ ಕೋಪವಿರಬಹುದೇ? ಯಾವುದನ್ನೂ ಚಿಂತೆಯಿಲ್ಲದೆ ಪ್ರೀತಿಪೂರ್ವಕವಾಗಿ ಹೇಳಬೇಕೆಂದು ಅಪೇಕ್ಷಿಸುತ್ತಿದ್ದೇನೆ.

ರಾಗ- ಸೌರಾಷ್ಟ್ರ, ತಾಳ- ತ್ರಿವುಡೆ

ತರಳೆಯೇಕೀ ಪರಿಯನುಸುರುವೆ। ಧರಣಿಪಾಲಕನಾಗಿ ಸಭೆಗೆ।
ಯಿದ್ದರಲು ಸೇರಿನ್ನಾರು ಬರುವರು। ಮರುಳು ಮಾತೇ ॥೧॥

ಕ. ಭೂ— ಮಗಳೇ! ಮಾತು ಕೇಳಿದಾಗ ನಗುವೇ ಬರುತ್ತಿದೆ. ನಾನೇನು ಕನಸು ಕಂಡೆನೇ? ಅಪ್ಸರಾದವರು ಹೊರತು ಬೇರೆ ಇನ್ನು ಯಾರು ಬಂದಾರು? ದ್ರೌಪದಿಯು ಬಂದಳೆಂದು ಯಾರು ನಿನಗೆ ಹೇಳಿದರು? ಸುಮ್ಮನೆ ತಲೆಹರಟೆ ಮಾಡಬೇಡ. ಹೋಗು, ನಿದ್ದೆಮಾಡು.

ರತಿ— ಯಾರೂ ಬರಲಿಲ್ಲವೇ? ಈ ರಾತ್ರಿಯಲ್ಲಿ ಸಭೆ ಏಕೆ ಸೇರಿದೆ?

ಈಗಲೀ ನಡುನಿಶಿಯೊಳೊಂದು। ದ್ಯೋಗಮಂತ್ರಿಗಳೊಡನೆಯೋಚಿಸ।
ಲಾಗಿ ತಾನೋಲಗವನಿತ್ತೆ ಸ। ರಾಗದಿಂದ ॥೨॥

ಕ. ಭೂ— ಅಮ್ಮಾ! ಈ ಮಂಕು ಬುದ್ಧಿಗೆ ಏನು ಹೇಳಲಿ? ನೀನು ಸಣ್ಣವಳು. ರಾಜಕೀಯದ ಅರ್ಥ ನಿನಗಾಗದು. ನಮ್ಮ ನಾಡಿಗೆ ಸಂಬಂಧಿಸಿದ ಯಾವುದೋ ಕಾರ್ಯಭಾರವನ್ನು ನಿರ್ಣಯಿಸುವುದಕ್ಕಾಗಿ ಮಂತ್ರಿಮುಖ್ಯರನ್ನು ಸಭೆ ಕೂಡಿಸಿದ್ದೆ. ಈಗ ಯಾವ ನಿರ್ಧಾರವೂ ಆಗಲಿಲ್ಲ. ಅಷ್ಟರಲ್ಲಿ ನೀನು ಬಂದುಬಿಟ್ಟೆ!

ರತಿ— ಇದೊಂದು ಕಣ್ಣುಮುಚ್ಚಾಲೆಯ ಆಟ. ಆದರೂ ನಿಶ್ಚಯಿಸಬೇಕಾದ ಸಂಗತಿಯೇನು. ಅದನ್ನು ಕೇಳಿ ಹೋಗುತ್ತೇನೆ.

ಬರಿದೆ ನಿನಗೇಕಾವಿಚಾರವು। ತೆರಳು ಸಜ್ಜಾಗೃಹಕೆನಲು ಪದ।
ಕೆರಗಿ ಬಿನ್ನಹ ಮಾಡಿದಳು ತ। ನ್ನಿರವನಾಗ ॥೩॥

ಕೆ. ಭೂ- ರತಿ! ಅಧಿಕಪ್ರಸಂಗಕ್ಕೆ ಸಮಯವಿಲ್ಲ. ಚಿಕ್ಕವಳಾಗಿರು. ನಿನಗೆ ಹೆಚ್ಚಿನ ವಿಷಯ ಬೇಡ. ಹಾಗೆ ವಿಚಾರ ಮಾಡುವುದಕ್ಕೂ ಜ್ಞಾನಸಾಧನ ಬೇಕು. ಎಂದಾದರೂ ನಿನಗೆ ವಂಚಿಸಿರುವೆನೇ? ನೀನೇ ನನ್ನ ಸರ್ವಸ್ವ. ನಿನಗೆ ತಿಳಿಸಬಹುದಾದ ವಿಷಯವಾಗಿದ್ದರೆ ವಿಳಂಬಮಾಡುತ್ತಿದ್ದೆನೇ? ಹೋಗು. ಬೆಳಗಾದ ಮೇಲೆ ಮಾತನಾಡುವ.

ರತಿ- ತಾತ! ನನ್ನ ಮತ ಬೇರೆ. ವಿಷಯ ಹೇಳುತ್ತೇನೆ.

ರಾಗ- ಬಿಲಹರಿ, ತಾಳ- ಏಕ

ತಂದೆ ಲಾಲಿಸಿ ಕೇಳು। ಸಂದೇಹಗೊಳದಿರು। ಪಿಂದಣಾಗಮವ
ನಾನಿಂದೆಂಬೆ ನಿನಗೆ॥ ಬಂದುದನರಿತೆನು ದ್ರುಪದನಂದನೆ ತಾನು।
ಚೆಂದದಿ ಪೇಳುವೆನದನು ಲಾಲಿಪುದು ॥೧॥

ರತಿ- ಅಪ್ಪಾ! ನಿಮ್ಮನ್ನು ಕೆರಳಿಸುವುದಕ್ಕಾಗಿ ಹೀಗೆ ಮಾತಾಡುತ್ತಿರುವೆನೆಂದು ತಿಳಿಯಬೇಡ. ಈ ವರೆಗೆ ನನ್ನ ಮನಸ್ಸಿನಲ್ಲಿ ಯಾವ ರಹಸ್ಯವಿದೆಯೆಂದು ಯಾರೂ ತಿಳಿಯಲಿಲ್ಲ. ಅದನ್ನು ಪೂರೈಸುವುದಕ್ಕಾಗಿಯೇ ದ್ರೌಪದಿಯು ಇಲ್ಲಿಗೆ ಬಂದಿರುವಳೆಂದು ತಿಳಿದೆ. ಈ ಸಂದರ್ಭದಲ್ಲಿ ನನ್ನ ಜನ್ಮದ ಹಿನ್ನೆಲೆಯನ್ನೂ ಮುಂದಿನ ಗುರಿಯನ್ನೂ ಭಿನ್ನೈಸುತ್ತೇನೆ. ಸಂದೇಹಪಡದೆ ಕೇಳಬೇಕಾದ ವಿಷಯವಿದು.

ದ್ವಾರಕೆಯೊಳು ಸಚ್ಚಿದಾನಂದನಿರುತಿಹ। ಧೀರನಾತನ ಪುತ್ರ
ಮಾರನೆಂಬವನು॥ ಧಾರೆಯನೆಸಗೆನ್ನ ಮದುವೆಯನೆಸಗಲು।
ನಾರಿ ದ್ರೌಪದಿ ಬಂದಳೀ ರೀತಿಗಾಗಿ ॥೨॥

ರತಿ- ತಂದೆಯೆ! ಸಚ್ಚಿದಾನಂದ ಮೂರುತಿಯಾದ ಶ್ರೀ ಕೃಷ್ಣ ಸ್ವಾಮಿಯು ದ್ವಾರಕೆಯಲ್ಲಿರುವನೆಂಬುದು ತಮಗೂ ತಿಳಿದಿದೆ. ಆ ಮಹಾನುಭಾವನ ಮಗನಾದ ಮಾರನೆಂಬವನಿಗೆ ನನ್ನನ್ನು ಧಾರೆಯೆರೆದು ಕೊಡು. ಅದಕ್ಕಾಗಿ ಪಾಂಡವರ ಪತ್ನಿ ದ್ರೌಪದಿಯು ಇಲ್ಲಿಗೆ ಬಂದಿದ್ದಳೆಂದು ನಾನು ತಿಳಿದಿರುವೆ. ಪಾಪ! ನಿನ್ನ ಮಾತಿನಿಂದ ಅವಳಿಗೆ ಬೇಸರವಾಯಿತೋ ಏನೊ!

ಕೆ. ಭೂ- ನನಗಾದ ಬೇಸರ ನಿನಗೆ ತಿಳಿಯಲಿಲ್ಲ. ಆ ಕೃಷ್ಣನ ರೀತಿ ನೀತಿಗಳನ್ನು ಅರಿತವಳಾಗಿದ್ದರೆ ನೀನು ಹೀಗೆ ಮಾತನಾಡುತ್ತಿರಲಿಲ್ಲ.

ರತಿ- ಅಪ್ಪಾ! ತಪ್ಪಾಗಿ ತಿಳಿದಿದ್ದಿ. ಅವರು ಪರಕೀಯರಲ್ಲ.

ಸಾರಸನಾಭ ಹಲಾಯುಧರೆಂದೆಂಬ। ವೀರರೀರ್ವರು ಕೇಳು
ಮಾವಂದಿರೆನಗೆ। ನಾರಿಯರ್ಪದಿನಾರು ಸಾವಿರದೆಂಟು ವಿ।
ಚಾರಿಸಲದರೊಳು ರೇವತಿ ಸಹಿತ ॥೩॥

ರತಿ– ಕಮಲನಾಭನೂ ಅವನಣ್ಣ ಬಲಭದ್ರನೆಂಬ ಯಾದವರಾಯನೂ ದೂರದವರಲ್ಲ. ನನಗೆ ಮಾವಂದಿರು. ಆ ವಿಚಾರ ಮುಂದೆ ತಿಳಿಯುವುದು. ಹೀಗಿರುವಾಗ ಹದಿನಾರುಸಾವಿರದ ಎಂಟುಮಂದಿ ಕೃಷ್ಣನರಸಿಯರೂ ಬಲರಾಮದೇವರ ಸತಿ ರೇವತಿ ಸಹಾ ನನಗೆ ಏನಾಗುತ್ತಾರೆಂದು ಹೇಳುವಿಯಾ? ಈಗಲೇ ಹೇಳಲು ಸ್ವಲ್ಪ ಲಜ್ಜೆಯಾಗುವುಲ್ಲವೇ ನನಗೆ?

ರಾಣಿಯರೆನಗತ್ತೆಗಳು ಬಳಿಕಾ ಪಂಚ। ಬಾಣನು ಪತಿಯೆಂಬು
ದರಿಯೆಯ ತಾತ॥ ಪ್ರಾಣವಲ್ಲಭನನ್ನು ಕಾಣದೆನ್ನಯ ಮನ।
ಕಾನಂದವಾಗದಿನ್ನೇನೆಂದುಸುರಲಿ ॥೪॥

ರತಿ– ಅಪ್ಪಾ! ಅವರೆಲ್ಲ ನನಗೆ ಅತ್ತೆಯರು. ಶ್ರೀ ಕೃಷ್ಣನ ಪುತ್ರನೂ ಐದು ಪುಷ್ಪಬಾಣಗಳಿಂದ ಕೂಡಿದವನೂ ಆದ ಮನುಮಥನು ನನ್ನ ಪ್ರಾಣನಾಥನೆಂದು ನಾನು ತಿಳಿದಿರುವೆ. ಹೆಣ್ಣಾದ ನಾನು ನಿನಗಿದನ್ನು ಹೇಗೆ ವಿವರಿಸಲೆಂದು ತಿಳಿಯದು. ಸುಮ್ಮನಿರುವಿಯೇಕೆ? ನಾನು ನಾಚಿಕೆಗೆಟ್ಟವಳೆಂದೇ? ಇಲ್ಲ! ನನಗೆ ಮತ್ತಾವ ಇಚ್ಛೆಯೂ ಇಲ್ಲ. ಪತಿಯ ದರ್ಶನಕ್ಕಾಗಿ ಆತುರಪಡುತಿದ್ದೇನೆ. ಕೇಳು! ಇನ್ನು ಮಾಡಬೇಕಾದುದನ್ನೂ ಹೇಳುತ್ತೇನೆ. ಎಂತಿದ್ದರೂ ನನ್ನ ತಂದೆಯಲ್ಲವೆ?

ಕರೆಸು ದ್ರೌಪದಿಯಾಳನಿರಿಸು ಲಗ್ನವ ಬೇಗ। ಒರೆದೆ ಕೋಪಿಸ
ದಿರೀಗೊರೆಯುವೆ ನಿನಗೆ॥ ಸ್ಮರಜನಕನ ಮೇಲೆ ಪರಿಭೇದವೀ
ಪರಿ ತರವಲ್ಲ ಶೀಘ್ರದಿ ಪರಿಣಯವೆಸಗು ॥೫॥

ರತಿ– ದ್ರೌಪದಿಯು ದೂರ ಹೋಗಿರಲಿಕ್ಕಿಲ್ಲ. ಈಗಲೇ ಅವಳನ್ನು ಕರೆತಂದು ಮದುವೆಯ ವ್ಯವಸ್ಥೆ ಮಾಡುವುದಕ್ಕೆ ತಿಳಿಸಿರಿ. ಅವಳು ಅಪಮಾನವೆಣಿಸದಂತೆ ಕ್ಷಮೆ ಕೋರಬಹುದು. ಮನ್ಮಥನಂತಹ ಮಗನನ್ನು ಪಡೆದ ನನ್ನ ಮಾವನ ಮೇಲೆ ಅಷ್ಟು ಕೋಪಿಸದೆ ನನ್ನ ಹಿತಕ್ಕಾಗಿ ನನ್ನ ಈ ಆಶೆಯನ್ನು ಪೂರೈಸಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಕ. ಭೂ– ಮಗಳೇ! ಏನಾಗಿದೆ ನಿನಗೆ? ಯಾರನ್ನೋ ಮಾವನೆಂದೂ,

ಅತ್ತೆಯವರಿಂದೂ ಅತ್ತರಿ ಮುಗಿಯಿತೇ? ವೃಥಾ ಮನ್ಮಥನನ್ನು ಪತಿಯೆಂದು ಕರೆದು ಅಪಹಾಸ್ಯಕ್ಕೊಳಗಾಗಬೇಡ. ನನ್ನ ಮಾನ ಕಳೆಯುವಲ್ಲಿಗೆ ಬಂದ ಳಲ್ಲಾ! ಶಿವಶಿವಾ! ನನ್ನ ಮಗಳ ಬುದ್ಧಿ ಹೀಗೇಕಾಯಿತು?

ರತಿ. ನನ್ನ ಬುದ್ಧಿ ಸ್ವಸ್ಥವಿದೆ. ನಾನು ಯಾರ್ಯಾರನ್ನೊ ಅತ್ತೆ ಮಾವಂದಿ ರೆನ್ನಲಿಲ್ಲ. ತಂದೆಯೇ! ನಾನೀಗ ನಿಮ್ಮ ಮಗಳಾಗಿದ್ದರೂ ಹಿಂದಿನ ಜನ್ಮದಲ್ಲಿ ಯಾರಾಗಿದ್ದೆನೆಂದು ನಾನು ತಿಳಿದುಕೊಂಡೆ ನಿಮಗದು ತಿಳಿಯದು.

ಹಿಂದೆ ಶಂಬರನೊಳು ಸೆರೆಯಸಿಕ್ಕಿದರೆನ್ನ। ನಂದು ಬಿಡಿಸಿದನು
ಕೊಂದು ರಕ್ಕಸನ॥ ಬಂದು ನಾರದ ಕಾಮಗೆಂದನು ನೀನವ।
ಳಿಂದ ಕಿರಿಯ ಕೀರ್ತಿಕುಂದುವುದೆನುತ ॥೭॥

ರತಿ– ಈ ಹಿಂದೆ ಶಂಬರಾಸುರನ ಬಂಧನಕ್ಕೊಳಗಾಗಿದ್ದು ಮಾಯಾ ವತಿಯೆಂಬ ಹೆಸರಿನಲ್ಲಿ ದುಡಿಯುತಿದ್ದೆ. ಕಾಮದೇವನು ರುಕ್ಮಿಣಿಯುದರಲ್ಲಿ ಜನಿಸಿ ಬಂದು, ಶಂಬರಾಸುರನನ್ನು ಕೊಂದು, ನನ್ನನ್ನು ಉದ್ಧರಿಸಿದನು. ಒಂದು ದಿನ ಅಲ್ಲಿಗೆ ಬಂದ ನಾರದರು ನನ್ನ ಸೇವೆಗೆ ಸಂತುಷ್ಟರಾದರೂ, ನಮ್ಮ ಈ ದಾಂಪತ್ಯವು ಲೋಕಕ್ಕೆ ವಿರುದ್ಧವಾದುದೆಂದೂ ತಿಳಿಸಿದರು. ಅದರಿಂದ ಹಿರಿಯುವಳಾದ ನಾನು ಆ ಕುಂದನ್ನು ಕಳೆದುಕೊಳ್ಳಲು ಅಗ್ನಿಪ್ರವೇಶಿಸಿದೆ. ಈ ಕಥೆ ನೀನೂ ಕೇಳಿರುವೆಯಲ್ಲ?

ಕ. ಭೂ. ಈ ಕಥೆ ಬಹಳ ಸ್ವಾರಸ್ಯವಿದೆ. ಮುಂದೆ?

ಎಂದ ನುಡಿಯ ಕೇಳಿ ಬಂದಿಲ್ಲಿ ಜನಿಸಿದೆ। ನಿಂದೇತಕೀಪರಿ
ಸಂದೇಹ ನಿನಗೆ॥ ಚೆಂದದಿ ಮದುವೆಯ ನಿಂದು ನೀನೆಸಗಲು
ಮುಂದೆ ರಕ್ಷಿಸುವ ಮುಕುಂದ ತಾನೊಲಿದು ॥೮॥

ರತಿ ಅಪ್ಪಾ! ಅವಳೇ ಈ ನಿನ್ನ ರತಿ! ನನ್ನ ಪತಿಯಲ್ಲಿಗೆ ನಾನು ಹೋ ಗುವ ಸಮಯುವೀಗ ಬಂದಿದೆ. ತಂದೆಯಾದ ನಿನ್ನ ಕರ್ತವ್ಯ ಪೂರ್ಣಪಡಿಸಿದರೆ ಆ ಮುಕುಂದಮೂರುತಿಯಾದ ಕೃಷ್ಣನು ಸಂತೋಷಪಟ್ಟು ನಮ್ಮನ್ನೆಲ್ಲಾ ಕಾಪಾಡುವನು. ನನ್ನ ಪತಿಯು ಎಷ್ಟು ಹಂಬಲಿಸುವನೋ!

ಕ. ಭೂ– ಮಗಳೇ! ದೈವ ಕಲ್ಪಿತವಿದು ನೀನು ನನ್ನ ಮಗಳಾದರೂ ಶ್ರೀ ಕೃಷ್ಣನ ಸೊಸೆಯಾಗಿರುತ್ತೀ. ಮೊದಲೆ ನನಗೆ ತಿಳಿದಿದ್ದರೆ ಎಷ್ಟು ಚೆನ್ನಾ ಗುತಿತ್ತು? ದ್ರೌಪದಿಗೆ ಬೇಸರಬರುವಂತೆ ಮಾತನಾಡಿ ಕಳಿಸಿದೆನಲ್ಲಾ! ಅಲ್ಲದೆ

ಕ್ಷತ್ರಿಯನಾದ ನಾನು ಸ್ತ್ರೀಯೊಬ್ಬಳಲ್ಲಿ ಕ್ಷಮೆಕೇಳುವುದೂ ಅಪಹಾಸ್ಯವೇ. ಇದಕ್ಕಾಗಿ ಏನು ಮಾಡುವುದೆಂದೂ ಹೊಳೆಯದು.

ರತಿ– ಅದಕ್ಕೇಕೆ ಚಿಂತೆ? ದ್ರೌಪದಿಯು ಸಾಮಾನ್ಯ ಹೆಣ್ಣಲ್ಲ.

ಪರಮ ಪತಿವ್ರತೆ ಚಂಡಿಸ್ವರೂಪದ। ಮುರವೈರಿಯನುಜೆಯು
ತರುಣಿ ದ್ರೌಪದಿಯು॥ ಅರಿಯದೆ ನೀನವಳರವನು ಗರ್ವದಿ
ಬಿರುನುಡಿಯಾಡಿಹೆ ಕರಸು ಬೇಗದಲಿ ॥೮॥

ರತಿ– ಪತಿವ್ರತಾ ಶಿರೋಮಣಿಯಾದ ದ್ರೌಪದಿಯು ಸಾಮಾನ್ಯಳಲ್ಲ. ಮುರಹರನ ತಂಗಿಯಾದ ಅವಳು ಮುನಿದರೆ ಸಂಹಾರಸ್ವರೂಪಿಣಿ ಚಂಡಿಕೆ ಯಾದಾಳು. ದಯಾಮಯನಾದ ವಾಸುದೇವನ ತಂಗಿ ಅವಳೇ ಹೀಗೆಂದು ತಿಳಿದು, ತಿಳಿಯದೇ ಮಾಡಿದ ಅಪರಾಧಕ್ಕಾಗಿ ಕ್ಷಮೆ ಕೇಳಿದರೆ ಅವಳು ಸಮಾಧಾನಗೊಂಡು ಸಹಕರಿಸುವ ತಾಯಿಯಾದಾಳು. ಈಗಲೇ ಹೋಗು.

ಭಾಮಿನಿ

ಎಂದ ಸುತೆಯಳ ನುಡಿಗೆ ಭೂಪತಿ। ನೊಂದು ಮನದಲಿ
ದ್ರುಪದಜೆಯ ಬಳಿ। ಗಿಂದು ತಾ ಪೋಗುವೆನೆನುತ ನಿಶ್ಚಯಿಸಿ
ತ್ವರಿತದೊಳು॥ ಬಂದನುತಿಸುತಲೆರಗಿ ಪಾದಕೆ। ಮಂದಬುದ್ಧಿಯ
ಜಿಟ್ಟೆನೀಗಳು। ನಂದನೆಯ ತಾ ಕೊಡುವೆ ಪಾಲಿಸು ಕೋಪಿಸದಿರೆಂದ॥

ಕ. ಭೂ– ಮಗಳ ಮಾತುಗಳು ನನ್ನ ಕಣ್ಮನಗಳನ್ನು ಅರಳಿಸಿಬಿಟ್ಟವು. ಪ್ರಾಯಕ್ಕೆಬಂದ ಮಗಳಇಚ್ಛೆಯನ್ನು ತಂದೆಯಾದವನು ತಾನಾಗಿಯೇ ತಿಳಿದು ಮಾಡಬೇಕಾದ ಕೆಲಸವಿದು. ಈಗಂತೂ ಒಳ್ಳೆಯದೇ ಆಯಿತು. ರತಿ ಮತ್ತು ಮನ್ಮಥರ ಸಂಬಂಧ ಜನ್ಮಾಂತರದ್ದು. ಕಾಲಗೌರವ ಕಾಯ್ದುಕೊಳ್ಳುವ ಇಂತಹ ಪುಣ್ಯಾತ್ಮೆಗೆ ತಂದೆಯಾಗುವುದು ಅಸಾಮಾನ್ಯ ಭಾಗ್ಯವೆ? ಸರಿ ಸರಿ. ಇನ್ನು ವಿಳಂಬ ಮಾಡಿದರೆ ಕಾರ್ಯ ಕೆಡುವುದು. ಅಮ್ಮಾ! ದ್ರೌಪದಿ. ಕೋಪಿಸದೆ ನನ್ನ ಮಾತನ್ನು ಕೇಳು. ನಾನು ಅಜ್ಞಾನದಿಂದ ನಿನ್ನ ಮನನೋಯಿಸಿದೆ. ಕ್ಷಮಿಸು. ನಿನ್ನಿಷ್ಟದಂತೆ ನಡೆಯುವೆನು.

ದ್ರೌ– ನೀನು ಸಾಮಾನ್ಯ ಮನುಷ್ಯನಲ್ಲ. ಮಾತು ಮೀರಿದವರಿಗೆ ಶಾಸನ ಮಾಡುವ ರಾಜನಾಗಿರುವಿ. ನೀನಾಗ ಭಾಷೆ ಕೊಟ್ಟು ತಪ್ಪಿದ್ದೀ. ಈಗ ನಿನ್ನ ಪರಿವರ್ತನೆಯಿಂದ ನನಗೆ ಭರವಸೆಯೇನು?

ರಾಗ- ಸುರುಟಿ, ತಾಳ ಏಕ.

ಲಾಲಿಸು ದ್ರುಪದ ಸುತೆ। ಕರುಣದಿ-ಪಾಲಿಸು ವಿಖ್ಯಾತೆ। ನೀಲಾಂಗನ
ವರ ಬಾಲಗೆ ಕುವರಿಯ। ಲೀಲೆಯೊಳೀವೆನು ಕೇಳೀ ಮಾತನು ॥೧॥

ಕ. ಭೂ- ಲೋಕವಿಖ್ಯಾತೆಯಾದ ನಿನ್ನಲ್ಲಿ ಅಪರಾಧಗೈದಂತಾಗಬಾರದೆಂದೇ ಪುನಹ ಬಂದು ಕೇಳುತಿದ್ದೇನೆ. ತಾಯಿ! ನೀಲವರ್ಣನ ಮಗ ಮನ್ಮಥನಿಗೆ ರತಿಯನ್ನು ಕೊಡುವೆನು. ಸತ್ಯವಾದ ಮಾತಿದು. ಇದಕ್ಕೆ ತಪ್ಪಲಾರೆ.

ದ್ರೌ- ಮಾತಿಗಿಂತ ಕೃತಿ ಮೇಲು. ಈಗಲೇ ಕೊಡಬೇಕಾದೀತು! ನನ್ನಣ್ಣನ ಆಜ್ಞೆಯೂ ಹಾಗೆ. ಅವನಿತ್ತ ಅವಧಿಯೂ ಸಮೀಪಿಸಿದೆ.

ನಾಳೆಯೆ ಲಗ್ನವನು। ರಚಿಸಲಿ-ಕಾಲಸ್ಯವಿದೇನು। ಶ್ರೀಲೋಲನಿ
ಗೆನ್ನಾಲೋಚನೆಯನು। ಪೇಳೌಹರುಷೋನ್ಮೂಲದ ವಾರ್ತೆಯ ॥೨॥

ಕ. ಭೂ- ನಿನ್ನ ಮಾತಿಗೆ ಇನ್ನು ಆಕ್ಷೇಪವಿಲ್ಲ. ಮಗಳ ಭಾಗ್ಯದಿಂದ ಒದಗಿ ಬಂದಿರುವ ಈ ಕಾರ್ಯವು ಬೇಗ ಆದಷ್ಟು ನನಗೆ ಸಂತೋಷ. ನನ ಈ ಅಭಿಪ್ರಾಯವನ್ನು ಲಕ್ಷ್ಮೀಲೋಲನಾದ ನಿನ್ನಣ್ಣನಿಗೆ ತಿಳಿಸಿ, ಎಲ್ಲವೂ ಸಾಂಗವಾಗಿ ನೆರವೇರುವಂತೆ ಮಾಡಿದರೆ ನನ್ನ ಪುಣ್ಯಕ್ಕೆ ಎಣೆಯುಂಟೆ?

ನಿನ್ನಯ ಮಹಿಮೆಯನು। ತಿಳಿಯದೆ-ಮುನ್ನವಮಾನವನು। ಎನ್ನಿಂದಾ
ಯ್ತಾದನುನ್ನತ ಕೃಪೆಯೊಳು। ಸನ್ಮತದಿಂದಲಿ ಮನ್ನಿಸು ಕಾರ್ಯವ ॥೩॥

ಕ. ಭೂ- ಅಮ್ಮಾ ದ್ರೌಪದಿ! ನಿನ್ನ ಮಹಿಮೆ ತಿಳಿಯದೆ ಅವಮಾನಪಡಿಸಿದೆ. ನನ್ನ ವಿಚಾರಹೀನ ವರ್ತನೆಗಾಗಿ ನಾನೆಷ್ಟು ಮೊರೆಯಿಟ್ಟರೂ ಕಡಿಮೆಯೇ ಆದೀತು. ನೀನು ಕ್ಷಮೆತೋರಿ ಈ ಮಹಾ ಕಾರ್ಯವನ್ನು ನಡೆಸಿಕೊಡಬೇಕು ತಾಯಿ!

ಮನ್ಮಥಪಿತ ದಯದಿ। ಸ್ನೇಹವ-ನೆನ್ನೊಳಿಡುವ ತೆರದಿ। ಚೆನ್ನಾಗುಸು
ರುತ ಭಿನ್ನಭೇದಗ। ಳೆನ್ನೊಳಿಡದೆ ಕರೆಸಿನ್ನವರೆಂದನು ॥೪॥

ಕ. ಭೂ- ನನ್ನ ತಿಳಿಗೇಡಿ ತನದಿಂದ ನಿನಗಾದ ಅಪಮಾನ ವಿಚಾರವನ್ನು ಮದುಮಗನ ತಂದೆಯಾದ ಕೃಷ್ಣನಿಗೆ ತಿಳಿಸಿದರೆ ಅವನಿಗೂ ಬೇಸರವಾಗಬಹುದು. ಸಂಬಂಧವುಂಟಾದ ಮೇಲೆ ಎಂದೆಂದಿಗೂ ಭೇದಭಾವಗಳು ಬಾರದಂತೆ ನಮ್ಮನ್ನು ರೂಪಿಸುವ ಭಾರವು ನಿನ್ನ ಮೇಲಿದೆ. ಅಮ್ಮಾ! ಬೇಗ ನಿನ್ನವರನ್ನೆಲ್ಲ ಕೂಡಿಕೊಂಡು ಬಂದು ಈ ಶುಭಕಾರ್ಯ ನಡೆಯುವಂತೆ ಮಾಡು.

ಭಾಮಿನಿ

ತಾಯೆ ದ್ರೌಪದಿ ನಿನ್ನ ನಂಬಿದೆ। ಮಾಯಕದ ಮಾತಲ್ಲ ನಿಜವಿದು!
ಕಾಯಬೇಕಿಂದೆನ್ನ ಮರೆತು ಶತಾಪರಾಧವನು॥
ಆಯತದಿ ದಯೆಯಿಟ್ಟು ಪಾಂಡವ। ಜಾಯೆ ನೀನೀ ಕಾರ್ಯವೆಸಗಲು।
ತೋಯಜಾಂಬಕಗುಸುರಿ ನಿರ್ವಿಘ್ನತೆಯ ಕರುಣಿಪುದು ॥೧॥

ಕ. ಭೂ– ಪಾಂಚಾಲ ತನಯೆ! ನಿನ್ನನ್ನೇ ಮನಃಪೂರ್ವಕವಾಗಿ ನಂಬಿದ್ದೇನೆ. ಈ ಮಾತು ಹಿಂದೆ ಆಡಿದಂತಲ್ಲ. ಸತ್ಯವೆಂದು ತಿಳಿದುಕೊ. ನನ್ನಿಂದ ನೂರಾರು ಅಪರಾಧಗಳಾಗಿದ್ದರೂ ಮರೆತು ಕರುಣೆದೋರು. ನನ್ನ ಕುವರಿಯ ಭವಿಷ್ಯ ನಿನ್ನ ಕೈಯಲ್ಲಿದೆ. ವೀರ ಪಾಂಡವರ ಪತ್ನಿಯೂ ಕಮಲಾಕ್ಷನ ಭಗಿನಿಯೂ ಆಗಿರುವ ನಿನಗೆ ಯಾವುದೂ ಅಸಾಧ್ಯವಲ್ಲ. ಯಾವ ವಿಘ್ನಗಳೂ ಬಾರದಂತೆ ನನ್ನ ಆಶೆಯನ್ನು ಕೈಗೂಡಿಸಿ ರಕ್ಷಿಸಬೇಕು.

ರಾಗ- ಸೌರಾಷ್ಟ್ರ, ತಾಳ- ತ್ರಿವುಡೆ

ಇಂತು ನುತಿಸುವ ನೃಪನ ಕಾಣುತ। ಸಂತಸದಿ ದ್ರೌಪದಿಯು
ಮನ್ನಿಸಿ। ಚಿಂತೆಯನು ತೊರೆದುಸುರಿದಳು ಭೂ। ಕಾಂತನೊಡನೆ ॥೧॥

ದ್ರೌ– ಹರಿಯೆ! ನಿನ್ನ ಮಹಿಮೆ ಬಣ್ಣಿಸಿತೀರದು. ಶಿಲೆಯಂತಿದ್ದ ರಾಜನ ಹೃದಯವು ಕಲುಷಿತವಾಗಿ ಕಮಲದಂತೆ ಮೃದುವಾಗಿದೆ. ಇದೆಲ್ಲ ನನ್ನ ಯೋಗ್ಯತೆಯ ಬಲದಿಂದಾಯಿತೆ? ಅಲ್ಲ. ಸುಲಭದಿಂದ ಕಾರ್ಯವಾದರೆ ನನಗೆ ಗರ್ವ ಬರುತಿತ್ತೋ ಏನೊ! ಇನ್ನು ಏನು ಮಾಡಲಿ? ಅವಧಿಯೂ ಮುಗಿದು ಬಂತು. ಎಲ್ಲಿಗೆ ಹೋಗಲಿ? ಎಂಬ ಸಂಕಷ್ಟಗಳು ನನ್ನನ್ನಾವರಿಸಿದಾಗ ತಾನಾಗಿ ರಾಜನ ಪರಿವರ್ತನೆಯಾಗಿದೆ. ಛೆ! ಹಾಗಲ್ಲ. ನನ್ನ ಅವಧಿ, ನನಗೆ ಕಷ್ಟ! ಇಲ್ಲ. ದ್ವಾರಕೆಯಲ್ಲಿದ್ದು ಸಮಯ ಕಾಯುತ್ತಿದ್ದ ನನ್ನಣ್ಣನಿಗೆ ಕಷ್ಟಕ್ಕೆ ಬಂತು. ಅವನ ಭಾಷೆಯ ಅವಧಿ ಮುಗಿಯಲು ಬಂತು. ಇಲ್ಲವಾದಲ್ಲಿ ಕೈಮೇಲೆ ಭಾಷೆಯಿತ್ತು ತಪ್ಪಿದ ಕಮಲಭೂಪನಿಗೆ ರತಿಯು ತನ್ನ ಮಗಳೆಂದು ತಿಳಿದಿರಲಿಲ್ಲವೆ? ಈಗ ವೈಮುದುಡಿ ಮಣಿಯುವನಲ್ಲ! ಇರಲಿ. ರಾಜನೇ ದುಃಖಿಸಬೇಡ.

ಏಳರಸ ಬಿಡು ವ್ಯಾಕುಲತೆಯ ನಿ। ಶಾಲ ವೈಭವದಿಂದ ತವಕದಿ।
ನಾಳೆ ಕರೆಸುವೆ ಹರಿಯ ನಾಯದು। ಜಾಲ ಸಹಿತ ॥೨॥

ದ್ರೌ- ರಾಜನೇ! ಏದ್ದೇಳು. ನಿಶ್ಚಿಂತನಾಗಿರು. ನಿನ್ನ ವಿಷಯವಾಗಿ ನನ

ಗೇನೂ ಬೇಸರವಿಲ್ಲ. ಅಲ್ಲದೆ ಈಗಾಡಿದ ನಿನ್ನ ಮಾತಿನಿಂದಾಗಿ ಪರಮಾನಂದ ವಾಗಿದೆ. ನಿನ್ನಪೇಕ್ಷೆಯಂತೆ ಕೃಷ್ಣ ಬಲರಾಮ ಮೊದಲಾದವರು ಪರಿವಾರಸಹಿತ ನಾಳೆಯೇ ಇಲ್ಲಿಗೆ ಬರುವರು. ಅವರನ್ನು ಚೆಂದದಿಂದ ಸ್ವಾಗತಿಸಿ ಮರ್ಯಾದೆ ಯಿಂದ ಕಳುಹಿಸುವ ಹೊಣೆಗಾರಿಕೆ ನಿನ್ನದು. ನೀನು ಭಾಗ್ಯವಂತನಯ್ಯಾ.

ಬರುವರ್ಕೈ ದಿಬ್ಬಣ ಸಹಿತ ಪಂ। ಕರುಹ ಸಂಭವ ರುದ್ರತ್ರಿದಶರು।
ಪುರವಸಿಂಗರಗೈಯ್ಯುದ್ದ ಕರೆಸೈ। ಧರಣಿಪರನು ॥೩॥

ದ್ರೌ– ಭೂಪತಿಯೇ! ಇದೊಂದು ಮಹಾಸಂದರ್ಭ. ಸಾಧಾರಣ ಮ ದುವೆಯೆಂದು ತಿಳಿಯಬೇಡ. ನಿನ್ನ ನೆಂಟನಾಗುವ ಹರಿಯು ಮಾತ್ರವಲ್ಲ, ಯಾದವರಷ್ಟೇ ಅಲ್ಲ; ಕೈಲಾಸನಾಥ ಪರಶಿವನೂ, ಚತುರ್ಮುಖ ಬ್ರಹ್ಮನೂ ದೇವತೆಗಳಾದಿಯಾಗಿ ಎಲ್ಲರೂ ಬಂದು ಸೇರುವರು. ಅವರೆಲ್ಲ ಬರುವ ಹೊತ್ತಿ ನಲ್ಲಿ ಯೋಗ್ಯತೆಗನುಸಾರ ವ್ಯವಸ್ಥೆ ನಡೆಸು. ಭೂಪಾಲರನ್ನೆಲ್ಲ ಕರೆಸು. ಪಟ್ಟ ಣವನ್ನೆಲ್ಲ ಶೃಂಗರಿಸು. ಈ ಸಂಭ್ರಮಕ್ಕೆ ಎಲ್ಲರೂ ಬರುವರು.

ಲೀಲೆಯಿಂದಂಗಜಗೆ ನಿನ್ನಯ। ಬಾಲಕಿಯ ವೈವಾಹವ ಮಾಡಿಸು।
ಪಾಲಿಸುವ ಸತ್ಕರುಣದಿಂದಲಿ। ಶ್ರೀಲಲಾಮ ॥೪॥

ದ್ರೌ– ನಾಳೆ ಉದಯವಾಗಲಿ. ಲಕ್ಷ್ಮೀಕಾಂತನು ತನ್ನವರನ್ನು ಕೂಡಿ ಕೊಂಡು ಬರುವನು. ಮತ್ತೆ ನೀನು ಮಗಳಾದ ರತೀದೇವಿಯನ್ನು ಪುಷ್ಪಬಾಣ ನಿಗೆ ಮದುವೆ ಮಾಡಿಸಿದರೆ ನಿನ್ನ ಜವಾಬ್ದಾರಿಕೆಯು ಮುಗಿಯುವುದಲ್ಲದೆ ಶ್ರೀ ಕೃಷ್ಣನ ಅನುಗ್ರಹವೂ ದೊರಕುವುದು. ಆಗ ನಿನ್ನ ಭಾಗ್ಯಕ್ಕೆ ಏನು ಕಡಿಮೆ? ಆತನೇ ನಿಮ್ಮನ್ನು ಸದಾ ರಕ್ಷಿಸುತ್ತಾ ಬರುವನು.

ಕ. ಭೂ– ಸರಿ. ನೀನು ಇಲ್ಲೇ ಇದ್ದು ನನಗೆ ಸೂಚನೆ ಕೊಡುತ್ತಿರು.

ದ್ರೌ– ನನ್ನ ಬರವನ್ನು ಕಾದಿರುವ ಕೃಷ್ಣನಿಗೆ ಸಮಾಚಾರ ತಿಳಿಸ ಬೇ ಡವೇ? ನಾನು ಅಲ್ಲಿಗೆ ಹೋಗಿಯೇ ತೀರಬೇಕು.

ಬಂದುನೀ ದಿಬ್ಬಣಿಗರೊಡನಾ। ನಂದದಲಿನಡೆಸುವುದು ಕಾರ್ಯವ।
ನೆಂದೆನುತ ನುಡಿಯಲ್ಕೆ ಪೇಳಿದ। ಇಂದುವದನೆ ॥೫॥

ಕ. ಭೂ– ನೀನು ನಿಶ್ಚಯಿಸಲ್ಪಟ್ಟ ಈ ಕಾರ್ಯವು ನಿನ್ನ ಹೊಣೆಗಾರಿ ಕೆಯಿಂದಲೇ ಸಾಂಗವಾಗಿ ಜರಗಬೇಕಾಗಿದೆ. ಅವರಿವರು ಬರುತ್ತಾರೆಂದು ಹೇಳಿ ನೀನು ಮಾತ್ರ ತಪ್ಪಿಸಿಕೊಳ್ಳುವ ಯೋಚನೆಯೇ? ದಿಬ್ಬಣಸಹಿತ

ನೀನು ಮುಂದಾಗಿ ಬಂದು ನಮ್ಮ ಕಾರ್ಯಕ್ಕೂ ನೆರವಾಗಬೇಕು.

ದ್ರೌ— ರಾಜಾ! ನಾನು ಕಷ್ಟದಲ್ಲಿದ್ದೇನೆ. ಒತ್ತಾಯಿಸಬೇಡ.

ಉಳಿದೆನಾದರೆ ಬರುವೆನಿಲ್ಲಿಗೆ। ನಳಿನನಾಭನು ಸಹಿತಲೆಂದೆನೆ।
ಕಳವಳಿಸಿ ಪಾಂಚಾಲೆಗುಸುರಿದ। ನಿಳೆಯ ಪಾಲ ॥೬॥

ದ್ರೌ— ನನಗೇನೋ ಆತುರವಿದೆ. ಮದುವೆಯ ಕಾರ್ಯದಲ್ಲಿ ನಾನೂ ಭಾಗವಹಿಸಬೇಕು. ಆದರೆ ಕಾಲಗರ್ಭದಲ್ಲಿ ಏನೇನಿದೆಯೋ? ಭವಿಷ್ಯತ್ತನ್ನು ತಿಳಿದವರಾರು? ಬದುಕಿ ಉಳಿದರೆ ದಿಬ್ಬಣದೊಂದಿಗೆ ಬರುವೆನು. ಇಷ್ಟು ಮಾತ್ರ ನಿನಗೆ ನಾನು ಕೊಡುವ ಭರವಸೆ.

ಕ. ಭೂ.— ದೇವಿಯೇ! ಈ ಮಾತಿನಲ್ಲೂ ಸಂದೇಹವಿದೆ.

ನಾಳೆ ಮದುವೆಗೆ ನೀನು ಬಾರದೆ। ಶ್ರೀ ಲತಾಂಗಿಯರಮಣನಯ್ತರೆ।
ಬಾಲಕಿಯ ನಾಕೊಡೆನು ಮಾತಿದು। ಜಾಲವಲ್ಲ ॥ ೭ ॥

ಕ. ಭೂ — ಈ ಮದುವೆಗೆ ಕಾರಣಳೇ ನೀನು. ನಿನ್ನ ಮುಂದೆಯೇ ಮದುವೆ ನಡೆಯಬೇಕು. ಕೃಷ್ಣನು ನಿನ್ನನ್ನು ಬಿಟ್ಟು ದಿಬ್ಬಣಗೂಡಿ ಬಂದರೂ ಸರಿಯೇ! ನನ್ನ ಮಗಳನ್ನು ಸರ್ವಥಾ ಮದುವೆ ಮಾಡಿಕೊಡಲಾರೆ. ಬಂದ ದಿಬ್ಬಣವು ಹಾಗೆ ಹೋಗಬೇಕಾಗುವುದು ಖಂಡಿತ. ಇದುವೇ ನನ್ನ ಸಿದ್ಧಾಂತ.

ದ್ರೌ.— ಅಯ್ಯೋ! ಇದೆಂತಹ ಧರ್ಮಸಂಕಟ? ನನ್ನ ಗತಿ ಏನಾಗುವುದೋ ಯಾರು ಬಲ್ಲರು? ಇರಲಿ.

ಬರುವೆ ನಿಶ್ಚಯವೆನುತ ನಂಬಿಕೊ। ತೆರಳುವೆನು ನಾನೆನುತ ದ್ರೌಪದಿ।
ಪೊರಟು ತಾನಯ್ತಂದಳಾಕ್ಷಣ। ಹರುಷದಿಂದ ॥ ೮ ॥

ದ್ರೌ.— ಕಮಲ ಭೂಪತಿಯೇ! ಹಾಗೆ ಆಗಲಿ. ನಿಜವಾಗಿಯೂ ಬರುತ್ತೇನೆ. ವಿವಾಹ ಸಿದ್ಧತೆಗಳೆಲ್ಲ ಶರವೇಗದಿಂದ ನಡೆಯಲಿ. ನಾವೆಲ್ಲರೂ ನಾಳೆ ಉದಯಕ್ಕೆ ಸರಿಯಾಗಿ ದಿಬ್ಬಣ ಸಮೇತ ಬರುವುದನ್ನು ನೀವೆಲ್ಲರೂ ಕಾಣುವವರಾಗಿರಿ. ರಾಜನೇ ಇನ್ನಾವ ಸಂಶಯವಿಲ್ಲವಷ್ಟೆ! ಈಗಲೇ ಹೋಗುವೆನು.

ಬಂದು ಕೃಷ್ಣನ ಪದಕೆರಗಿ ತಾ। ನಿಂದು ಲಕ್ಷ್ಮೀ ರಮಣ ಜಯ ಜಯ।
ವೆಂದು ನುತಿಸುತ್ತಿರ್ದಳತ್ಯಾ। ನಂದದಿಂದ ॥ ೯ ॥

ದ್ರೌ.— ಲೀಲಾಮಾನುಷ ವಿಗ್ರಹನಾದ ವಾಸುದೇವನು ನನ್ನ ದಾರಿ

ಯನ್ನು ಕಾಯುತ್ತಾ ಬಹಳ ದಣಿದಿರಬೇಕು. ನಾನು ಹೊರಟ ಕಾರ್ಯವೂ ಸಿದ್ಧಿಸಲ್ಪಟ್ಟಿತು. ಇನ್ನು ವಿಳಂಬವಿಲ್ಲ, ತತ್ಕ್ಷಣವೇ ಹೋಗಿ ಆತನ ಪಾದಕ್ಕೆ ನಮಸ್ಕರಿಸಿಕೊಳ್ಳುತ್ತೇನೆ. ಕೃಷ್ಣಾ, ಮುರಾರಿ! ಸೇವಕಿಯಾದ ದ್ರೌಪದಿಯು ಪ್ರಣಾಮ ಮಾಡುತ್ತಿರುವಳು.

ಕೃಷ್ಣ- ಯಾರದು? ತಂಗಿ ದ್ರೌಪದಿಯೇ! ಏಳು ಏಳು.

ಸಾಂಗತ್ಯ। ತಾಳ- ರೂಪಕ.

ಎರಗಿದ ದ್ರುಪದಜೆಯನು ಪಿಡಿದೆತ್ತುತ। ಕರುಣಾಳು ನುಡಿದ
ತಾನವಳ್ಗೆ॥ ತರಳ ಮನ್ಮಥನಿಗೆ ವೈವಾಹವೆಸಗಲು।
ಹರಿಣಾಕ್ಷಿ ದೊರತಳೇನಮ್ಮ ॥ ೧ ॥

ಕೃಷ್ಣ- ತಂಗಿ! ಏಳಮ್ಮಾ ಏಳು. ಇಲ್ಲೇ ಕುಳಿತುಕೋ. ನಿನ್ನಾಗಮನವನ್ನು ನೋಡಿ ಬಹಳ ಸಂತೋಷವಾಯಿತು. ಏನಮ್ಮಾ! ನಮ್ಮ ಮರ್ಯಾದೆಯುಳಿಯಿತೇ? ಹುಡುಗನಿಗೆ ತಕ್ಕ ಕನ್ಯಾಮಣಿಯನ್ನು ಕಂಡುಹಿಡಿದೆಯಾ? ಮದುವೆ ನಿಶ್ಚಯಿಸಿದೆಯಾ? ಹಾಗಾದರೆ ನನ್ನ ಗೌರವವುಳಿಯಿತು. ಆಡಿದ ಮಾತು ಸತ್ಯವಾಯಿತು. ಹೇಳಮ್ಮಾ ಹೇಳು, ಏನಾಯಿತು ನಮ್ಮ ಕೆಲಸ?

ದ್ರೌ.- ಸಮಾಧಾನ ಮಾಡು. ಏನಿಷ್ಟು ಅವಸರ?

ನಿನ್ನ ಕಟಾಕ್ಷದಿ ಪೋಗಿ ನಾನೀಗಳು। ಮುನ್ನ ದೇಶವನ್ನೆಲ್ಲಾ
ತಿರುಗಿ॥ ಚಿನ್ಮಯಾತ್ಮಕನೆ ಕೇಳ್ಕಮಲಾವತಿಪುರ! ವನ್ನು
ಸಾರಿದೆ ಹರುಷದೊಳು ॥ ೨ ॥

ದ್ರೌ.- ಅಗ್ರಜಾ! ಏನೇ ಇರಲಿ. ಯಾವ ಕಾರ್ಯಕ್ಕೂ ನಿನ್ನನ್ನೇ ನಂಬಿದ್ದೇನೆ. ಹೆಸರಿಗೆ ಮಾತ್ರ, ನಾನಿದ್ದರೂ ನಿನ್ನ ಅನುಗ್ರಹವೇ ಎಲ್ಲಕ್ಕೂ ಕಾರಣ ಇಲ್ಲಿಂದ ಹೊರಟಮೇಲೆ ಎಷ್ಟೋ ದೇಶಗಳಲ್ಲಿ ಹುಡುಕಿ ನೋಡಿದೆ ಫಲವಾಗಲಿಲ್ಲ. ಕೊನೆಗೆ ನಿನ್ನ ಕೃಪಾಕಟಾಕ್ಷದಿಂದಲೋ ಎಂಬಂತೆ ಕಮಲಾವತೀ ಪಟ್ಟಣವನ್ನು ಸೇರಿದೆ.

ಕಮಲ ಭೂಪಾಲನಾತ್ಮಜೆ ರತಿಯೆಂಬಳು। ವಿಮಲ ಕನ್ನಿಕೆ
ಯೋರ್ವಳಿಹಳು॥ ಅಮರ ವಂದಿತ ನಿನ್ನ ಸುತಗೀಯ
ಬೇಕೆಂದು। ಮಮತೆಯೊಳ್ ನಿಶ್ಚಯಗೈದೆ ॥ ೩ ॥

ದ್ರೌ.- ಕಮಲ ಭೂಪಾಲನೆಂಬವನು ಆ ಪಟ್ಟಣದ ರಾಜನು. ಅವನಿಗೊಬ್ಬಳು ರತಿಯೆಂಬ ಮಗಳಿರುತ್ತಾಳೆ. ಹೆಸರಿನಲ್ಲಿ ಮಾತ್ರವಲ್ಲ ವರ್ಣರೂಪಗಳಲ್ಲೂ ಕುಲ ಶೀಲಗಳಲ್ಲೂ ನಮ್ಮ ಮನ್ಮಥನಿಗೆ ಅನುರೂಪಳಾಗಿರುತ್ತಾಳೆ. ಆದ್ದರಿಂದ ಆ ರಾಜನಲ್ಲಿ ವಿಶ್ವಾಸ ಬೆಳಸಿ ಲಗ್ನ ಕಾರ್ಯವನ್ನು ನಿಶ್ಚಯಿಸಿ ಬಂದಿರುತ್ತೇನೆ. ಆರಂಭದಲ್ಲಿ ಸ್ವಲ್ಪ ತೊಡಕುಂಟಾದರೂ ಪರಿಣಾಮದಲ್ಲಿ ಅನುಕೂಲವೇ ಆಯಿತು.

ಕೃಷ್ಣ- ಭಲಾ ತಂಗಿ! ಲಗ್ನ ನಿಶ್ಚಯಿಸಿರುವೆಯಾ? ಯಾವಂದಿಗೆ?

ನಾಳೆ ಲಗ್ನವನಿಟ್ಟು ನಾನಿಲ್ಲಿಗಯ್ತಂದೆ। ಜಾಲಮಾತಲ್ಲ ಕೇಳಿದನು॥
ನೀಲನಿಭಾಂಗ ದಿಬ್ಬಣ ಸಹ ತೆರಳುವು। ದಾಲಸ್ಯವೇಕಿನ್ನು ಬರಿದೆ ॥೪॥

ದ್ರೌ.- ನಿನ್ನ ಸಂಕಷ್ಟವನ್ನು ನಾನು ತಿಳಿದಿರುತ್ತೇನೆ. ರುಕ್ಮಿಣಿಗೆ ಕೊಟ್ಟ ಮಾತು ಉಳಿಯುವುದಕ್ಕಾಗಿ ನಾಳೆಗೆ ಮುಹೂರ್ತ ನಿಶ್ಚಯಿಸಿರುವೆನು. ಅಣ್ಣಾ! ಹೆಚ್ಚು ಮಾತಾಡುವುದಕ್ಕೆ ಸಮಯವಿಲ್ಲ. ದಿಬ್ಬಣ ಹೊರಡಿಸುವುದಕ್ಕೆ ಏನೇನು ಬೇಕೋ ಅದನ್ನೆಲ್ಲ ಸಿದ್ಧಪಡಿಸುವುದಕ್ಕೆ ತಡಮಾಡಬೇಡ. ರಾತ್ರಿ ಮೀರುತ್ತಾ ಬಂತು. ನಾನೀಗ ಹೊರಡುವೆನು.

ಇಂತೆಂದು ಪದಕೆ ವಂದಿಸುತಾಗ ದ್ರುಪದಜೆ। ದಂತಿಪುರಕೆನಡೆತರಲು॥
ಅಂತರಂಗದಿಪಾರ್ಥನೇಳ್ವುದರೊಳಗೆನಿ। ಶ್ಚಿಂತೆಯೊಳೈದುವೆನೆನುತ॥೫॥

ದ್ರೌ.- ಶ್ರೀ ಹರಿಯು ದಯೆಯಿಂದ ಒಂದು ದೊಡ್ಡ ಮಹಾಕಾರ್ಯವನ್ನು ನೆರವೇರಿಸಿದಂತಾಯಿತು. ಇನ್ನೇನು? ಉದಯವಾಗಲಿಲ್ಲ. ಪಾರ್ಥ ಮಹಾಶಯರು ಎಚ್ಚರವಾಗುವ ಮೊದಲು ಅರಮನೆಯನ್ನು ಸೇರಿಕೊಂಡರೆ ನಿಶ್ಚಿಂತೆಯೇ ಸರಿ. ಎಲ್ಲಕ್ಕೂ ಕೃಷ್ಣನಿದ್ದಾನೆ, ಹೋಗುವೆನು.

ರಾಗ— ಸೌರಾಷ್ಟ್ರ। ತಾಳ— ತ್ರಿವುಡೆ.

ಇತ್ತ ಗಜಪುರದೊಳಗೆ ಪಾರ್ಥನು। ಮತ್ತೆ ತಾನೆಚ್ಚರ್ತು ಸಮಯದೊ।
ಳೊತ್ತಿನಲಿ ಸತಿ ಕಾಣದಿರಲರ। ಸುತ್ತ ಬಳಿಕ ॥ ೧ ॥

ಅರ್ಜುನ- ಇದೇನು ಎಚ್ಚರವಾಗಿ ನೋಡಿದರೆ ಸುತ್ತಲು ಕತ್ತಲೆ. ಜಗತ್ತೂ ಅಂಧಕಾರದಲ್ಲಿ ನಿದ್ದೆಮಾಡುವಂತಿದೆ. ಅದಿರಲಿ. ನಮ್ಮ ಹಿಂದಿನ ದಿನಗಳನ್ನು ಯೋಚಿಸಿದರೆ ಇಂತಹ ಎಷ್ಟೋ ರಾತ್ರಿಗಳು ಹೀಗೆಯೇ ಕಳೆದಿವೆ. ದುಷ್ಟನಾದ ಕೌರವನ ಕಟ್ಟಳೆಯಂತೆ ಕಾಡು ಕಾಡುಗಳನ್ನು ದರಿದ್ರರಾಗಿ

ಸುತ್ತಿದೆವು ಅಂತಹ ದಿನಗಳಲ್ಲಿ ಹುಟ್ಟಿದ ಕುಲಕ್ಕಾಗಲಿ, ಬೆಳೆದ ವಾತಾವರಣಕ್ಕಾಗಲೀ ಸಂಬಂಧವಿಲ್ಲದ ಕಷ್ಟಕ್ಕೊಳಗಾದೆವು. ಆದರೇನು? ಧರ್ಮಕ್ಕೆ ವಿಜಯವಲ್ಲವೇ?. ಆದ್ದರಿಂದ ರಾಜಭೋಗಗಳು ನಮ್ಮ ವಶವಾದುವು, ಯಾವ ಸೌಖ್ಯಕ್ಕೂ ಲೋಪವಿಲ್ಲ. ಹೀಗಿದ್ದರೂ ಆಲೋಚಿಸಿದಂತೆ ಕೌರವನ ಮಾಟಗಳೇ ಸ್ಮರಣೆಗೆ ಬರುತ್ತಿವೆ. ಅದರಲ್ಲೂ ದ್ಯೂತ ಸಭೆಯಲ್ಲಿ ನಡೆದ, ಆ ದುಶ್ಶಾಸನನು ಬಂದು ಈ ದ್ರೌಪದಿಯ ಸೀರೆಯನ್ನೆಳೆದ- ಆಹಾ! ಏನಿದು? ಏನನರ್ಥ? ದ್ರೌಪದಿಯು ಕಾಣುವುದೇ ಇಲ್ಲ. ಎಲ್ಲಿಗೆ ಹೋದಾಳು? ಎಂತಹ ವಿಪರೀತವಿದು? ಏನಿದ್ದರೂ ಹುಡುಕಲೇ ಬೇಕು! ಆ ದ್ರೌಪದಿಯೇ!

ತರುಣಿ ದ್ರೌಪದಿ ಯೆತ್ತ ಪೋಗಿಹ। ಳಿರುಳಿನಲಿ ತಾನೋಳ್ಪೆನೆನುತಲಿ।
ಕರದಿಖಡ್ಗವಪಿಡಿದು ಪೊರಟನು। ಭರದೊಳಂದು ॥ ೨ ॥

ಅರ್ಜುನ– ದ್ರೌಪದಿಯು ಎಲ್ಲಿಗೋ ಹೋಗಲಿ! ಅವಳು ಬರುವ ವರೆಗೆ ಸರ್ವಥಾ ಸಹಿಸಲಾರೆನು. ಸಹಿಸುವ ಶಕ್ತಿಯೂ ನನ್ನಲ್ಲಿಲ್ಲ. ಅಧರ್ಮದ, ಅನೀತಿಯ ಲಕ್ಷಣವೇನಾದರೂ ಕಂಡುಬಂದರೆ ಯಾವ ತಾಳ್ಮೆಯೂ ನನಗಿರಲಾರದು. ಅವಳ ಅವಸಾನವೇ ಬಂತೆಂಬುದು ನಿಶ್ಚಯ. ಅದಕ್ಕಾಗಿ ನೀಳವಾದ ಕತ್ತಿಯನ್ನು ಹಿಡಿದು ಬೇಗನೆ ಹೊರಡುತ್ತೇನೆ. ಅಯ್ಯೋ! ಇಲ್ಲೆಲ್ಲೂ ಕಾಣುವುದಿಲ್ಲ. ಇನ್ನೆಲ್ಲಿ ಇರಬಹುದು? ನೋಡಿಯೇ ಬಿಡುತ್ತೇನೆ.

ಊರು ಕೇರಿಯ ಮನೆ ಮನೆಗಳನು। ಸಾರುತರಸುತ ಕಾಣದೀಪರಿ।
ನಾರಿ ದ್ರೌಪದಿಯೆನುತ ಕರೆವುತ। ಲಾರುಭಟಿಸಿ ॥ ೩ ॥

ಅರ್ಜುನ– ಬೀದಿ ಬೀದಿಗಳಲ್ಲೆಲ್ಲ ಹುಡುಕಿ ನೋಡಿದೆ, ಮನೆ ಮನೆಗಳನ್ನೂ ಪರೀಕ್ಷಿಸಿದ್ದಾಯಿತು. ದ್ರೌಪದಿಯು ಪತ್ತೆಯೇ ಇಲ್ಲ. ಏನು ಮಾಡೋಣ? ಗಟ್ಟಿಯಾಗಿ ಕರೆಯುವುದೇ ಲೇಸು. ನನ್ನ ಆರ್ಭಟವನ್ನು ಕೇಳಿದರೆ ಎಲ್ಲಿದ್ದರೂ ಓಡಿಬರುವುದು ಖಂಡಿತ. ಹಾ ದ್ರೌಪದಿ! ದ್ರೌಪದಿ! ಹೀಗೆ ಬಾ!

ಇಂತು ರೋಷದೊಳಾ ಧನಂಜಯ। ನಿಂತು ಹೊರಬಾಗಿಲಲಿ
ನೋಡುತ। ನಿಂತಿರಲು ಬಂದದಿಗೆ ಮಣಿದಳು। ದಂತಿಗಮನೆ ॥ ೪ ॥

ದ್ರೌಪದಿ– ದ್ವಾರದಲ್ಲಿ ಅದೇನೋ ಆರ್ಭಟ ಕೇಳುತ್ತದೆ. ಪಾರ್ಥನದೇ ಇರಬೇಕು. ಏನು ಆಕ್ರೋಶವೋ? ಭೂಮಿಯೂ ಆಕಾಶವೂ ನಡುಗುವ

ಹಾಗಿದೆ. ಈ ಸಂದರ್ಭದಲ್ಲಿ ರಕ್ಷಿಸುವವರಿದ್ದಾರೆಯೇ? ನನ್ನ ನೀತಿಯೇ ಕಾಪಾಡಬೇಕು. ಸರ್ವ ಸಾಕ್ಷಿಯಾದ ಪರಮಾತ್ಮನೇ ಗತಿಯಲ್ಲದೆ ಬೇರೆ ಆಧಾರವಿಲ್ಲ. ಎಂತಿದ್ದರೂ ಮನಸ್ಸಿನಲ್ಲಿ ಹರಿಧ್ಯಾನ ಮಾಡುತ್ತಾ ಪತಿದೇವರ ಪಾದಕ್ಕೆ ಅಡ್ಡ ಬೀಳುವೆನು. ಪ್ರಾಣೇಶ್ವರಾ- ಇದೋ ದಂಡ ಪ್ರಣಾಮಗಳು.

ರಾಗ— ಮಾರವಿ। ತಾಳ- ಏಕ.

ಚರಣದೊಳಗೆರಗಿದ ತರುಣಿಯ ಮುಡಿಯನು। ಕರದಲಿ ಪಿಡಿದಾಗ॥
ಶಿರವನು ಛೇದಿಸಿ ಪಂಥವ ಮೆರೆಸುವೆ। ಪುರಜನರೀಕ್ಷಿಸಲಿ ॥ ೧ ॥

ಅರ್ಜುನ- ಯಾರಿವಳು? ಪಾಂಚಾಲಿಯೇ! ಅನ್ಯಾಯಗಾತಿಯೇ! ದ್ರೌಪದಿಯೇ! ಹೀಗೆ ಬಾ! ಎಂತಹ ಪತಿದ್ರೋಹಿ ನೀನು, ನಾರಿಯರ ಕುಲಕ್ಕೆ ಕಳಂಕ ಪ್ರಾಯಳು. ನಿನ್ನನ್ನೀಕ್ಷಿಸುವುದೇ ದೊಡ್ಡ ಅಪರಾಧ. ಈ ನಿನ್ನ ಮುಡಿಯನ್ನು ಹಿಡಿದು ಈಗಲೇ ಶಿರಚ್ಛೇದ ಮಾಡುತ್ತೇನೆ. ಇದರಿಂದ ಲೋಕದ ಹೆಣ್ಣುಗಳಿಗೆಲ್ಲ ಪಾಠವಾಗುವುದಲ್ಲದೆ ನನ್ನ ಪಂಥವೂ ನೆರವೇರಿದಂತಾಗುವುದು. ವೀರಾಧಿವೀರನಾದ ಪಾರ್ಥನ ಮುಂದೆ ಎಷ್ಟು ಧೈರ್ಯವೋ ನಿನಗೆ. ಛೀ, ಛೀ ಮಾನಗೆಟ್ಟವಳೇ ಹಾಂ.

ದ್ರೌಪದಿ- ಹರಿ, ಗೋವಿಂದಾ, ಅನಾಥ ಬಂಧೋ! ನೀನೇ ರಕ್ಷಿಸು.

ಆ ಯುವತಿಯ ಧ್ವನಿ ಕೇಳುತ ಬಂದನು। ವಾಯು ಕುಮಾರಕನು॥
ಕಾಯದಿ ಕಳವಳಗೊಳುತಲುಸುರಿದನು। ಪಾಯವದೊಂದವಗೆ ॥ ೨ ॥

ಭೀಮ- ಎಂತಹ ಆರ್ತನಾದವಿದು?, ಅಂಧಕಾರವನ್ನು ಸೀಳಿ ಕುತೂಹಲವನ್ನು ಕೆರಳಿಸುವಂತೆ ಕೇಳಿಬರುತ್ತದೆ. ಗಾಢವಾದ ನಿದ್ರೆಯೂ ಮರೆತು ಹೋಯಿತು. ಕೇಳಿದರೆ ಯಾರೋ ಕಷ್ಟಕಾಲದಲ್ಲಿ ಅಳುವಂತೆ ಕಾಣುವುದು. ಅಹಾ! ಧರ್ಮರಾಯನ ಆಳ್ವಿಕೆಯಲ್ಲಿ ಅಳುವವರಿದ್ದಾರೆಯೇ? ಅದರಲ್ಲೂ ಮಧ್ಯರಾತ್ರಿಯಲ್ಲಿ ಯಾರು ಕೂಗುವರು? ಓಹೋ ತಿಳಿಯಿತು. ದ್ರೌಪದಿಯದೇ ಕೂಗು. ಬೇಗನೇ ಹೋಗಿ ನೋಡುವೆ. ಅಯ್ಯೋ! ಎಂತಹ ಭಯಂಕರವಾದ ನೋಟವಿದು. ಪಾಂಚಾಲಿಯನ್ನು ಕಡಿಯುವುದಕ್ಕಾಗಿ ನಮ್ಮ ಪಾರ್ಥನೇ ಕತ್ತಿಯೆತ್ತುತಿದ್ದಾನೆ. ಇರಲಿ, ವಿಚಾರಿಸುತ್ತೇನೆ.

ಪಾರ್ಥನೆಕೇಳ್ ನಮ್ಮೈವರ ಸತಿಯನು। ಘಾತಿಸಬಹುದೇನೈ॥
ನೀತಿಯನುಳಿದೀ ರೀತಿಯನೆಸಗಲು। ಖ್ಯಾತಿಯು ನಿನಗಹುದೇ॥

ಭೀಮ– ಅರ್ಜುನಾ! ಜಾಗ್ರತೆ! ಅಲ್ಲೆ ನಿಲ್ಲು! ಏನಿದು ವಿಪರೀತ? ನಮ್ಮೈವರ ಮಡದಿಯಾದ ಈಕೆಯ ಮೇಲೆ ಏನು ಅಧಿಕಾರವೋ ನಿನಗೆ? ಕತ್ತಿಯಿಂದ ಕಡಿಯುವುದೆಂದರೆ ಅಷ್ಟು ಸುಲಭವಲ್ಲ. ಎಂತಹ ಅನೀತಿಯಿದು? ಶತ್ರುಗಳನ್ನು ನಾಶಮಾಡುವುದು ಬಿಟ್ಟು ಸ್ತ್ರೀ ಹತ್ಯೆ ಮಾಡಿದರೆ ಯಾವ ಕೀರ್ತಿಯಿದೆ? ಈ ದುರ್ಬುದ್ಧಿಯು ಏತಕ್ಕಾಗಿ ಬಂತು? ಎತ್ತಿದ ಕತ್ತಿಯನ್ನು ಕೆಳಗಿಟ್ಟು ಮನೆಗೆ ಹೋಗು ನೋಡುವ!

ಅರ್ಜುನ– ನೀತಿ ಬಿಟ್ಟಿರುವ ಇವಳಿಂದಾಗಿ ನಮಗೂ ಅಪಕೀರ್ತಿಯಿದೆ. ಪತಿಗೆ ದ್ರೋಹಮಾಡಿದ ಫಲವನ್ನು ಈಕ್ಷಣವೇ ಅನುಭವಿಸಲಿ,

ಭೀಮ– ತಡೆ ತಡೆ! ಇವಳ ನೀತಿಯ ಮೇಲೆ ಸಂದೇಹವಿದ್ದರೆ ನಾವೇಕೆ ಪಾಪಮಾಡಬೇಕು? ಯೋಗ್ಯತೆಯನ್ನು ಪರೀಕ್ಷೆ ಮಾಡಿನೋಡುವ.

ಸತ್ಯವನೀಕ್ಷಿಸಲಗ್ನಿಯ ಕುಂಡವ। ವಿಸ್ತರಿಸುವುದೀಗ॥
ಚಿತ್ತದಿ ಸಂಶಯವೇಕೆನುತಸುರಲು। ಪಾರ್ಥನು ಕೇಳುತಲಿ ॥ ೪ ॥

ಭೀಮ– ತಮ್ಮಾ ! ಈಕೆಯ ಸತ್ಯವನ್ನು ಪರೀಕ್ಷಿಸುವುದಕ್ಕೆ ಮೊದಲು ಘಾತ ಮಾಡುವುದು ಸರಿಯಲ್ಲ. ಅದಕ್ಕೆ ಅಗ್ನಿ ಪರೀಕ್ಷೆಯಿದೆ. ಶೀಲವಂತೆಯಾದರೆ ಬೆಂಕಿಯನ್ನು ಹೊಕ್ಕು ಹೊರ ಬರಲಿಕ್ಕೆ ಸಾಧ್ಯವಾದೀತು. ದುಶ್ಶೀಲೆಯಾದರೆ ಉರಿದು ಹೋದಾಳು. ಇದನ್ನು ಅಗ್ನಿನಾರಾಯಣನೇ ಪಕ್ಷಪಾತವಿಲ್ಲದೆ ನಿಶ್ಚಯಿಸಿಕೊಡುತ್ತಾನೆ. ಬೇಗನೆ ಅಗ್ನಿಯನ್ನು ಪ್ರತಿಷ್ಠೆ ಮಾಡು.

ಅರ್ಜುನ– ಇದು ಸತ್ಯ. ಈ ಸೂಚನೆಯನ್ನು ತಿರಸ್ಕರಿಸುವುದಿಲ್ಲ.

ರಾಗ— ಶಂಕರಾಭರಣ। ತಾಳ- ಝಂಪೆ.

ವೀರ ಪಾರ್ಥಬಳಿಕಲು। ಬ್ಬೇರಿ ಪಾವಕಾಸ್ತ್ರವನ್ನು। ಭಾರಿ
ಧನುವಿಗೇರಿಸೆಚ್ಚು। ನಾರುಭಟಿಸುತ॥ ಘೋರನೆದ್ದುದಗ್ನಿ
ಹೊಗೆಯು। ಸೇರುತಂಬರವನು ಮುಸುಕಿ। ತೋರಿತ
ದರೊಳಾಗಲುರಿಯುಭೂರಿ ಪ್ರಭೆಯಲಿ ॥ ೧ ॥

ಅರ್ಜುನ– ಅಣ್ಣನಾದ ಭೀಮಸೇನನ ಮಾತು ಸಂದರ್ಭಕ್ಕೆ ಯೋಗ್ಯವಾದುದು. ಈಕೆಯನ್ನು ನಾನೇ ಕೊಂದು ಪಾಪಗಳಿಸುವುದಕ್ಕಿಂತ ಅಗ್ನಿ ಪರೀಕ್ಷೆಗೆ ಒಳಪಡಿಸುವುದೇ ಲೇಸು. ಅಗ್ನ್ಯಾಸ್ತ್ರವನ್ನುಪಯೋಗಿಸಿ ಬೆಂಕಿಯೆಬ್ಬಿಸುತ್ತೇನೆ. ಆಹಾ! ಅಗ್ನಿದೇವನ ಪ್ರಭಾವವೇ! ಜ್ವಾಲೆಯು ಆಕಾಶದ

ವರೆಗೆ ಚಾಚಿ ಧಗ ಧಗ ಪ್ರಜ್ವಲಿಸುತ್ತಿರುವುದು, ಇರಲಿ.

ಸುರಪ ಸುತನು ನುಡಿದ ಮನದಿ । ಹರುಷಗೊಳುತ್ತ ದ್ರುಪದಸುತೆಯು।
ಪರಿಕಿಸುವೆನೆನುತ್ತಲಾಗ। ಕರೆದು ಪೇಳ್ದನು॥
ತರುಣಿ ಕೇಳು ನೀನು ಮುಡಿದ। ಶಿರದ ಪುಷ್ಪಬಾಡೆ ನಿನ್ನ।
ಗುರಿಯಾಗ್ನೈವೆ ಖಡುಗಕೀಗ। ಪರಿಯ ನೋಡೆಲೆ ॥೨॥

ಅ— ಇನ್ನು ಸಮಾಧಾನವಿಲ್ಲ. ಪಾಂಚಾಲಿಗೆ ಹೀಗೆಂದು ಅಪ್ಪಣೆ ಕೊಡುವೆನು. ದ್ರೌಪದಿ! ಅಲ್ಲಿ ನೋಡು. ಉರಿಯುತ್ತಿದೆ ಬೆಂಕಿ. ಶೀಲವಂತಳಾಗಿದ್ದರೆ ಮುಡಿದುಕೊಂಡ ಹೂವಿನ ಎಸಳು ಬಾಡಲಿಕ್ಕಿಲ್ಲ. ಅಗ್ನಿ ಪರೀಕ್ಷೆಗೆ ಸಿದ್ಧಳಿರುವೆಯ? ಅದರಲ್ಲಿಯೂ ಅನೀತಿಯ ಲಕ್ಷಣ ಕಂಡುಬಂದರೆ ಇದೇ ಖಡ್ಗದಿಂದ ತಲೆ ಕತ್ತರಿಸಿಯೇನು.

ಎಂದು ಪೇಳ್ದ ಮಾತು ಕೇಳ್ದು। ಮಂದಗಮನೆ ಹರಿಯನೆನಿದು।
ತಂದೆ ನೀನೇ ರಕ್ಷಿಸೆನುತ। ನಿಂದು ಸ್ತುತಿಸುತ॥
ಒಂದೆ ಮನಸಿನಿಂದಲಾಗ। ಬಂದಳಾ ಪ್ರದಕ್ಷಿಣೆಯನು।
ಸುಂದರಾಂಗಿ ಪೊಕ್ಕಳಗ್ನಿ। ಗಂದು ತವಕದಿ ॥೩॥

ದ್ರೌ— ಜಗದೀಶ್ವರಾ! ಇಂತಹ ಕಠೋರವಾದ ನಿಂದಾವಾಕ್ಯಗಳನ್ನು ಕೇಳುವ ಮೊದಲೇ ನನ್ನ ಕಿವಿಗಳು ಕಳಚಿ ಬೀಳಬಾರದಿತ್ತೇ? ದೇವಾ! ನನ್ನ ಪರೀಕ್ಷೆಯಾಗಲಿದೆ. ದಗದಗಿಸುವ ಅಗ್ನಿ ದೇವಾ! ನಿನ್ನಲ್ಲಿಂದ ಜನಿಸಿ ಬಂದ ಈ ದೇಹವನ್ನು ನೀನೇ ಆಹುತಿ ತೆಗೆದುಕೊ!

ಭಾಮಿನಿ

ಹರಿಯೆ ನಿನ್ನಾಜ್ಞೆಯಲಿ ತಾ ನ। ಯ್ದಿರಲು ಕೋಪಿಸಿ ಪಾರ್ಥನೆನ್ನನು।
ಪರಿಕಿಸುವನೀ ಕಾಯ ಬೇಕೆಂದೆನುತ ನುತಿಸುತಿರೆ॥
ಪರಮ ಮಂಗಲವಾಗಲಾಕೆಯು। ಹರುಷದಲಿ ನಡೆತಂದು ಪತಿಗಳ।
ಚರಣಕೆರಗಲು ನುಡಿದ ಸಸಭವನೊಡನೆ ಮರುತಜನು ॥೧॥

ದ್ರೌ— ಹರಿಯ ಅನುಗ್ರಹವಿದ್ದ ಮೇಲೆ ಭಯವೇನು? ಕಳಂಕವಿದ್ದರೆ ತಾನೆ ಅಗ್ನಿಯು ನನ್ನನ್ನು ಸುಡುವುದು? ಅಯ್ಯೊ ಪಾಪ! ಭೀಮಾರ್ಜುನರಿಬ್ಬರೂ ದಂಗುಬಡೆದವರಂತೆ ನೋಡುತ್ತಿದ್ದವರು ಈಗ ಇತ್ತ ನೋಡಲು ನಾಚುತ್ತ ಅವರವರೊಳಗೆ ಮಾತಾಡುತ್ತಿರುವರಲ್ಲ! ಅವರೇನೇ ಮಾಡಿದರೂ ನನ್ನ ಪ್ರಾ

ಣಪ್ರಿಯರಲ್ಲವೇ? ಅಗ್ನಿದೇವನಿಂದ ಪರಿಶುದ್ಧಳಾದ ನಾನು ಪತಿದೇವರನ್ನು ವಂದಿಸಬೇಕಾದುದು ನನ್ನ ಕರ್ತವ್ಯ.

ರಾಗ-ರೇಗುಪ್ತಿ, ತಾಳ-ಏಕ

ನೋಡಿದೆಯಾ ತಮ್ಮ। ನೋಡಿದೆಯ॥ ಪುಣ್ಯಕುಲದಿ ಹುಟ್ಟಿ
ನಿನ್ನೊಳು ಗ್ರಹಿಸದೆ। ಮಿಣ್ಣನೆ ಸ್ತ್ರೀಹತ್ಯವನ್ನು ಮಾಡುವರೆ॥
ಪುಣ್ಯಾತ್ಮೆ ದ್ರೌಪದಿ ಪರಮಪತಿವ್ರತೆ। ನಿರ್ಣಯಂವರಿಯದೆ
ಕಣ್ಣಾರೆ ಕೊಲುತಿಹೆ ॥೧॥

ಭೀ— ಪಾರ್ಥನೇ! ಸಿಟ್ಟಿನ ಆವೇಶದಿಂದ ಎಷ್ಟು ದೊಡ್ಡ ಅನರ್ಥ ವಾಗುತಿತ್ತು? ಪ್ರಸಿದ್ಧ ಚಂದ್ರವಂಶದಲ್ಲಿ ಹುಟ್ಟಿ, ಪುಣ್ಯಶೀಲೆಯೂ ಪತಿವ್ರತೆಯೂ ಆದ ಧರ್ಮಪತ್ನಿಯ ವಧೆ ಮಾಡಿದ ಮಹಾ ಅಪರಾಧಿಯಾಗುತಿದ್ದೆ. ಈಗಲಾದರೂ ದ್ರೌಪದಿಯ ಮಹಿಮೆಯನ್ನು ಕಣ್ಣಾರೆ ಕಂಡೆಯಲ್ಲ! ಯಾವ ಕೆಲಸವನ್ನಾದರೂ ಮುಂದಾಗಿ ವಿಚಾರಮಾಡಿ ನಡೆಸಬೇಕು. ವಂದಿಸಿ ನಿಂತಿರುವಳಲ್ಲಾ! ಅವಳನ್ನು ಸಮಾಧಾನ ಪಡಿಸು.

ಅ.– ಅಣ್ಣಾ! ಇವಳು ಪತಿವ್ರತೆಯಾದರೂ ರಾತ್ರಿ ತಿರುಗುವುದು ಸರಿಯಲ್ಲ. ಇದೇ ಅನರ್ಥಕ್ಕೆ ಕಾರಣವಾಯಿತು.

ದಿನಚರಿಯಲಿ ಮತ್ತೀ। ವನಜಾಕ್ಷಿ ತಿರುಗುವ। ಳನುಮಾನವಿಲ್ಲದೆ
ನಿನಗುಸುರುವೆನು॥ ಸನುಮತದಲಿ ದುಷ್ಟ। ಜನರ ಸಂಹರಿಸುತ್ತ।
ಘನರಕ್ತಪಾನವ। ನನುದಿನ ಮಾಳ್ಪಳು ॥೨॥

ಭೀ— ದ್ರೌಪದಿಯ ಮಹಾತ್ಮೆಯನ್ನು ಇನ್ನೂ ತಿಳಿದಿಲ್ಲ ನೀನು. ಅವಳು ಸಾಮಾನ್ಯ ಸ್ತ್ರೀಯೆಂದು ತಿಳಿಯಬೇಡ. ದುಷ್ಟ ಜನರ ಸಂಹಾರಕ್ಕಾಗಿ ಯಜ್ಞೇಶ್ವರನ ಮುಖದಿಂದ ಎದ್ದು ಬಂದಿರುತ್ತಾಳೆ. ಪ್ರತಿ ನಿತ್ಯವೂ ರಾತ್ರಿ ಸಂಚಾರ ಮಾಡುತ್ತಾ ರಕ್ತಪಾನಮಾಡುವ ಕಾಳರಾತ್ರಿಯಾಗಿರುವಳು. ಹಾಗೆ ಈ ರಾತ್ರಿಯೂಕೂಡಾ ಸಂಚಾರಾರ್ಥವಾಗಿ ಹೋಗಿದ್ದಿರಬಹುದು. ಇದನ್ನು ಸುಳ್ಳೆಂದು ತಿಳಿಯಬೇಡ.

ವನಿತೆಯಿವಳು ನಮ। ಗೆನುತ ಗ್ರಹಿಸುತಿಹೆ। ಕ್ಷಣದಿ ಚಂಡಿಯ
ರೂಪ। ವನುಕರಿಸುವಳು॥ ಕನಿಸಿನಿಂದವಳನ್ನು। ಕನಲಿಸಬೇಡಿನ್ನು।
ಮನೆಗೊಯ್ದು ಮನ್ನಿಸೀ। ಗನುಮಾನವಿಡದೆ ॥೩॥

ಭೀ- ಫಲ್ಗುಣನೇ! ದ್ರೌಪದಿಯನ್ನು ನಮ್ಮೈವರ ಮಡದಿಯೆಂದಷ್ಟೇ ತಿಳಿಯಬೇಡ. ಅವಳ ಯೋಗ್ಯತೆಯನ್ನು ತಿಳಿದವರು ಕಡಿಮೆ ಮುನಿದುನಿಂತರೆ ಸಾಕ್ಷಾತ್ ಚಂಡಿಕೆಯಾಗಬಲ್ಲಳು. ದುಷ್ಟರ ಸಂಹಾರ ಮಾಡಿ ರಕ್ತಪಾನದಿಂದ ಪ್ರಮತ್ತಳಾಗುವ ಭೈರವಿಯೆಂದು ಇನ್ನಾದರೂ ತಿಳಿ. ಬೆಳಗಾಗುತ್ತ ಬಂತು. ಅವಳನ್ನು ಒಳಗೆ ಕರೆಸಿಕೊಳ್ಳು.

ಎಂದು ಮಾರುತಿ ಪೇಳೆ। ಲಂದು ನರನು ಮತ್ತಾ। ಮಂದಗಮನೆಯಳ।
ಚಂದದಿ ಕರೆದು। ಮಂದಿರಕಾಗಲಯ್ತಂದು ಸುಖದೊಳಿರ।
ಲಂದವರಿತು ಭೀಮ ಬಂದನು ಮನೆಗೆ ॥೪॥

ಅ- ಅಣ್ಣಾ! ದ್ರೌಪದಿಯು ಪತಿವ್ರತೆಯೆಂದು ನಾನೂ ತಿಳಿದಿದ್ದೇನೆ. ಅರಸು ಮಕ್ಕಳಾದ ನಾವು ವಿಚಾರಹೀನರಾಗಿ ವರ್ತಿಸಿದರೆ ಸಾಮಾನ್ಯ ಜನರು ಏನೆಂದಾರು? ಅಣ್ಣಾ! ನೀನು ಹೋಗು. ದ್ರೌಪದೀ! ಅಗ್ನಿಪರೀಕ್ಷೆಯಿಂದ ನಿನಗೆ ಬಾಧೆಯಾದೀತೇ? ಯಜ್ಞೇಶ್ವರನ ಉಡಿಯಿಂದ ಜನಿಸಿದವಳಾಗಿರುವಿ! ಆದರೂ ಈ ಒಂದು ಘಟನೆಯಿಂದ ನಮ್ಮ ಕೀರ್ತಿ ಬೆಳಗೀತು. ನಾವು ಅರಸುಮಕ್ಕಳೆಂದು ವಿಚಾರಹೀನರಾದರೆ ಮುಂದಿನ ಜನಾಂಗದಲ್ಲಿ ಮಡದಿಯರು ಬೆಳಗಾದಮೇಲೆ ಮನೆಗೆ ಬಂದಾರು. ದ್ರೌಪದೀ ಬಾ! ಪತಿಪತ್ನಿಯರ ಸಲ್ಲಾಪಗಳಲ್ಲಿ ಇದೂ ಒಂದು ಘಟನೆಯೆ! ಒಳಗೆ ಹೋಗುವ. ನಡೆದ ವಿಚಾರವನ್ನು ಒಂದೂ ಬಿಡದೆ ಹೇಳು. ಕೇಳಬೇಕೆಂಬ ಆಸೆಯಿದೆ.

ಕಂದಪದ್ಯ

ಖಗವಾಹನ ಪ್ರತ್ಯೂಷದಿ। ನಗರವ ಪೊಗುತಂದು ಜವದೊ
ಳೋಲಗವಿತ್ತಂ ॥ಮಿಗುವರಿವಾನಂದದಿ ನಸು।
ನಗುತಲಿ ರುಕ್ಮಿಣಿಯ ಕರೆದು ಬಳಿಕಿಂತೆಂದಂ॥

ಕೃ- ಉದಯವಾಯಿತು. ಜಗತ್ತಿನ ಜಾಡ್ಯವು ದೂರವಾಗಿ ಎಲ್ಲೆಲ್ಲೂ ಉತ್ಸಾಹ ತುಂಬಿದೆ. ದ್ರೌಪದಿಯ ಸಾಹಸದಿಂದಾಗಿ ನನಗೂ ಹೊಸದಾದ ಉತ್ಸಾಹ ತುಂಬಿದೆ. ಆಡಿದಂತೆ ಮನ್ಮಥನ ಲಗ್ನಮಾಡಿಸುವ ಸಾಮರ್ಥ್ಯ ಈ ಕೃಷ್ಣನಿಗೆ ಸಾಧ್ಯವೆಂಬುದು ಮಡದಿಯಾದ ರುಕ್ಮಿಣಿಗೆ ತಿಳಿಸಬೇಕಾಗಿದೆ. ಏನೇ! ರುಕ್ಮಿಣಿ. ಇಲ್ಲಿ ಬಾ.

ರು- ಪ್ರಾಣನಾಥ! ಸಂತೋಷದಿಂದಿರುವಿರಲ್ಲ! ಏನು ವಿಶೇಷ?

ಕೃ- ನಿನ್ನ ಮಾತಿನಂತೆ ಎಲ್ಲಾ ನಾರಿಯರನ್ನೂ ಒಟ್ಟುಗೂಡಿಸಿದೆಯಾ?

ರಾಗ- ಸುರುಟಿ, ತಾಳ- ಏಕ.

ಹರಿಣಾಕ್ಷಿಯೆ! ಕೇಳು। ಮನಸಿನೊ-ಳುರಿ ಸಂತಸತಾಳು। ಸ್ಮರನಿಗೆ
ಲಗ್ನವ ವಿರಚಿಸಲೋಸುಗ। ವರಕನ್ನಿಕೆಯನು ಸ್ಥಿರಗೊಳಿಸಿದೆನು ॥೧॥

ಕೃ- ರುಕ್ಮಿಣಿ! ಗಾಬರಿಯಾದ ಜಿಂಕೆಯಂತೆ ನೋಡುತ್ತಿರುವಿಯೇಕೆ? ನೀನೆಲ್ಲ ಹೊರಟು ನಿಂತಿದ್ದರೆ ನನ್ನ ಕಾರ್ಯಕ್ಕೆ ಒಳಿತೇ ಆಯಿತು. ನಾನಾಡಿದಂತೆ ಮದನನಿಗೆ ವಧುವನ್ನು ನೋಡಿ ಗಳಿಗೆ ನಿಶ್ಚಯ ಮಾಡಿಯಾಯಿತು. ಬಹಳ ದಣುವಾಗಿದೆ. ತುಂಬಾ ಕಷ್ಟಪಟ್ಟಿದ್ದೇನೆ ರುಕ್ಮಿಣಿ!

ರು- ಅಯ್ಯೊ! ಸಾಕು ಸಾಕು ನಿಮ್ಮ ಸರಸಾಟ. ನನಗೆಲ್ಲಾ ಗೊತ್ತಿದೆ. ಇಷ್ಟರತನಕ ನಿಮ್ಮ ಮಾತು ಸಟಿಯಾದದ್ದಿಲ್ಲ! ನಿಮ್ಮನ್ನು ಬಿಟ್ಟು ಬೇರೆ ಗತಿಯಿದೆಯೇ ದೇವಾ! ತಡಮಾಡಬೇಡಿ ಎಲ್ಲಿನ ವಧು? ಹೆಸರೇನು? ಎಂದು ಮದುವೆ? ಈಗ ನನ್ನಿಂದೇನೇನು ಆಗಬೇಕು? ಹೇಳಿರಿ.

ಅದಕಾಗುವುದೆಲ್ಲ। ಸನ್ನಹ-ಒದಗಿಸ ಬೇಕಲ್ಲ। ಮುದದಲಿ ಮಗನಿಗೆ
ಮದುವಣಿ ಶಾಸ್ತ್ರವ। ವಿಧಿಯಿಸಗೆಲೆ ನೀ ಪದುಮದಳಾಂಬಕಿ ॥೨॥

ಕೃ- ಕಮಲಾಂಗಿಯೇ! ಇಂದೇ ಮದುವೆ. ಶಾಸ್ತ್ರಪ್ರಕಾರ ಮದುಮಗನಿಗೆ ಬೇಕಾದ ಎಲ್ಲ ಕರ್ಮಗಳನ್ನೂ ಜರಗಿಸಬೇಕಾಗಿದೆ. ನನ್ನ ಪ್ರತಿಜ್ಞೆಯಂತೆ ನೆರವೇರುವ ಈ ಕಾರ್ಯ ವಿಜೃಂಭಣೆಯಿಂದಲೇ ಸಾಗಬೇಕಾಗಿದೆ. ಅದಕ್ಕೆ ನಿಮ್ಮೆಲ್ಲರ ಸಹಕಾರವೂ ಅತ್ಯಗತ್ಯ. ನೀನು ಸಿದ್ಧಳಾಗಿರುವೆಯಷ್ಟೆ!

ರು- ಆಜ್ಞಾಪಾಲಕಳು ನಾನು. ಆದರೆ ಕೇಳುವವರಿಗೆ ಹೇಳಬೇಕಲ್ಲ. ವಧು ಎಲ್ಲಿಯವಳು? ಹೆತ್ತವರಾರು? ಎಷ್ಟು ಗಳಿಗೆಗೆ ಲಗ್ನ?

ಹದಿನೈದನೆ ಗಳಿಗೆ। ಲಗ್ನವು-ಒದಗಿಹುದದರೊಳಗೆ। ಮುದದಲಿ
ಕಮಲಾವತಿ ಪುರಕೀಗಳೆ। ಯದುಪರಿವಾರವು ಸುದತಿಯರೆಲ್ಲರು ॥೩॥

ಕೃ- ಗಡಿಬಿಡಿಯಲ್ಲಿ ಮರೆತೆ ರುಕ್ಮಿಣಿ! ಕಮಲಾವತಿ ಪಟ್ಟಣದ ಕಮಲ ಭೂಪನ ಏಕಮಾತ್ರ ಪುತ್ರಿ ರತಿಯೆಂಬವಳೇ ನಿನ್ನ ಸೊಸೆಯಾಗತಕ್ಕವಳು. ಈ ದಿನವೇ ಹದಿನೈದನೆ ಗಳಿಗೆಗೆ ಲಗ್ನ ನಿಶ್ಚಯಿಸಿದೆ. ನಮ್ಮ ಯಾದವ ಸ್ತ್ರೀಯರೂ, ಯಾದವವೀರರೂ ದಿಬ್ಬಣಕ್ಕೆ ಸಿದ್ಧರಾಗುವಂತೆ ಏರ್ಪಾಡಾಗಬೇಕು.

ತೆರಳುವುದೀಕ್ಷಣದೀ। ದಿಬ್ಬಣೆ। ಗರುಸಹಿತತಿ ಮಾಡದಿ। ತರುಣಿಯೊ
ಳಿಂತೀಪರಿಯಲಿ ನುಡಿದಾ। ಮಾರಹರನಯ್ದಿದನರಮನೆಗಾಗಳೆ ॥೪॥

ಕೃ- ಸ್ತ್ರೀಯರು ಕಲಶಕನ್ನಡಿಗಳೊಂದಿಗೆ ಮುಂದಾಗಿ ಹೊರಡಲು ತಯಾರಾಗಿರಲಿ. ಬಲರಾಮ, ಸಾತ್ಯಕಿ ಮೊದಲಾದ ನಮ್ಮ ಬಂಧುಬಾಂಧವ ಯಾದವರೆಲ್ಲರೂ ಸಿದ್ಧರಾಗಿ ಬರಲಿ. ಮದುವಣಿಗನಾದ ಮನ್ಮಥನನ್ನು ಸರ್ವಾ ಭರಣಗಳಿಂದ ಅಲಂಕರಿಸು. ಎಲ್ಲರೂ ಮುಹೂರ್ತ ಕಾಲಕ್ಕೆ ಮೊದಲಾಗಿ ಅಲ್ಲಿಗೆ ತಲಪಬೇಕಾದ ಕಾರಣ ಮುಂದಿನ ವ್ಯವಸ್ಥೆಗಾಗಿ ಈಗಲೇ ಹೋರಟೆ. ಆದರೆ ಸ್ತ್ರೀಯರ ಏರ್ಪಾಡು ನಿನ್ನದೇ ಇರಬೇಕು ಕಂಡೆಯಾ!

ಭಾಮಿನಿ

ಅರಸನೆಂದುದ ಕೇಳುತಾಕ್ಷಣ। ಭರದಿ ರುಕ್ಮಿಣಿ ಬಂದು ತನ್ನಯ।
ತರಳನಿಗೆ ನೀರೆರೆದು ವಿಧ್ಯುಕ್ತ ಪ್ರಕಾರದಲಿ॥
ವಿರಚಿಸಲು ಬಳಿಕಿತ್ತ ಲಕ್ಷ್ಮೀ। ವರನು ಮನದಲಿ ಗರುಡನನು ತಾ।
ಸ್ಮರಿಸಲದನರಿತಾಗಲಯ್ತಂದನು ಸರಾಗದಲಿ ॥೧॥

ರು- ಪತಿದೇವರ ಮಾತುಗಳು ಸಂತೋಷದ ಕಡಲಿನಲ್ಲಿ ಮುಳುಗೇಳುವಂತೆ ಮಾಡಿದುವು. ಮದನನ ಮದುವೆಯು ಈ ದಿನವೇ ಎಂದ ಮೇಲೆ ಏನು ಹೇಳಬೇಕು? ಸ್ವಾಮಿಯ ಕೃಪಾದೃಷ್ಟಿಯು ನನ್ನ ಮೇಲೆ ಬಿತ್ತೆಂಬುದು ನಿಶ್ಚಯ. ಆದ್ದರಿಂದ ಕೂಡಲೆ ವರನಿಗೆ ನೀರೆರೆಯುವ ಶಾಸ್ತ್ರ ವಿಧಿಯನ್ನು ಪೂರೈಸುವೆನು. ವೈಭವವಮಾಡಲು ಸಮಯವಿಲ್ಲ. ಹದಿನೈದು ಗಳಿಗೆಗೆ ಲಗ್ನವಲ್ಲವೆ?

ಕೃ- ಪ್ರಪಂಚವೇ ಆಶ್ಚರ್ಯ ಪಡುವಂತೆ ಈ ಮದುವೆ ನಡೆಯಬೇಕೆಂದು ನನ್ನ ಸಂಕಲ್ಪ. ಆದರೆ ಎಲ್ಲರೂ ಸುದ್ದಿ ಕೇಳಿ ಬರುವಷ್ಟು ಸಮಯವಿರಬೇಕಲ್ಲ! ವಾಯುವೇಗದಿಂದ ವಾರ್ತೆಕೊಟ್ಟು ಕರೆತರಲು ಗರುಡನನ್ನು ನೇಮಿಸಿದರೆ ಬೇಕಾದವರನ್ನೆಲ್ಲ ಬರಮಾಡಿಕೊಳ್ಳಬಹುದು. ಆದುದರಿಂದ ಗರುಡನನ್ನು ಸ್ಮರಿಸುವೆನು. ಪಕ್ಷಿರಾಜಾ! ಗರುಡಾ!

ರಾಗ- ಸೌರಾಷ್ಟ್ರ; ತಾಳ- ತ್ರಿವುಡೆ.

ಹರಿನಮೋ ಎಂದಾಸುಪರ್ಣನು। ಚರಣಸಾರಸಕೆರಗುತೇಂದ।
ಭರದೊಳೆನ್ನನುಸ್ಮರಿಸಿದಂಥಾ। ಪರಿಯದೇನು ॥೧॥

ಗರುಡ- ಹರೀ ಕೃಷ್ಣಾ ನಾರಾಯಣ! ಸ್ಮರಿಸಿಕೊಂಡ ಮಹಾಕಾರ್ಯ

ವೇನು? ಯಾವ ಸೇವೆಯನ್ನೂ ಮಾಡಲು ಸಿದ್ಧನಿರುತ್ತೇನೆ.

ಕೃ– ಶುಭವಾಗಲಿ! ನಾನು ಸ್ಮರಿಸಿದ ಕಾರಣವೇ?

ಗರುಡಲಾಲಿಸಿ ಕೇಳು ನಮ್ಮಯ। ತರಳ ಮನ್ಮಥನಿಂಗೆ ಲಗ್ನವ।
ವಿರಚಿಸಲ್ಕೆಂದೆನುತ ನೆನೆದಿಹೆ। ಹರುಷದಿಂದ ॥೨॥

ಕೃ– ಪಕ್ಷಿರಾಜಾ! ಇದೊಂದು ಅಪೂರ್ವ ಸಂದರ್ಭ. ನಾನೂ ನೀನೂ ವಧುವನ್ನರಸುತ್ತ ಈ ಹಿಂದೆ ಹೋಗಿ ಬಂದಿದ್ದೆವು. ಅಪೂರ್ಣವಾದ ಆ ಕೆಲಸ ಕೈಗೂಡಿ ಬಂದಿದೆ. ಈಗದು ತ್ವರಿತದಿಂದಾಗಬೇಕಲ್ಲವೆ?

ಅದಕೆ ತನ್ನಿಂದಾಹಸೇವೆಯ। ವಿಧವನರಿತಾನುಸುರಿದರೆ ತಾ।
ನೊದಗಿಸುವೆ ಬೇಗೆನಲು ಪೇಳಿದ। ಮದನಜನಕ ॥ ೩ ॥

ಗರುಡ– ಸ್ವಾಮಿ! ನಮ್ಮ ಮನ್ಮಥ ದೇವನ ವಿವಾಹವೇ ಬಹಳಾನಂದ ಆ ಸಂದರ್ಭದಲ್ಲಿ ನಾನು ಯಾವ ರೂಪದ ಸೇವೆಯನ್ನು ಸಲ್ಲಿಸಬೇಕೋ ತಿಳಿಯದು. ಅಪ್ಪಣೆಯಾದರೆ ತತ್‌ಕ್ಷಣವೇ ಪೂರೈಸಿ ಬಿಡಲು ಸಿದ್ಧನಿರುತ್ತೇನೆ, ಹೇಳೋಣಾಗಲಿ.

ಗರುಡ ಕೇಳ್ನೆ ಸಕಲ ದೇಶದ। ಧರಣಿಪಾಲರಿಗಿಂದುಪತ್ರವ।
ಬರೆಸಿಕೊಡುತಿಹೆ ತೋರುತವರಿಗೆ। ಕರೆತರುವುದು ॥ ೪ ॥

ಕೃಷ್ಣ– ವೈನತೇಯನೇ! ಜಗತ್ತಿನ ಮಹಾವ್ಯಕ್ತಿಗಳೂ ರಾಜಾಧಿರಾಜರೂ ಯಾರೆಂದು ನೀನೇ ತಿಳಿದಿರುತ್ತೀ. ಅಂಥವರೆಲ್ಲರೂ ಬಂದು ಈ ಶುಭಕಾರ್ಯವನ್ನು ನಡೆಸಿಕೊಡಬೇಕಾಗಿದೆ. ಅದಕ್ಕಾಗಿ ಕರೆಯೋಲೆಗಳನ್ನು ಬರೆಸಿಕೊಡುತ್ತೇನೆ. ಅವುಗಳನ್ನು ಪ್ರತಿಯೊಬ್ಬರಿಗೂ ಕೊಟ್ಟು, ಹಾಗೆಯೇ ಕರೆದುಕೊಂಡು ಬರುವುದು ನಿನ್ನ ಪಾಲಿನ ಸೇವೆಯಾಗಿದೆ. ಏನು ಸಿದ್ಧನಾದೆಯಾ?

ಗರುಡ– ದೇವರಪ್ಪಣೆ, ತಮ್ಮ ಸೇವೆಯನ್ನು ಶೀಘ್ರವಾಗಿಯೇ ನಡೆಸುವೆನು.

ಭಾಮಿನಿ

ಸಿರಿಯರಸನಪ್ಪಣೆಯನಾಂತಾ ಗರುಡದೇವನು ತನ್ನ ಮನದಲಿ।
ಹರಿಯ ಸ್ಮರಿಸುತಗಮಿಸಿ ಲಿಖಿತವ ತೋರಿ ಸರ್ವರಿಗೆ॥ ಸರಸಿ
ಜೋದ್ಭವ ರುದ್ರಮುತ್ತಾ। ಸುರಪ ಮುಖ್ಯಾದ್ಯಮರರೆಲ್ಲರ। ಕರೆ
ತರುತನಡೆತಂದು ಪೊಕ್ಕನು ದ್ವಾರಕಾಪುರವ ॥ ೧ ॥

ಗರುಡ– ಲಕ್ಷ್ಮೀ ಪತಿಯು ಆಜ್ಞೆಯಂತೆ ರಾಜಾಧಿರಾಜರಿಗೂ ಬ್ರಹ್ಮ ರುದ್ರ ಇಂದ್ರಾದಿ ದೇವತೆಗಳಿಗೂ ಆಮಂತ್ರಣ ಪತ್ರವನ್ನು ಕೊಟ್ಟದ್ದೇ ತಡ. ಸರ್ವರೂ ನನ್ನ ಬೆನ್ನಮೇಲೇರಿ ಪ್ರಯಾಣಕ್ಕೆ ಸಿದ್ಧರಾದರು. ಇನ್ನೇನು? ಎಲ್ಲರನ್ನೂ ಕರೆದುಕೊಂಡು ದ್ವಾರಾವತಿಗೆ ತಟ್ಟನೆ ಹಾರಿಬಿಡುತ್ತೇನೆ. ಆಹಾ! ದ್ವಾರಕಿಯೇ ಬಂದುಬಿಟ್ಟಿತು.

ವಾರ್ಧಿಕ

ಧರೆಯಧಿಪ ಕೇಳಿಂತು ನಡೆತಂದ ಬೊಮ್ಮಾದಿ। ಸುರರ ಸತ್ಕರಿ
ಸುತ್ತ ಶ್ರೀ ಕೃಷ್ಣ ಬಳಿಕ ಸತ್ವರದಿ ಪಾಂಡವರಿಂಗೆ ಪ್ರತ್ಯೇಕ
ಲಿಖಿತಮಂ ಬರೆದದಂಕಳುಹಲಂದು॥ ಚರರು ನಡೆತಂದು ಯು
ಧಿಷ್ಠಿರಂಗೀಯಲತಿ। ಹರುಷದಿಂ ಲೇಖನವ ವಾಚಿಸಿ ಸಹೋದರ
ರ ಕರೆದಾಗ ಮನ್ಮಥನ ಲಗ್ನ ವೃತ್ತಾಂತಮಂ ಸಾಂಗಮನೆ
ವಿವರಿಸಿದನು ॥ ೧ ॥

ಕೃಷ್ಣ– ಗರುಡನ ಸಾಹಸವೇ ಸಾಹಸ. ಏನು ಹೇಳಲಿ? ಬ್ರಹ್ಮಾದಿ ದೇವತೆಗಳೇ ಮೊದಲಾದವರು ದ್ವಾರಾವತಿಗೆ ಇಳಿದು ಬರುತ್ತಿದ್ದಾರೆ. ಆದರೆ ಪಾಂಡವರ ಆಗಮನವಿಲ್ಲ. ಅದಕ್ಕಾಗಿ ಈಗಲೇ ನಮ್ಮ ಚಾರಕರನ್ನು ಪತ್ರ ಸಮೇತವಾಗಿ ಹಸ್ತಿನಾವತಿಗೆ ಕಳುಹಿಸಿಬಿಡುವೆನು. ಬಂದವರನ್ನು ಯಥೋಚಿತವಾಗಿ ಸತ್ಕರಿಸಲು ವ್ಯವಸ್ಥೆ ಮಾಡುವೆನು.

ಧರ್ಮರಾಯ– ಈ ದಿನ ದೊಡ್ಡ ಮಂಗಲೋತ್ಸವದ ದಿನವು. ಏಕೆಂದರೆ ರತಿ ಮನ್ಮಥರು ವಿವಾಹವಾಗುವ ದಿನ. ಅದಕ್ಕಾಗಿ ಸರ್ವರೂ ಬರಬೇಕೆಂದು ಶ್ರೀ ಕೃಷ್ಣ ಸ್ವಾಮಿಯು ಪತ್ರ ಕಳುಹಿಸಿರುತ್ತಾನೆ. ಈ ವಿವರವನ್ನು ಈಗಲೇ ಸರ್ವರ ಮುಂದೆ ವಿವರಿಸುವುದಕ್ಕಾಗಿ ಸಭಾಮಂಟಪವನ್ನು ಪ್ರವೇಶ ಮಾಡುವೆನು.

ರಾಗ– ಕೇದಾರಗೌಳ। ತಾಳ– ಅಷ್ಟ.

ಶ್ರೀ ಮನೋಹರ ರತ್ನ ತರಳ ಮನ್ಮಥನಿಗೆ। ಪ್ರೇಮದಿ ಲಗ್ನವನು॥ ನಾ
ಮಾಳ್ಪೆ ನೀವೆಲ್ಲ ಬಹುದೆಂದು ಬರೆದಿಹ। ನೀಮಹಾಲಿಖಿತವನು ॥೧॥

ಧ– ಲಕ್ಷ್ಮೀ ರಮಣನಾದ ವಾಸುದೇವನು ಕಳುಹಿಸಿಕೊಟ್ಟ ಪತ್ರವನ್ನು ನೀವೆಲ್ಲರೂ ನೋಡಿದಿರಷ್ಟೆ! ಇದರಲ್ಲಿ ಬರೆದ ಒಕ್ಕಣೆಯನ್ನೋದಿದರೆ

ಸರ್ವರೂ ಆನಂದ ಪಡಬೇಕು. ಏಕೆಂದರೆ ಈ ದಿನ ದ್ವಾರಾವತಿಯಲ್ಲಿ ರತಿ-ಮನ್ಮಥರ ವಿವಾಹವಾಗಲಿದೆಯೆಂದೂ, ನೀವೆಲ್ಲರೂ ಬರಬೇಕೆಂದೂ ಬರೆದಿರುತ್ತಾನೆ. ಇಂತಹ ಸಂದರ್ಭವು ನಮಗೆಲ್ಲಿ ಸಿಕ್ಕೀತು? ಲೀಲಾವತಾರಿಯಾದ ಕೃಷ್ಣನ ಚಾರಿತ್ರ್ಯವನ್ನು ಎಷ್ಟು ಕೊಂಡಾಡಿದರೂ ಸಾಲದು.

ಪೋಗಲೇಬೇಕು ನಾವೀಗಲೆನುತ್ತಿರೆ। ವೇಗದಿ ಧರ್ಮಜನು॥
ನಾಗವೇಣಿಯನೊಡಗೊಂಡನುಜರು ಸಹಿ। ತಾಗಿತಾನಯ್ತಂದನು ॥೨॥

ಧ– ಯಾವ ಪುರುಷೋತ್ತಮನ ಅನುಗ್ರಹದಿಂದ ನಾವೀವೈಭವವನ್ನು ಹೊಂದಿರುತ್ತೇವೆಯೋ ಅವನೇ ಈ ಹೊತ್ತು ಕರೆಯುತ್ತಿದ್ದಾನೆ. ಇಂತಹ ಸಂದರ್ಭವನ್ನು ಕಳಕೊಳ್ಳುವವರಾರು? ನನ್ನೀ ಕಣ್ಮನಗಳು ಎಷ್ಟು ಆಸೆ ಪಡುವುವೋ ಹೇಳುವುದು ಕಷ್ಟ. ತಮ್ಮಂದಿರನ್ನೂ ದ್ರೌಪದಿಯನ್ನೂ ಕರೆದುಕೊಂಡು ಇಂದೀಗ ದ್ವಾರಾವತಿಗೆ ಪ್ರಯಾಣ ಬೆಳೆಸುವೆನು.

ಬಂದರು ಪಾಂಡವರೆಂದೆನುತಲೆ ಚರ। ರಂದು ಸೂಚಿಸೆ ಹರಿಯು॥
ಚಂದದಿಂದಿದಿರಾಗುತರಮನೆಗೊಯ್ದು ತಾ। ನಂದುಪಚರಿಸಿದನು ॥೩॥

ಕೃ– ಪಾಂಡವರು ಬಂದರೆಂಬ ವಾರ್ತೆ ಸೇವಕರಿಂದ ತಿಳಿದ ನಾನು ರಾಜಮರ್ಯಾದೆಯಂತೆ ಮಧ್ಯಮಾರ್ಗದಿಂದ ಇದಿರುಗೊಂಡು ಕರೆತಂದು ಉಪಚರಿಸುವುದು ನನ್ನ ಧರ್ಮವಾಗಿದೆ. ಆದುದರಿಂದ ನಡೆದು ಹೋಗಿ ಕರೆದು ತರಬೇಕಾಗಿದೆ. ಬರಬೇಕು ಭಾವಂದಿರಾ! ಹಲವು ದಿನಗಳಾದುವು ನಿಮ್ಮನ್ನೆಲ್ಲಾ ಒಟ್ಟಾಗಿ ಕಾಣದೆ. ಹೀಗೆ ಬನ್ನಿರಿ.

ರಾಗ-ಸಾಂಗತ್ಯ, ತಾಳ-ರೂಪಕ

ಬಂದಿರೇ ಪಾಂಡವರೆಲ್ಲ ನೀವೆಮ್ಮಯ। ಮಂದಿರಕಾಗಿ ಪ್ರೀತಿಯಲಿ॥
ಮುಂದಣಕಾರ್ಯ ನಿಮ್ಮಿಂದಾಗಬೇಕೆಂದು। ಮಂದರಧರನುಸುರಿದನು॥

ಕೃ– ಭಾವಂದಿರಾ! ನಿಮ್ಮ ಬರವನ್ನೇ ಕಾಯುತ್ತಿದ್ದ ನನಗೆ ನಿಮ್ಮನ್ನು ನೋಡಿದಾಗ ಎಷ್ಟೋ ಧೈರ್ಯ ಬಂತು. ಏಕೆಂದರೆ ಇದೊಂದು ಘನವಾದ ಕಾರ್ಯಕ್ಕೆ ಕೈ ಹಾಕಿದೆ ಯಾವ ಲೋಪದೋಷಗಳೂ ಇಲ್ಲದೆ ಹೇಗೆ ಕೊನೆಗೊಳ್ಳುವುದೋ ಎಂಬ ಭೀತಿ ನನ್ನನ್ನಾವರಿಸಿತ್ತು. ನನ್ನ ಆಮಂತ್ರಣಕ್ಕೆ ಮನ್ನಣೆಕೊಟ್ಟು ಬಂದಿರಲ್ಲ! ಪರಮಾನಂದವಾಯಿತು. ಭೀಮಾರ್ಜುನರೇ ನಿಮ್ಮೆಲ್ಲರ ಸಹಾಯದಿಂದಲೇ ಈ ಕಾರ್ಯ ನಡೆಯಬೇಕೆಂದು ನನ್ನ ಆಶೆ.

ಧ- ಕೃಷ್ಣಾ! ಕೃತಜ್ಞರಾಗಿರುವೆವು. ಇಂತಹ ಶುಭಸಂದರ್ಭದಲ್ಲಿ ನಿನ್ನ ಸೇವೆಯುನ್ನು ನಡೆಸುವುದೆಂದರೆ ನಮಗೊಂದು ಭಾಗ್ಯವೆ?

ಅಂದು ಕೌರವಭೂಪನಿಂದತಿ ಬಳಲಿದ। ರಿಂದು ಕ್ಷೇಮಿಗಳೆ
ಭಾವಯ್ಯ॥ ಮಂದಮತಿಗಳು ತಮ್ಮಿಂದ ತಾವಳಿದರು।
ಮುಂದಿನ್ನು ಭಯವಿಲ್ಲ ನಿಮಗೆ ॥೨॥

ಕೃ- ಭಾವಂದಿರಾ! ಕ್ಷೇಮವಷ್ಟೆ? ಈಗಾವ ಭಯವು ನಿಮಗಿರಲಿಕ್ಕಿಲ್ಲ. ಈ ಹಿಂದೆ ಕೌರವನ ಕೃತ್ರಿಮೋಪಾಯಗಳಿಂದ ಬಹಳ ಬಳಲಿದ್ದೀರಿ. ಅದರಿಂದೇನಾಯಿತು? ದುಷ್ಟಬುದ್ಧಿಗಳಾದವರು ತಮ್ಮ ಅಕೃತ್ಯದ ಫಲದಿಂದಾಗಿ ತಾವೇ ಅಳಿದುಹೋದರು. ಸತ್ಯ ದರ್ಮಗಳಿದ್ದಲ್ಲಿ ಜಯವೆಂಬುದು ನಿಶ್ಚಯ, ಅಂತಹರಿಗೆ ದೈವಾನುಕೂಲವು ಶಾಶ್ವತವಿದೆ.

ಧ- ಅದೆಲ್ಲಕ್ಕೂ ನಿನ್ನ ಅನುಗ್ರಹವೇ ಕಾರಣ.

ತಂಗಿ ಬಂದುದರಿಂದ ಸಂತೋಷವಾಯಿತು। ಶೃಂಗಾರವನು
ರಚಿಸೆನಲು॥ ಹಿಂಗದೆ ಭರದಿ ರುಕ್ಮಿಣಿ ಮುಖ್ಯ ಸತಿಯರು।
ಮಂಗಲಕನನುಸರಿದರು ॥೩॥

ಕೃ- ತಂಗೀ ದ್ರೌಪದಿ! ನಿನ್ನನ್ನು ಬರೀ ಮಾತಿನಿಂದ ಹೊಗಳಿ ಫಲವಿಲ್ಲ. ನನ್ನಿಂದ ಅಸಾಧ್ಯವಾದ ಈ ಮಹಾಕಾರ್ಯವನ್ನು ಲೀಲಾಜಾಲವಾಗಿ ಕೈಗೂಡಿಸಿದ ಚತುರೆ ನೀನು. ಲಗ್ನ ನಿಶ್ಚಯಿಸಿ ನಾಂದಿಯಿಟ್ಟ ನೀನೇ ಮದುಮಗನನ್ನು ಶೃಂಗರಿಸಿ ದಿಬ್ಬಣ ಹೊರಡುವುದಕ್ಕೆ ಅನುಮತಿ ಕೊಡು. ನಿನ್ನಿಂದಲೇ ಮುಂದಿನ ಆರತಿ ಅಕ್ಷತೆಯು ಮಂಗಲಕಾರ್ಯವಾಗಬೇಕೆಂದು ನನ್ನ ಆಶೆ.

ದ್ರೌ- ಅಣ್ಣಾ! ನನ್ನಿಂದಾದ ಮಹಾಕಾರ್ಯವೇನೂ ಇಲ್ಲ. ಎಲ್ಲಾ ನಿನ್ನ ಅನುಗ್ರಹ! ಇರಲಿ. ಅತ್ತಿಗೆ! ಮದುಮಗನೆಲ್ಲಿ? ಅವನನ್ನು ಕಾಣದೆ ಹಲವು ದಿನಗಳಾದುವು. ಕರೆದುಕೊಂಡು ಬನ್ನಿ. ವೇಳೆಯಾಯಿತು.

ವನಜಾಕ್ಷನಾಗಲೆ ವಿನತೆಯಾತ್ಮಜನನು। ಕನಿಕರದಲಿ ಕರೆದೆಂದ।
ವಿನಯದಿ ದಿಬ್ಬಣಿಗರನೆಲ್ಲ ಹೊತ್ತು ನೀ। ಘನವೇಗದೊಳು
ಗಮಿಸೆನಲು ॥೪॥

ಕೃ- ಸುಮಂಗಲಿಯರು ಶೃಂಗಾರವಾಗಿ ಬಂದಿರುವರು. ಮದುವಣಿಗನೂ ಅಲಂಕೃತನಾಗಿ ಆಶೀರ್ವಾದ ಪಡೆದು ಸಿದ್ಧನಾಗಿರುವನು. ಬಂಧುಬಾಂ

ಥವ ಮುಂತಾದವರಿಂದ ಕೂಡಿದ ಈ ನಮ್ಮ ದಿಬ್ಬಣವು ಹೊರಟು ನಿಂತಿದೆ. ಗರುಡಾ! ಈ ಮದುವೆಯ ಯಶಸ್ಸು ನಿನ್ನ ಕೈಯಲ್ಲಿದೆ. ಈ ನನ್ನ ಪರಿವಾರವನ್ನೆಲ್ಲ ಸಮಯಕ್ಕೆ ಸರಿಯಾಗಿ ಕಮಲಾವತಿ ಪಟ್ಟಣಕ್ಕೆ ಮುಟ್ಟಿಸು.

ಗ- ನಿಮ್ಮಾಜ್ಞೆಯನ್ನು ಸ್ವೀಕರಿಸಿದೆ ದೇವಾ!

ಭಾಮಿನಿ

ಮಂದರಾಧರನಾಜ್ಞೆಯಿಂದಲಿ। ಚಂದದಲಿ ದಿಬ್ಬಣಿಗರೆಲ್ಲರು।
ಬಂದು ಗರುಡನ ಮೇಲೆ ಕುಳಿತರು ಬಳಿಕ ಮಾಧವನು॥
ಇಂದುಧರ ಕಮಲಾಸನಾದ್ಯರ। ವೃಂದವಮರರನೆರಸಿ ಕುಂತೀ।
ನಂದನರು ಸಹಿತೇರಿ ಮಂಡಿಸಿದರು ವಿನೋದದಲಿ ॥೧॥

ಕೃ- ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳೂ, ಪಾಂಡವರೂ, ಯಾದವರೂ ಉಳಿದ ಸಕಲಪರಿವಾರವೂ ಗರುಡನನ್ನೇರಿ ಕುಳಿತದ್ದಾಯಿತು. ನೋಡಿದರೆ ಈ ದಿಬ್ಬಣವು ನೋಟಕ್ಕೊಂದು ಹಬ್ಬದಂತಿದೆ. ಎಲ್ಲರೂ ಬಂದುದಾಯಿತಲ್ಲ! ವೈನತೇಯನೇ! ಹೋಗುವಾ.

ದ್ವಿಪದಿ

ಭೂಪಾಲ ಕೇಳಿಂತು ದಿಬ್ಬಣವ ಕೂಡಿ।
ಶ್ರೀಪತಿಯು ಪೊರಟನತಿ ಮುದದೊಳೋಲಾಡಿ ॥೧॥
ವನಜಾಕ್ಷ ರುಕ್ಮಿಣಿಯು ಸಾಂಬಸಹಿತಾಗಿ।
ಅನುವರಿತು ಗರುಡನಲಿ ಕುಳಿತು ಲೇಸಾಗಿ ॥೨॥

ಕೃ- ಆನಂದವೇ ಆನಂದ! ಇಂತಹ ಸಂದರ್ಭವು ಜೀವಮಾನದಲ್ಲಿ ಸಿಕ್ಕುವುದು ದುರ್ಲಭ. ಪಕ್ಷಿರಾಜನಾದ ಗರುಡದೇವನೇ ನಮ್ಮ ದಿಬ್ಬಣವನ್ನು ಗಗನಮಾರ್ಗದಲ್ಲಿ ಸಾಗಿಸುವನೆಂದರೆ ಮೂರುಲೋಕಕ್ಕೂ ಆಶ್ಚರ್ಯವಾಗಬೇಕು. ರುಕ್ಮಿಣಿಯೆ! ನಮ್ಮ ಸಾಂಬ ಮೊದಲಾದ ಮಕ್ಕಳೆಲ್ಲರೂ ಇಲ್ಲಿ ಸೇರಿರುವರಲ್ಲವೆ?

ಬಿರುದುಗಳ ಪೊಗಳುತೀಪರಿಯು ನಾಟಕರ।
ವರಭೇರಿಯನು ಹೊಡೆಸಿ ನಡೆವ ನಾಟಕರ ॥೩॥

ಕೃ- ಆಕಾಶ ಮಾರ್ಗದಲ್ಲಿ ಮಿಂಚಿನ ವೇಗದಿಂದೋಡುವ ಗರುಡನ ಗತಿಯನ್ನು ಯಾರು ವರ್ಣಿಸುವರು? ಒಂದೆಡೆಯಲ್ಲಿ ಭೇರಿ, ತಮ್ಮಟೆ ಮೊದ

ಲಾದ ವಾದ್ಯಘೋಷಗಳಾಗುತ್ತಿವೆ. ಇನ್ನೊಂದೆಡೆ ವಂದಿ, ಮಾಗಧ ಮೊದಲಾದ ಸ್ತುತಿಪಾಠಕರ ಜಯಘೋಷಗಳಾಗುತ್ತಿವೆ. ಈ ಸಂಭ್ರಮವು ಗರುಡನ ವೇಗವನ್ನು ಇಮ್ಮಡಿಸಿತು.

ವಿನಯದಿಂದೊಡಗೂಡಿ ಮುಂದೆ ಮಾರ್ಗದೊಳು।
ಘನವೇಗದಿಂದ ಬರುತಿರಲಂಬರದೊಳು ॥೪॥
ಘೋರ ಕಾನನವೊಂದು ಕಣ್ಗೆ ಗೋಚರಿಸಿ।
ತೋರುತಿರ್ದುದು ಬಹಳ ಭಯವನಾವರಿಸಿ ॥೫॥

ಕೃ– ಎಷ್ಟೋ ಪಟ್ಟಣಗಳೂ, ಪರ್ವತಗಳೂ, ಹಿಂದಾದುವು. ಕಮಲಾವತಿ ಪಟ್ಟಣವು ಇನ್ನೆಷ್ಟು ದೂರವಿದೆ? ಗರುಡಾ! ಕಮಲಾವತಿಯ ದಾರಿ ತಿಳಿದಿರುವೆಯಲ್ಲ! ಹೊತ್ತಿಗೆ ಸರಿಯಾಗಿ ಅಲ್ಲಿಗೆ ಮುಟ್ಟಬಹುದಲ್ಲವೇ? ಮುಂದೆ ಕಾಣುವುದು ಬಹುದೊಡ್ಡ ಕಾಡು ಜಾಗ್ರತೆಯಿಂದ ನಡೆ.

ಮೆರೆದಿರ್ಪುದಾವನಕ್ಕೊಡೆಯನಾಗಿರುವ।
ದುರುಳ ಮೇಘಾಸುರನು ತಿಳಿದನಿವರಿರವ ॥೬॥

ಮೇಘಾಸುರ– ಏನಾಶ್ಚರ್ಯವಿದು ವಿಶಾಲವಾದ ಪರ್ವತಗಳ ಮಧ್ಯವಿರುವ ಈ ಅರಣ್ಯವು ಹಲವು ಕಾಲದಿಂದ ನನ್ನ ಅಂಕೆಯಲ್ಲಿದೆ. ಸೂರ್ಯನೂ ನನಗೆ ಹೆದರಿ, ಅವನ ರಶ್ಮಿಗಳನ್ನು ನಮ್ಮ ಅಭೇದ್ಯ ಗಡಿಗಳಾದ ಪರ್ವತದಿಂದಾಚೆಗೆ ಹರಡುತ್ತಿರುವನು. ಪ್ರಾಣಿಗಳಂತೂ ನನ್ನಂಕೆಯನ್ನು ಮೀರಲು ಸಾಧ್ಯಇಲ್ಲ. ಇಲ್ಲಿ ನಾನುಸುರಿದ್ದೇ ನ್ಯಾಯ. ನನ್ನ ವಾಸಸ್ಥಾನವನ್ನು ಯಾವುದೇ ಕಾರಣದಿಂದ ಯಾರೂ ಇದುವರೆಗೆ ದಾಟಿದವರಿಲ್ಲ. ಹೀಗೆ ನನ್ನ ಭಗಿನಿಯೊಂದಿಗೆ ಇಷ್ಟರತನಕ ಯಾವ ಕುಂದುಕೊರತೆಗಳೂ ಇಲ್ಲದೆ ಇಲ್ಲಿ ಸರ್ವಾಧಿಕಾರವನ್ನು ಗಳಿಸಿಕೊಂಡು ಸುಖವಾಗಿದ್ದೇನೆ. ಆಂ! ಇಂದೇನು ಅಂತರಿಕ್ಷದಲ್ಲಿ ಕೊಂಬು ಕಹಳೆಗಳ ಕೂಗಾಟ? ನನ್ನಪ್ಪಣೆ ವಿನಹ ನನ್ನ ಈ ಅಂತರಿಕ್ಷದಲ್ಲಿ ಅಕ್ರಮ ಪ್ರವೇಶವೇ? ತಂಗೀ! ಬಾ ಇಲ್ಲಿ. ಕೇಳಿದೆಯಾ! ಹೋಗು. ಆ ಪರ್ವತವನ್ನೇರಿ ನೋಡು. ಅವರಾರೇ ಇರಲಿ ಹೆಡೆಮುರಿ ಕಟ್ಟಿ ಹಿಡಿದು ತಾ! ನಾನು ವಿಚಾರಿಸಿ ಅವರ ಗರ್ವ ಇಳಿಸುತ್ತೇನೆ.

ಅವನನುಜೆ ಮೇಘಸ್ವಸಿಯು ತಿಳಿದು ಬಂದು॥
ಜವದಿ ದಿಬ್ಬಣ ತಡೆವಳಡೆ ಹಾಯ್ದು ನಿಂದು ॥ ೭ ॥

ಮೇಘಸ್ತನಿ– ಹಾರುವ ಹಕ್ಕಿಯಮೇಲೆ ಯಾರೋ ಕುಳಿತು ಗದ್ದಲ ಮಾಡುವಂತಿದೆ. ರೆಕ್ಕೆಗಳನ್ನು ಬೀಸಿ ಉಲ್ಲಾಸದಿಂದ ಹಾರುತ್ತಿರುವಹಕ್ಕಿಯೆ! ನಿಲ್ಲು! ಈ ದಾರಿಯಾಗಿ ಹೊಗಲು ನಿನಗೆ ಅಪ್ಪಣೆ ಕೊಟ್ಟವರಾರು? ಇನ್ನೂ ಹಾರಿದರೆ ರೆಕ್ಕೆಗಳನ್ನು ಕತ್ತರಿಸಿ ಸೊಕ್ಕು ಮುರಿದೇನು ತಿಳಿಯಿತೇ?

ಪಕ್ಷಿಯನು ತಿಂಬೆನೆನ್ನುತ ಬಾಯು ಕಳೆದು ॥
ಅಕ್ಷಣದಿ ಬಂದಿರುವ ಬಗೆಯ ಹರಿ ತಿಳಿದು ॥ ೮ ॥
ಕರದೊಳಗೆ ಚಕ್ರವನು ಧರಿಸಿತಾಬೇಗ॥
ಬರಲು ಕಂಡವನೊಡನೆ ಪೇಳ್ದಳವಳಾಗ ॥ ೯ ॥

ಕೃಷ್ಣ– ಅದಾರು? ಯಾವಳೋ ರಾಕ್ಷಸಿಯೊಬ್ಬಳು ತಿಂದೇ ಬಿಡುವೆನೆಂದು ಅಡ್ಡಗಟ್ಟುತ್ತಿದ್ದಾಳೆ. ಶ್ರೇಯಾಂಸಿ ಬಹು ವಿಘ್ನಾನಿ ಎಂಬಂತೆ ಏನೋ ಕೆಡುಕಿಗಾಗಿ ನಿಂತಿರಬಹುದು. ಅದಕ್ಕಾಗಿ ಸುದರ್ಶನ ಚಕ್ರವನ್ನು ಕೈಯಲ್ಲಿ ಹಿಡಿದು ಸಿದ್ಧನಾಗಿಬಿಡುವೆನು.

ಮೇಘ– ಬಹಳ ಸಂತೋಷ. ಹಕ್ಕಿಯನ್ನು ತಿನ್ನುವುದಕ್ಕೆ ಹೋದರೆ, ಯಾವನೊ ಮನುಷ್ಯನೊಬ್ಬನು ಕಾಣಸಿಕ್ಕಿದನು. ಅಹಹ! ಏನು ಭಾಗ್ಯವಿದು. ಒಬ್ಬನಲ್ಲ ಸಾವಿರಾರು ಮಂದಿಗಳೂ ಕಾಣುವರು. ದೊಡ್ಡ ಜಾತ್ರೆಯೇ ಆಗಿಬಿಟ್ಟಿದೆ, ಇರಲಿ ಮಾತಾಡಿಸಿ ನೋಡುತ್ತೇನೆ.

ರಾಗ— ಮಾರವಿ। ತಾಳ— ಅಷ್ಟ.

ಆರೊ ಬಂದವರೂ। ಈ ವಿಪಿನಕಿ। ನ್ನಾರೊ ಬಂದವರು ॥ ಪಲ್ಲ ॥
ಭೂರಿತೋಷದಿಂದಲಿಂಥ। ಘೋರ ಕಾನನಕ್ಕೆ ನಿಮ್ಮ।
ನಾರಿಯರನು ಸೇರಿ ಬಂದ। ಕಾರಣಗಳ ಬೇಗ ಪೇಳ್ಕೈ ॥ ೧ ॥

ಮೇಘ– ಯಾರೊ ನೀನು? ಎಷ್ಟು ಧೈರ್ಯವೊ ನಿನಗೆ, ಈ ಕಾಡನ್ನು ದಾಟಿ ಹೋಗುವಷ್ಟು ಸಮರ್ಥನಾದೆಯಾ? ಲೆಕ್ಕವಿಲ್ಲದಷ್ಟು ಸ್ತ್ರೀಯರನ್ನು ಕೂಡಿಕೊಂಡು ಎಲ್ಲಿಗೆ ಹೋಗುತ್ತೀ. ಇದೋ ಮೇಘಾಸುರನ ರಾಜ್ಯದಲ್ಲಿ ಯಾರ ಪೌರುಷವೂ ನಡೆಯುವ ಹಾಗಿಲ್ಲ. ಸುಮ್ಮನೆ ಯಾವ ಕಾರಣಕ್ಕಾಗಿ ಇಲ್ಲಿ ಬಂದೆ ಹೇಳು.

ನರರ ಮಾಂಸ ಮೆಲದೆ ತೊಡುವಿ। ಲಿರುವ ಸಮಯದಿ ಬಂದು ತನ್ನ
ಕರದಿ ಸಿಕ್ಕಿದ ಮೇಲೆ ಬಿಟ್ಟರೆ। ಬರುವುದೆನಗಪಕೀರ್ತಿಯಿಪರಲಿ ॥೨॥

ಮೋಘೆ- ಎಲವೋ ಕುರಿ ಮನುಷ್ಯನೇ! ಮುಂದರಿಯ ಬೇಡ. ನಿನ್ನಂತಹ ಮನುಷ್ಯರ ಮಾಂಸವನ್ನು ಮೆಲ್ಲದೆ ಎಷ್ಟೋ ದಿನಗಳಾದುವು. ಬಾಯಿ ರುಚಿ ಕೆಟ್ಟು ಹೋಗಿತ್ತು ಅದೇ ಆಸೆಯಿಂದಿರುವಾಗ ನನ್ನ ಭಾಗ್ಯವಶಾತ್ ನೀನಾಗಿಯೇ ಬಂದಿರುತ್ತೀ. ಅಹಾ! ಬಹಳ ಸಂತೋಷ. ಕೈಗೆ ಸಿಕ್ಕಿದ ನಿನ್ನನ್ನೂ ನಿನ್ನವರನ್ನೂ ಕೊಲ್ಲದೆ ಬಿಟ್ಟರೆ ಎಂತಹ ಅಪಕೀರ್ತಿ ಬಂದೀತು ಗೊತ್ತೇ!.

ಕೃಷ್ಣ- ದುಷ್ಟ ರಾಕ್ಷಸಿಯೇ! ಬಾಯ್ಗೆಬಂದಂತೆ ಇನ್ನೂ ಹೇಳು.

ತಂಡ ತಂಡದೊಳಿರುವ ಬಲವನು। ತುಂಡು ತುಂಡುಗೆಯ್ಯುತೆಣ್ಣೆಯ
ಭಾಂಡದಲಿ ಹುರಿದು ಹುರಿದು। ಗಂಡನಿಗುಣಬಡಿಸಿ ತಿನುವೆನು ॥೩॥

ಮೋಘೆ- ಅಹಹ! ಏನು ಚಂದ? ಸ್ತ್ರೀಯರ ಸಮಾಜವು ತಂಡ ತಂಡವಾಗಿ ನಿಂತಿರುವುದು. ಒಬ್ಬೊಬ್ಬರನ್ನೇ ಕಡಿದುಕಡಿದು ಎಣ್ಣೆಯಲ್ಲಿ ಕಾಯಿಸುವಾಗ ಮೃತ್ಯು ದೇವತೆಯಾದರೂ ಆಸೆಪಡಬೇಕು. ಅಂತಹ ರುಚಿಯಾದ ನರಮಾಂಸಗಳನ್ನು ತೆಗೆದು ನಾನೂ ನನ್ನ ಗಂಡನೂ ಒಟ್ಟಾಗಿ ಸೇವಿಸುವಾಗ ಎಷ್ಟು ಆನಂದವಾದೀತೋ ನೀನೇ ಹೇಳು.

ರಾಗ— ಶಂಕರಾಭರಣ। ತಾಳ— ಮಟ್ಟೆ.

ದನುಜೆ ಕೇಳೊ ಕೂಗದೀಗ। ವಿನಯದಿಂದ ಸಾರು ಹಿಂದೆ।
ದಿನಪನಣುಗನಿಳೆಯತೋರ್ಪೆ। ನಿನಗೆ ನಿಮಿಷದಿ ॥ ೧ ॥

ಕೃಷ್ಣ- ಎಲೋ ದಾನವಿಯೇ! ನಿನ್ನ ಅಟ್ಟಹಾಸವನ್ನು ಸಾಕುಮಾಡು ಈ ಅರ್ಭಟ ಕೇಳಿ ನಮ್ಮಲ್ಲಿನ ಸ್ತ್ರೀಯರೂ ಬಾಲಕರೂ ಹೆದರಿಕೊಳ್ಳುತ್ತಿದ್ದಾರೆ. ಸುಮ್ಮನೆ ಏಕೆ ಒದರುತ್ತಿ? ನಿನಗೇನು ಸಲುಗೆಯಿದೆಯೇ? ಬಾಯಿಗೆ ಬೀಗ ಹಾಕಿಕೊಂಡು ಹಿಂದೆ ಹೋದರೆ ಜೀವವುಳಿದೀತು. ಗರ್ವದಿಂದುಬ್ಬಿ ಬಂದರೆ ಯಮನ ಪಟ್ಟಣಕ್ಕೆ ಅಟ್ಟಿ ಬಿಟ್ಟೇನು.

ಎಲವೋ ಮನುಜ ಕೇಳು ನಿನ್ನ। ಬಲವನೆಲ್ಲ ತಿಂಬೆನೆಂದು।
ಛಲದ ಬಂದೆನಿಲ್ಲಿ ನಾನು। ಗೆಲುವಿನಿಂದಲಿ ॥ ೨ ॥

ಮೋಘೆ- ಎಲೋ ಮನುಷ್ಯನೇ! ಗರ್ವ ಬೇಡ. ನಿನ್ನ ಹೆದರಿಕೆಯ ಮಾತುಗಳಿಂದ ಸರ್ವಥಾ ಹಿಂದೆ ಓಡುವಳಲ್ಲ. ನಿನ್ನನ್ನೂ ನಿನ್ನ ಬಲ

ವನ್ನೂ ಹೊಟ್ಟೆ ತುಂಬಾ ತಿಂದು ಸಂತೋಷಪಡುವುದಕ್ಕಾಗಿ ಮುಂದೆ ಬಂದಿರುತ್ತೇನೆ. ಆ ಛಲವನ್ನು ಖಂಡಿತ ಪೂರೈಸದೆ ಬಿಡಲಾರೆನು.

ಧೃಷ್ಟೆ ಮೂಳಿ ದೂರನಿಲ್ಲು। ಕುಟ್ಟಿ ನಿನ್ನ ಶಿರವನರಿವೆ।
ಪೆಟ್ಟು ತಿನದೆ ಹೋಗು ಮನೆಗೆ। ತಟ್ಟಸೀಗಳೆ ॥ ೩ ॥

ಕೃಷ್ಣ– ಎಲೋ ನೀತಿಗೆಟ್ಟವಳೇ। ದೂರನಿಲ್ಲು. ಏನೇನೊ ಒದರಿಕೊಂಡು ಸಿಟ್ಟಿಬ್ಬಿಸಬೇಡ. ಇದೋ ಸಾರಿ ಹೇಳುತ್ತೇನೆ. ನೆಟ್ಟನೆ ಮನೆಗೆ ಹೋಗಿ ಗಂಡನೊಡನೆ ಸುಖವಾಗಿರು. ಅದಲ್ಲದೆ ಮುಂದೆ ಬಂದರೆ ಪೆಟ್ಟು ತಿನ್ನಬೇಕಾದೀತು. ಸುಮ್ಮನೆ ಒದರಿಕೊಂಡು ಏಕೆ ಸಾಯುತ್ತೀಯೋ?

ಇಷ್ಟು ನುಡಿದ ಮೇಲೆ ನಿನ್ನ। ಬಿಟ್ಟು ಪೋಗೆನಾನೆನುತ್ತ।
ಮುಷ್ಟಿಯಿಂದ ತಿವಿದಳಾಗ। ದುಷ್ಟ ರಾಕ್ಷಸಿ ॥ ೪ ॥

ಮೋಘ– ಏನೋ ತಾತ್ಸಾರ ಮಾಡುತ್ತೀಯಾ?. ನಿನ್ನ ಬುದ್ಧಿಯನ್ನು ತಿದ್ದಿ ನರಮಾಂಸದಿಂದ ತೃಪ್ತಳಾಗದ ವಿನಹ ಮನೆಗೆ ಹೋಗುವಳಲ್ಲ. ಕಾದಾಡುವ ಸಾಮರ್ಥ್ಯವಿದ್ದರೆ ಇದೋ ಯುದ್ಧಕ್ಕೆ ನಿಲ್ಲು. ಕೈ ಮುಷ್ಟಿಯಬಲವನ್ನು ಪ್ರತ್ಯಕ್ಷವಾಗಿ ನೋಡಿ ಬಿಡು.

ಸೊಕ್ಕಿನಿಂದ ಮಿಕ್ಕುವರಿದ। ರಕ್ಕಸಿಯನು ಕಂಡು ಬಳಿಕ।
ಚಕ್ರದಿಂದ ಶಿರವನರಿದು। ನಕ್ಕುನಿಂದನು ॥ ೫ ॥

ಕೃಷ್ಣ– ಸಾಕೊ ನಿನ್ನ ಅಧಿಕ ಪ್ರಸಂಗ. ನಿನ್ನ ಗರ್ವಕ್ಕೆ ತಕ್ಕಪ್ರತಿಫಲವನ್ನು ಈಗಲೇ ಕೊಡುತ್ತೇನೆ. ರಕ್ಕಸರನ್ನು ಸಂಹಾರಮಾಡುವ ಚಕ್ರದ ಮುಂದೆಯೂ ದರ್ಪವೇ! ನಿನ್ನ ತಲೆಯನ್ನು ಕತ್ತರಿಸಿ ಯಮಲೋಕಕ್ಕೆ ಕೊಂಡು ಹೋಗಲು ಸಿದ್ಧವಾಗಿರುವುದು ನೋಡು.

ಮೋ– ನಾನೂ ಸಿದ್ಧಳಾಗಿರುವೆನು. ಮತ್ತೇನು ಯೋಚನೆ?

ಭಾಮಿನಿ

ದುರುಳೆ ಮೆಘಸ್ತನಿಯ ರಣದಲಿ। ಹರಿಯು ತಾ ಸಂಹರಿಸಿ ಮತ್ತಾ।
ನಿರದೆ ಮುಂದಕೆ ತೆರಳೆ ದಿಬ್ಬಣ ಸಹಿತ ವಿಭವದಲಿ॥
ಭರದಿ ನಡೆತರಲದನು ಪರಿಕಿಸು। ತುರುತರದ ಕೋಪದಲಿ ಮೋಘಾ।
ಸುರನು ನಡೆತಂದಾಗ ತಡೆದನು ಹರಿಯ ಭೋರ್ಗುರ್ದಿಸಿ ॥೧॥

ಮೋಘಾಸುರ– ಏನದು? ನನ್ನಿಂದ ಆಜ್ಞೆ ಪಡೆದು ಹೋದ ತಂಗಿಯು

ಬರವನ್ನೇ ಕಾಯುತ್ತಿದ್ದ ನಾನು ಅವಳ ಆರ್ತನಾದ ಕೇಳಬೇಕಾಯಿತಲ್ಲ! ಅವಳಿಗೇನೋ ಕಷ್ಟ ಒದಗಿರಬೇಕು. ನಾನೇ ಹೋಗಿ ಅವಳನ್ನು ರಕ್ಷಿಸಿ ಕಷ್ಟ ಕೊಟ್ಟವರನ್ನು ಶಿಕ್ಷಿಸುವುದು ಉಚಿತವಾದ ಕಾರ್ಯ. ಆದ್ದರಿಂದ ತ್ವರಿತದಲ್ಲಿ ವೈರಿಯನ್ನು ತಡೆದು ನೋಡಿದರೆ ಬಹಳ ಆನಂದವಾಗುತ್ತಿದೆ. ತಂಡ ತಂಡ ವಾಗಿದೆ ಜನಸಮೂಹ! ತಿಂದು ತೇಗಬಹುದು. ಆಹಾ! ಇತ್ತ ತಂಗಿಯು ತುಂಡು ತುಂಡಾಗಿ ಬಿದ್ದಿರುವುದನ್ನು ಕಂಡಾಗ ದುಃಖವೂ ಆಗುತ್ತಿದೆ. ಇವರ ನ್ನು ಹೀಗೇ ಬಿಡಬಹುದೆ? ಮೊದಲು ಕರೆದು ವಿಚಾರಿಸುತ್ತೇನೆ.

ರಾಗ- ಭೈರವಿ, ತಾಳ- ಏಕ

ಎಲವೊ ನರಗುರಿ ಕೇಳು। ನೀ-ನಿಲದಿಹುದೆನ್ನಿದಿರಿನೊಳು।
ಸಲುವುದೆ ಪಂಥವು ನಿನಗೆ। ತವ-ತಲೆಕಡಿವೆನೀಗಳಿಗೆ ॥೧॥

ಮೋ– ಕಿರೀಟ ಹೊತ್ತು ಇದಿರಾಗಿ ತೋರುವ ಹುಲುಮಾನವಾ! ನೀನು ಈ ದಾರಿಯಾಗಿ ಬಂದದ್ದೇ ತಪ್ಪು. ನನ್ನ ತಂಗಿಯನ್ನು ಕೊಂದು ಹಕ್ಕಿ ಯನ್ನೇರಿ ತಪ್ಪಿಹೋಗುವ ಯೋಚನೆಯೇ? ಎ ಪಾಪಿಗಳಿರಾ! ಇತ್ತ ನೋಡಿ! ನಿಮಗೆಲ್ಲಾ ನಾನೇ ಮೃತ್ಯು.

ಕೃ– ರಕ್ಕಸನೇ! ವಿಚಾರಿಸಲು ನೀನೇ ಮೊದಲು ಬರಬಾರದಿತ್ತೆ?
ಹರ ಮುನಿದರೆ ಭಯವಿಲ್ಲ। ಸುರ-ವರರೊಳಗೆನಗಿದಿರಿಲ್ಲ।
ಧರೆಯೊಳಿರುವ ಜನರುಗಳು। ಗೆಲ-ಲರಿಯರೆನ್ನ ಸಮರದೊಳು ॥೨॥

ಮೋ– ಮನುಷ್ಯ ಕೀಟವೆ! ಜಾಗ್ರತೆಯಿಂದ ಮಾತಾಡು. ಹರನೇ ಮುನಿದು ಬಂದರೂ, ಇಂದ್ರಾದಿಗಳೇ ಒಂದಾಗಿ ಬಂದರೂ ಒಂದೇ ಸಮನೆ ಯುದ್ಧ ಕೊಡಬಲ್ಲ ನನ್ನೊಡನೆ ನೀನು ಹಗೆಕಟ್ಟಿಕೊಂಡೆ. ನನ್ನ ತಂಗಿಯನ್ನು ಕೊಂದ ಜಂಭ ನನ್ನಲ್ಲಿ ತೋರಿದರೆ ಏನಾದೀತು ಬಲ್ಲೆಯಾ?

ಕೃ– ಶಿವ, ಇಂದ್ರಾದಿಗಳೆಲ್ಲ ಇಲ್ಲೇ ಇರುವರು. ಆದರೆ ಅವರು ಬಂದ ಕಾರ್ಯ ಬೇರೆ. ಈಗ ನೀನೆನ್ನುವುದೇನು?

ಎನ್ನಯ ಹರಿಬಕೆ ನೀನು। ನಿಲೆ-ನಿನ್ನನು ಕೊಲುವೆನು ನಾನು॥
ಮುನ್ನನೀನಾರೆಂಬುದನು। ಪೇ-ಳೆನ್ನೊಳು ಸಂಶಯವೇನು ॥೩॥

ಮೋ– ಇಲ್ಲಿಗೆ ಬಂದವರಾರೂ ನನ್ನೊಡನೆ ಗೆದ್ದುಹೋದವರೇ ಇಲ್ಲ. ನಿನ್ನನ್ನು ವಿಚಾರಿಸಿಕೊಳ್ಳುವುದು ಅಗತ್ಯವಿದೆ. ನೀನಾರು? ಇಷ್ಟು ಹೆಂಗಳೆಯ

ರೊಂದಿಗೆ ಹೊರಟಿರುವೆಯೋಕೆ? ಈ ದಾರಿಯಲ್ಲಿ ಬಂದದ್ದೇಕೆ? ನನ್ನ ತಂಗಿಯನ್ನು ಕೊಂದದ್ದೇಕೆ? ಒಂದೂ ಬಿಡದೆ ಹೇಳು.

ಕೃ– ನಿನ್ನ ತಂಗಿಗೆ ಹೇಳಿ ಕಳಿಸಿದೆ. ನೀನೂ ಒಮ್ಮೆ ಕೇಳು.

ರಾಗ- ಪಂಚಾಗತಿ, ತಾಳ- ಮಟ್ಟೆ

ಎಲವೊ ದನುಜ ಕೇಳೊ ನೀನು। ಸಲುಗೆಯಿಂದ ಪ್ರಾಣವನ್ನು
ಕಳೆಯಬೇಡ ಹೋಗು ನಿನ್ನ ನಿಳೆಯಕೀಗಳೆ॥
ಖಳವಿರೋಧಿಯೆಂಬರೆನಗೆ। ಹಲವು ಮಾತನಾಡಿ ಬರಿದೆ।
ಫಲವಿದೇನು ಪೊಗದಿರಲು ಕೊಲುವೆನೆಂದನು ॥೧॥

ಕೃ– ದಾರಿಗಡ್ಡವಾಗಿ ನಿಂತ ರಕ್ಕಸನೇ ಕೇಳು. ತಿಳುವಳಿಕೆಯುಳ್ಳವರಿಲ್ಲ ನನ್ನನ್ನು ರಕ್ಕಸ ಕುಲಾಂತಕನೆನ್ನುವರು. ಸಲುಗೆಯಿಂದ ಹೇಳಿದ ಮಾತನ್ನು ಕೇಳಿ ದಾರಿಯನ್ನು ಬಿಟ್ಟು ಜೀವವುಳಿಸಿಕೊಳ್ಳು. ಬೊಬ್ಬೆ ಹೊಡೆಯಬೇಡ. ಬಿಚ್ಚಿದ ಬಾಯಿ ಮುಚ್ಚಿಕೊಂಡು ಸುಮ್ಮನೆ ಹೋದರೆ ಬದುಕುವೆ. ಸುಮ್ಮನೆ ಚಕ್ರಾಯುಧಕ್ಕೆ ಆಹುತಿಯಾಗಬೇಡ.

ಮೋ– ಓಹೋ! ನೀನೋ ಅವನು? ನಿನ್ನ ಈ ಕಥೆ ಆ ಹೆಂಗಳೆಯರಿಗೆ ಚೆಂದವಾದೀತು. ಸಾಕುಮಾಡು.

ಎಂದ ಮಾತ ಕೇಳಿ ದೈತ್ಯ। ನೆಂದಲಕ್ಷ್ಮೀರಮಣನೊಡನೆ।
ಮುಂದುವರಿದರೀಗ ನಿನ್ನ । ಕೊಂದು ಕಳೆವೆನು॥
ಹಿಂದೆ ರಾಕ್ಷಸರನು ನೀನು। ಕೊಂದೆನೆಂಬ ಗರ್ವವೆನ್ನೊ।
ಳಿಂದು ನಡೆಯದಾಹವಕ್ಕೆ ನಿಂದು ನೋಡೆಲಾ ॥೨॥

ಮೋ– ನೀನಾರೆಂದು ವಿಚಾರಿಸಿದರೆ ಏನೇನೋ ಹೇಳುವೆಯಾ? ನನಗೆ ಬಾಯಿಮುಚ್ಚಲು ಹೇಳುವೆಯಾ? ಪಾಪಿಯೆ! ನನ್ನ ಶಕ್ತಿ ಎಷ್ಟೆಂಬುದನ್ನರಿಯದೆ ವೃಥಾ ಕೆಡುವಿಯಲ್ಲ! ಯಾರೋ ದೊಡ್ಡವರ ಹೆಸರು ಹೇಳಿಕೊಂಡು ನನ್ನನ್ನು ವಂಚಿಸುವಿಯಾ? ನರಪಶುವೇ! ಇಲ್ಲಿಗೆ ಅಕ್ರಮವಾಗಿ ಬಂದುದಲ್ಲದೆ ನನ್ನ ತಂಗಿಯ ವಧೆಮಾಡಿದ್ದಿ. ಅಲ್ಲದೆ ನನಗೇ ಆಜ್ಞೆ ಮಾಡುವಷ್ಟು ಗರ್ವ ಬಂತೇ ನಿನಗೆ? ಒಂದಡಿ ಮುಂದಿಟ್ಟರೆ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ.

ಕೃ– ಖೂಳನೇ! ತಂಗಿಯ ಸಾವಿನಿಂದಲೂ ತಿಳಿಯಲಾರೆಯಾ?

ಖೂಳ ನಿನ್ನ ಜಯಿಸಲಿಂದು। ಮೌಳಿ ಕೃಪೆಯಾದಂತಿರುವುದೊ।
ಕಾಳಗದೊಳು ನೋಳ್ಪೆನೀಗ। ಲಾಳುತನವನು॥
ತಾಳು ತಾಳು ನಿಮಿಷದೊಳಗೆ ಬೀಳಗೆಡೆವೆನೆನುತಲಸ್ತ್ರ।
ಜಾಲವನ್ನು ಸುರಿದನಾಗ। ಪೇಳಲೇನದ ॥೩॥

ಕೃ– ಎಲಾ ಧೂರ್ತನೇ! ಅವಿಚಾರದಿಂದ ಗರ್ವ ಪಡಬೇಡ. ಮಹಾದೇವನ ಅನುಗ್ರಹದಿಂದ ನಿಮಿಷದಲ್ಲಿ ಯಮನಲ್ಲಿಗೆ ಕಳುಹಿಸುತ್ತೇನೆ. ಇಗೊ! ಈ ಅಸ್ತ್ರವನ್ನು ತಡೆಯುವ ಶಕ್ತಿಯಿದೆಯೋ ನೋಡುವಾ.

ಬಳಿಕ ಹರಿಯು ಮನದೊಳಾಗ। ತಿಳಿದನಿವನ ಬೇಗ ರಣದಿ।
ಕೊಲುವೆನೆನುತ ಚಕ್ರವನ್ನು। ಸೆಳೆದು ಬಿಸುಟನು॥
ತಳುವದಾಗ ಕಿಡಿಯನುಗುಳಿ। ಖಳನ ಶಿರವನರಿದು ತಿರುಗಿ।
ನಳಿನನಾಭನೊಡನೆ ಬಂದು ನೆಲೆಸಿತಾಗಲೆ ॥೪॥

ಕೃ– ಪ್ರಪಂಚಜ್ಞಾನವರಿಯದೆ ಈ ಕಾಡಿನಲ್ಲಿ ಗರ್ವದಿಂದ ಮೆರೆದಾಡಿಕೊಂಡಿದ್ದ ಈ ರಕ್ಕಸನಲ್ಲಿ ನೀತಿಯಮಾತುಗಳಿಂದ ಪ್ರಯೋಜನವಾಗಲಿಕ್ಕಿಲ್ಲ. ಯುದ್ಧದಿಂದ ಅವನ ಗರ್ವ ಮುರಿಯುವಾ ಎಂದರೆ ಸಮಯವಿಲ್ಲ. ಚಕ್ರವನ್ನೆತ್ತಿ ಬಿಟ್ಟಿದ್ದೇತಡ. ರಕ್ಕಸನನ್ನು ಕತ್ತರಿಸಿಬಂದಂತಾಯಿತು. ರಗಳೆ ತೀರಿತು.

ಭಾಮಿನಿ॥

ಧರೆಯಧಿಪ ಕೇಳಿಂತು। ಸಮರದಿ। ಹರಿಯು ಮೇಘಾಸುರನ
ಕೆಡಹಲು। ಸುರರು ಕಾಣುತ ಪುಷ್ಪವೃಷ್ಟಿಯ। ಕರೆಯಲಾಕ್ಷಣಕೆ॥
ಪರಿಪರಿಯವಿಭವದೊಳು ದಿಬ್ಬಣ। ಮೆರಸಿಕಮಲಾವತಿಗೆ ಬರ
ಲದ। ನರಿತು ಚರರಯ್ತಂದು ಬಿನ್ನವಿಸಿದರು ಭೂಪತಿಗೆ ॥ ೧ ॥

ಕೃಷ್ಣ– ರಾಕ್ಷಸ-ರಾಕ್ಷಸಿಯರಿಬ್ಬರೂ ಚಕ್ರಾಯುಧದಿಂದ ಸಂಹರಿಸಲ್ಪಟ್ಟರು. ದೇವತೆಗಳು ಸಂತೋಷಪಟ್ಟರೆಂಬಂತೆ ಆಕಾಶದಿಂದ ಹೂಮಳೆ ಸುರಿಯಿತು. ಗರುಡಾ! ನಮ್ಮ ದಿಬ್ಬಣವು ಕಮಲಾವತಿಪುರಕ್ಕೆ ಮುಟ್ಟುವಂತೆ ಶೀಘ್ರವಾಗಿ ನಡೆ.

ಕಮಲ ಭೂಪ– ನಮ್ಮ ನಮ್ಮ ಆಮಂತ್ರಣದಂತೆ ಸುತ್ತ ಮುತ್ತಲಿನ ರಾಜರು ನೆರೆದಿರುತ್ತಾರೆ. ಬ್ರಾಹ್ಮಣರು ತಂಡ ತಂಡವಾಗಿ ಕುಳಿತಿದ್ದಾರೆ. ಶ್ರೀ ಕೃಷ್ಣನ ದಿಬ್ಬಣದವರು ಇದೇನು? ಅಮರಾವತಿಯೋ ಎಂಬ ಭ್ರಾಂತಿ

ಪಡುವಂತೆ ಕಮಲಾವತಿ ಪಟ್ಟಣವು ಶೃಂಗರಿಸಲ್ಪಟ್ಟಿದೆ. ವಿವಾಹಮುಹೂರ್ತಕ್ಕೆ ಹೆಚ್ಚು ಸಮಯವಿಲ್ಲ. ದಿಬ್ಬಣವು ತ್ವರೆಯಾಗಿಯೇ ಬರುವ ಕಾರಣ ರಾಜಾಸನದಲ್ಲಿ ಕುಳಿತುಕೊಳ್ಳುತ್ತೇನೆ.

ಚಾರಕರು- ಪ್ರಭುಗಳಿಗೆ ವಂದನೆ, ಲಾಲಿಸಬೇಕು.

ರಾಗ— ದೇಶಿ। ತಾಳ— ಅಷ್ಟ

ಲಾಲಿಸೈ ಕಮಲಾವತಿ ದೊರೆಯೆ ನೀ । ಜಾಲವಲ್ಲಿದು ಕೇಳು
ಸದ್ಗುಣ ಮಾಲನೆ ಪರಿತೋಷದಿ ॥ ೧ ॥ ದ್ವಾರಕೆಯಿಂದಲಿ ದಿಬ್ಬಣ
ಸಹಿತಲೆ। ಮಾರಪಿತನೆಯ್ತಂದ ತನ್ನ ಕುಮಾರಸ್ಮರನ ವಿವಾಹಕೆ ॥ ೨ ॥

ಚಾ.- ಮಹಾರಾಜನೆ! ಕೈ ಮುಗಿದು ಬಿನ್ನವಿಸಿಕೊಳ್ಳುತ್ತೇವೆ. ಲಕ್ಷ್ಯ ಕೊಟ್ಟು ಸಂತೋಷದಿಂದ ಕೇಳಬೇಕು. ಸಮಯವು ಹೆಚ್ಚಿಲ್ಲದಿದ್ದರೂ ನಾವು ವಿಸ್ತರಿಸುವ ವಾರ್ತೆಯಲ್ಲಿ ಕಪಟವಿಲ್ಲ, ರಾಯರೇ! ತಾವು ನಿಶ್ಚಯಿಸಿದ ರತಿ ವಿವಾಹದ ಕುರಿತು ಉತ್ಸಾಹಿತರಾಗಿರಿ. ದಿಬ್ಬಣವು ಬಂದೇ ಬಿಟ್ಟಿತು. ಶ್ರೀ ಕೃಷ್ಣನು ದ್ವಾರಾವತಿಯಿಂದ ಮದುಮಗನನ್ನು ಕೂಡಿಕೊಂಡು ಗರುಡನ ಮೇಲೆ ಕುಳಿತು ಇಲ್ಲಿಗೆ ಬರುತ್ತಿದ್ದಾನೆ. ಆ ಸಂಭ್ರಮವನ್ನು ಏನೆಂದು ಹೇಳಲಿ.

ನಾರಿ ದ್ರೌಪದಿ ದ್ರುಪದ ರಾಯನ ಸುತೆ। ಮಾರಿ ಶೃಂಗಾರಿ
ಬಂದಿಹಳಿಲ್ಲಿಗೆ॥ ಮನ್ನಿಸೈ ದಿಬ್ಬಣಿಗರ ನೆಲ್ಲರ। ಸನ್ಮನದೊಳಿದಿ
ರ್ಗೊಂಡು ಕರತಂದಿನ್ನು ಕಾರ್ಯವ ಮಾಳ್ಪುದು ॥ ೪ ॥

ಚಾ.- ಶ್ರೀ ಕೃಷ್ಣ ದೇವರ ದಿಬ್ಬಣವೆಂದ ಮೇಲೆ ಎಲ್ಲವೂ ಆಶ್ಚರ್ಯ! ಸ್ತ್ರೀಯರ ಶೃಂಗಾರವಂತೂ ಹೇಳಿ ತೀರದು. ಎಲ್ಲಕ್ಕೂ ಮುಂದೆ ದ್ರುಪದ ರಾಯನ ಪುತ್ರಿ ಪಾಂಚಾಲೆಯು ದಾರಿ ತೋರಿಸುತ್ತಾ ವಯ್ಯಾರದಿಂದ ಬರುತ್ತಿದ್ದಾಳೆ. ಅರಸರೇ! ಏಳಿರಿ. ದಿಬ್ಬಣವನ್ನು ಮರ್ಯಾದೆಯಿಂದ ಕರತರುವುದಕ್ಕೆ ತಡಮಾಡಬಾರದು.

ಕ. ಭೂ. ಚಾರಕರೆ! ಸಂತೋಷ. ಯಾವ ಉಡುಗೊರೆ ಕೊಡಲಿ?

ಎಂದ ಮಾತನು ಕೇಳುತ್ತ ಭೂಪನು। ಚಂದದಿಂ
ತನ್ನಾಪ್ತಜನಸಹ। ಬಂದನಿದಿರ್ಗೊಳಲೆನುತಲೆ ॥ ೫ ॥

ಕ. ಭೂ

~~ಕೃಷ್ಣ- ರುಕ್ಮಿಣಿ!~~ ಚಾರಕರ ಮಾತು ಕೇಳಿದೆಯಷ್ಟೆ! ಸ್ತ್ರೀ ಜನರನ್ನು ಇದಿರ್ಗೊಳ್ಳುವುದಕ್ಕೆ ಸಿದ್ಧಳಾಗು. ದಿಬ್ಬಣವನ್ನು ಸ್ವಾಗತಿಸುವುದಕ್ಕೆ ನಾನೂ ಹೊರಟೆ. ಬಂಧು ಬಾಂಧವರೇ ಆದಿಯಾಗಿ ಸಮಸ್ತರೂ ಮುಂದೆಬರಲಿ.

ರಾಗ- ಸೌರಾಷ್ಟ್ರ। ತಾಳ- ತ್ರಿವುಡೆ.

ಕಲಶ ಕನ್ನಡಿ ಮುತ್ತಿನಾರತಿ। ತಳಿರು ತೋರಣದಿಂದ
ಭೂಮಿಪ। ಲಲನೆಯರನೊಡಗೊಂಡು ಪೊರಟನು।
ನಲವಿನಿಂದ ॥ ೧ ॥ ಹೊಡೆಸಿದನು ವರಭೇರಿದುಂದುಭಿ।
ಯೊಡನೆ ನಾನಾಪರಿಯ ವಿಭವದಿ। ಸಡಗರದೊಳಯ್ತಂದ
ನಾಕ್ಷಣ। ದೃಢತರದೊಳು ॥ ೨ ॥

ಕ. ಭೂ

~~ಕೃಷ್ಣ~~- ನಾರಿಯರ ಸಮುದಾಯವು ಹೊರಟು ಬಂತು. ಇನ್ನೇನು ಕಲಶ, ಕನ್ನಡಿ, ಆರತಿಗಳನ್ನು ಹಿಡಿದುಕೊಳ್ಳಲಿ. ಮಂತ್ರ ಘೋಷಗಳೊಡನೆ ಬ್ರಾಹ್ಮಣ ಸಮೂಹ ಹೊರಟು ಬರಲಿ. ಸರ್ವರೂ ಕೂಡಿ ತಳಿರು ತೋರಣಗಳಿಂದ ಶೃಂಗಾರವಾದ ರಾಜಬೀದಿಯಲ್ಲಿ ವರನಕಡೆಯವರನ್ನು ಈಗಲೆ ಸ್ವಾಗತಿಸುವ. ಎಲ್ಲಿ ವಾದ್ಯಗಳು? ಕೊಂಬು, ಕಹಳೆ, ಭೇರಿ ಮೊದಲಾದ ವಾದ್ಯಗಳು ಮೊಳಗುತ್ತಾ ಮುಂದಾಗಿ ಸಾಗುವುದಲ್ಲವೇ?.

ಭಾಮಿನಿ ॥

ಧರಣಿಪತಿ ಕೇಳಿಂತು ಕಮಲೇ। ಶ್ವರನು ದಿಬ್ಬಣಿಗರನು ಮನ್ನಿಸಿ।
ಭರದಿ ಕರವಿಡಿದೊಳಗೆ ಕರೆತಂದಾಗ ಸಭೆಯೊಳಗೆ॥ ತರತರದಿ
ಕುಳ್ಳಿರಿಸಿ ಬಾಗಿಲ। ಹೊರಗೆ ನಿಲಿಸಿದ ಮೂರು ಕೋಟಿಯ।
ಚರರ ಬಳಿಕಾ ಹರಿಯು ಕುಶಲವ ಕೇಳಿದನು ನೃಪತಿ ॥ ೧ ॥

ಕ ಭೂ.- ಪಕ್ಷಿರಾಜನ ಮೇಲೇರಿ ಬಂದ ಶ್ರೀ ಹರಿಯು ದಿಬ್ಬಣಿಗರನ್ನು ಬರಮಾಡಿ ರಾಜಸಭೆಗೆ ಕರೆತಂದು ಕುಳ್ಳಿರಿಸಿದ್ದಾಯಿತು. ಮದುವೆಯ ಸಮಸ್ತ ಕಾರ್ಯವೂ ನಿರ್ವಿಘ್ನವಾಗಿ ನೆರವೇರಲೆಂದು ಮೂರುಕೋಟಿ ರಾಜಭಟರನ್ನು ನಗರ ರಕ್ಷಣೆಗಾಗಿ ನೇಮಿಸಿದ್ದಾಯಿತು. ಇನ್ನು ದಿಬ್ಬಣಿಗರಾಗಿ ಬಂದ ಮಹಾನುಭಾವರನ್ನೆಲ್ಲ ಕಂಡು ಕುಶಲ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ಕೃಷ್ಣ ಸ್ವಾಮಿಯೇ! ಕೇಳೋಣಾಗಲಿ!

ಸಾಂಗತ್ಯ। ತಾಳ— ರೂಪಕ.

ಬಂದಿರೆ ದ್ವಾರಕೆಯಿಂದ ಶ್ರೀಲಕ್ಷ್ಮೀಶ। ಚಂದವೇ
ಸರ್ವ ಮೋಹರಕೆ॥ ಇಂದು ನೀವಿಲ್ಲಿಗೆಯ್ತಂದುದ
ರಿಂದಲಾ। ನಂದವಾದುದು ಸರ್ವಜನಕೆ ॥ ೧ ॥

ಕ. ಭೂ.– ನಮ್ಮ ಭಾಗ್ಯವೋ ಎಂಬಂತೆ ಲಕ್ಷ್ಮೀಪತಿಯಾದ ತಾವು ಈ ಸಮಾರಂಭಕ್ಕಾಗಿ ಬಂದಿರುತ್ತೀರಿ. ಇದರಿಂದ ಈ ಮಹೋತ್ಸವದಲ್ಲಿ ನೆರೆದ ಸಮಸ್ತ ಮಂದಿಗಳೂ ಸಂತುಷ್ಟರಾದರು. ದೇವಾ? ದ್ವಾರಕೆಯಲ್ಲಿ ಸರ್ವರೂ ಕುಶಲಿಗಳಲ್ಲವೇ? ನಮ್ಮ ಉಪಚಾರಾದಿಗಳಲ್ಲಿ ಲೋಪದೋಷ ಗಳಿದ್ದರೆ ದಯಾಭಾವದಿಂದ ಮನ್ನಿಸುವಿರಾಗಿ ನಂಬಿರುತ್ತೇನೆ.

ಕೃಷ್ಣ– ರಾಜೇಂದ್ರ! ಸರ್ವರೂ ಕ್ಷೇಮಿಗಳೇ! ಸ್ವಲ್ಪ ಹೊತ್ತಿನಲ್ಲಿ ನಾವೂ ನೀವೂ ಸಂಬಂಧಿಕರಾಗುತ್ತೇವೆ. ಆದುದರಿಂದ ನಮ್ಮ ಜೊತೆಯಲ್ಲಿ ಬಂದ ದೇವತೆಗಳನ್ನು ಉಪಚರಿಸುವುದೇ ಮುಖ್ಯವಾದ ವಿಷಯ.

ಹರಿಹರಾದಿಗಳಿಗೆ ಸರಸಿಜಾಸನ ಮುಖ್ಯ। ಸುರನಾಥಾದ್ಯಮರರಿಗೆಲ್ಲ॥
ಪರಿತೋಷದಲಿ ಬಿಡಾರವನಿತ್ತು ಮನ್ನಿಸಿ। ಹರುಷದಿ ದಿಬ್ಬಣಿಗರನು ॥೨॥

ಕ. ಭೂ– ನಮ್ಮ ಪುರಾಕೃತ ಪುಣ್ಯವೆನ್ನಬೇಕು. ಬ್ರಹ್ಮೇಂದ್ರರೂ, ರುದ್ರದೇವರೂ ಸುಪ್ರೀತರಾಗಿ ಇಲ್ಲಿಗೆ ಬಂದಮೇಲೆ ನಾನೇ ಭಾಗ್ಯವಂತನು. ಅವರೆಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಬೇರೆಬೇರೆ ಠಾಣ್ಯಗಳ ವ್ಯವಸ್ಥೆ ಮಾಡಿದೆ. ಅವರೆಲ್ಲರ ಬಗ್ಗೆ ಅತಿಥಿ ಸತ್ಕಾರಕ್ಕಾಗಿ ನಾನೇ ಸಿದ್ಧನಾಗುವುದು ಯೋಗ್ಯವಾಗಿದೆ. ಹಾಲು, ಹಣ್ಣು, ಎಳನೀರುಗಳಿಂದ ದೇವತೆಗಳೆಲ್ಲಾ ತೃಪ್ತರಾದರು. ನಾನೆಷ್ಟು ಪುಣ್ಯಶಾಲಿಯಾದೆ!

ನೀರೆ ನೀ ಕೇಳೆ ದಿಬ್ಬಣದೊಡನಯ್ತಂದ। ನಾರಿಯರನು ಕರತಂದು॥
ಓರಂತೆ ಮನ್ನಿಸಿಪರಿಪರಿಯಿಂದುಪ। ಚಾರವಗೆಯ್ವುದೆಂದೆನಲು ॥೩॥

ಕ. ಭೂ– ಅರ್ಧಾಂಗಿಯೇ! ದಿಬ್ಬಣಿಗರಾಗಿ ಬಂದ ಸ್ತ್ರೀಯರ ವಿಚಾರ ದಲ್ಲಿ ನೀನೇ ಮುಖ್ಯವಾಗಿ ಉಪಚಾರಮಾಡು. ಯೋಗ್ಯವಾದ ಸತ್ಕಾರದಿಂದ ಅವರನ್ನು ತೃಪ್ತಿಪಡಿಸು. ಅರಸಿನ ಕುಂಕುಮವನ್ನಿತ್ತು ಆಶೀರ್ವಾದ ಪಡೆ! ಇಂತಹ ಸುಯೋಗ ಇನ್ನು ನಮ್ಮ ಜೀವನದಲ್ಲಿ ಬರಲಿಕ್ಕಿಲ್ಲ.

ರಾಗ- ಕೇತಾರ ಗೌಳ। ತಾಳ- ಅಷ್ಟ.

ಕಮಲಭೂಪನು ದ್ರೌಪದಿಯ ಬಳಿಗಯ್ತಂದು।
ನಮಿಸಲು ಕಾಣುತ್ತಲಿ॥ ಕಮಲಾಕ್ಷ ದಯೆದೋರಿರನು
ನಿನಗೆನಲು ಭೂ। ರಮಣ ಮತ್ತಿಂತೆಂದನು ॥೧॥

ಕ. ಭೂ– ಅತಿಥಿಸತ್ಕಾರ ನಿರತನಾದ್ದರಿಂದ ಮರೆತೆ. ತಡವಾಯಿತೆಂದು ಬೇಸರಿಸಬೇಡ ದ್ರೌಪದೀ! ನನಗೆ ಇಂತಹ ಸುಯೋಗ ಕಲ್ಪಿಸಿಕೊಟ್ಟ ತಾಯಿ ಯಂತಿದ್ದ ನೀನೇ ಇಲ್ಲಿನ ಕಾರ್ಯಕ್ಕೆ ಕಲಶಪ್ರಾಯಳು. ನಿನ್ನ ಸೇವೆ ನಾನೆಷ್ಟು ಮಾಡಿದರೂ ಕಡಿಮೆಯೆ ಆಗಿದೆ. ನೀನು ಸುಪ್ರಸನ್ನಳಾಗಿ ಇರಬೇಕೆಂದು ಹಿರಿದಾದ ಆಶೆಯಿಂದ ನಮಸ್ಕರಿಸುತ್ತೇನೆ.

ದ್ರೌ– ರಾಜಶ್ರೇಷ್ಠ! ಅನುಗ್ರಹಿಸುವ ಕೃಷ್ಣಪರಮಾತ್ಮನ ನೆಂಟತನ ಗಳಿಸಿದ ನೀನು ಕೃತಾರ್ಥನಾದೆ. ನೆವನಪೂರ್ತಿಗಾಗಿ ಬಂದವಳು ನಾನು.

ರಾಗ- ಸುರುಟಿ। ತಾಳ ಏಕ.

ಲಾಲಿಪುದೆಲೆ ತಾಯೆ। ಸದ್ಗುಣ-ಶೀಲೆ ವಿಮಲಕಾಯೆ।
ಶ್ರೀಲತಾಂಗಿಯು ರಮಣವರಮು ಕೃ। ಪಾಳುದೀನೋದ್ಧರಣ ॥೧॥

ಕ. ಭೂ– ಉತ್ತಮ ಗುಣಗಳುಳ್ಳವಳೂ ದಿವ್ಯ ಶರೀರಳೂ ಆದ ಜಗನ್ಮಾತೆಯೇ! ದೀನರನ್ನು ಎತ್ತಿಹಿಡಿದು, ಎಲ್ಲಾ ಲೋಕಗಳನ್ನೂ ಕೃಪಾದೃಷ್ಟಿಯಿಂದ ಕಾಪಾಡುತ್ತಿರುವ ಶ್ರೀಲೋಲನ ನೆಂಟತನ ಗಳಿಸಿಕೊಟ್ಟು ಉತ್ತಮ ಪದವಿಗೇರಿಸಿದವಳು ನೀನೇ ಅಲ್ಲವೆ?

ನಿನ್ನ ಕೃಪೆಯೊಳೀಗ। ದೊರಕಿದ। ಚಿನ್ಮಯ ತಾ ಬೇಗ।
ಎನ್ನ ದುರುಕ್ತಿಯ ಕ್ಷಮಿಸುವು। ದಿನ್ನೆನುತೆರಗಿದ ॥೨॥

ಕ. ಭೂ– ನಿನ್ನೆ ಹೀನ ನುಡಿಗಳಿಂದ ತೆಗಳಿದರೂ ಕ್ಷಮಿಸಿ ಮನ್ನಿಸಿದ ದಯಾಮಯೆ! ನಾನು ಈ ಉಪಕಾರ ಮರೆಯತಕ್ಕವನಲ್ಲ. ನಿನ್ನ ಆಶೀರ್ವಾದವು ನನ್ನ ತಲೆಯಮೇಲಿರಲೆಂದು ಬೇಡುತ್ತೇನೆ.

ದ್ರೌ– ಅದೇನೂ ತಪ್ಪಲ್ಲ. ಮುಂದಿನ ಮಂಗಲಕಾರ್ಯದತ್ತ ಮನ ಮಾಡು.

ಸಾಂಗತ್ಯ, ತಾಳ- ರೂಪಕ.

ಬಳಿಕ ಭೂಪಾಲನು ಲಲನೆಯರನು ಕರೆ। ದೊಲವಿನಿಂದಲಿ

ಪೇಳ್ದನಾಗ॥ ಚೆಲುವೆ ನಮ್ಮಾಸುತೆಯುಳ ಸಿಂಗರಿಸಿರೆನ।
ಲುಲಿದವರೆಲ್ಲರೊಂದಾಗಿ ॥೧॥

ಕ. ಭೂ- ಮುಹೂರ್ತವು ಸಮೀಪಿಸಿತು. ಪುರೋಹಿತರು ತ್ವರೆಮಾಡು ತಿದ್ದಾರೆ. ಮಂಗಳಾಂಗಿಯರೇ! ನಮ್ಮ ರತಿದೇವಿಯ ಶೃಂಗಾರವಾಯಿತೇ? ಮದುವೆಯ ಮಂಟಪಕ್ಕೆ ಕರೆದುಕೊಂಡು ಬನ್ನಿರಿ.

ಭೇರಿನಗಾರಿ ದುಂಧುಭಿವಾದ್ಯರವದಿಂದ। ಭೂರಿವೈಭವದೊಳಗಂದು॥
ಧಾರೆಯನೆರೆದುತ್ಸಹದೊಳಿರ್ದರಿಂತೆಂದು। ಭೂರಮಣನಿಗೆಂದ
ಮುನಿಪ ॥೨॥

ಕ. ಭೂ- ನಮ್ಮ ಲಗ್ನ ಮಂಟಪದ ವೈಭವವನ್ನು ಯಾರು ವರ್ಣಿಸು ವರು? ಸ್ತ್ರೀಯರ ಶೋಭಾನೆಯೂ ವೈದಿಕರ ಮಂತ್ರಘೋಷವೂ ಬೇರಿ-ನಗಾರಿ ಮೊದಲಾದ ವಾದ್ಯಗಳ ಮಹಾಧ್ವನಿಯೂ ದಿಕ್ಕುದಿಕ್ಕುಗಳಲ್ಲಿ ಪ್ರತಿಧ್ವನಿಸು ವಂತೆ ಕೇಳುತ್ತಿದೆ. ಮದುಮಗಳೂ ಶೃಂಗಾರವಾಗಿ ಹೂಮಾಲೆ ತೊಡಿಸಲು ಸಿದ್ಧಳಾಗಿರುವಳು. ಕನ್ಯಾದಾನದ ಮಹಾಪುಣ್ಯಕಾರ್ಯಕ್ಕೆ ನಾನೀಗ ಸನ್ನದ್ಧ ನಾಗಿದ್ದೇನೆ.

ಭಾಮಿನಿ

ಅರಸಕೇಳಿಂತಮಿತವಿಭವದಿ। ಹರಿಸುತಗೆನಂದನೆಯನಿತ್ತತಿ।
ಕರುಣದಲಿ ಮನ್ನಿಸಿದ ಸರ್ವರ ಕಮಲಭೂಪಾಲ॥
ಪರಿಪರಿಯ ಧನಕನಕ ವಸನಾ। ದ್ಯುರತರದದಾನಂಗಳಲಿ ಭೂ।
ಸುರ ಕುಲವ ಸಂತುಷ್ಟಿಪಡಿಸುತ್ತಿರ್ದನುತ್ಸಹದಿ ॥೧॥

ಕ.ಭೂ- ಗುರುಹಿರಿಯರ ಆಶೀರ್ವಾದದಿಂದ ರತಿ-ಮನ್ಮಥರ ವಿವಾಹ ವು ನಿಶ್ಚಿತ ಸಮಯದೊಳಗೆ ನಡೆದುಹೋಯಿತು. ಈಸಂದರ್ಭದಲ್ಲಿ ರಾಜಾಧಿ ರಾಜರಾಗಲೀ, ನೆಂಟರಿಷ್ಟರಾಗಲೀ ಅತೃಪ್ತಿ ಪಡದಂತೆ ಸತ್ಕರಿಸಿದ್ದಲ್ಲದೆ ದಾನ ದಕ್ಷಿಣೆಗಳಿಂದ ಬ್ರಾಹ್ಮಣ ವರ್ಗವನ್ನು ಸಂತೋಷಪಡಿಸಿ, ಮಂತ್ರಾಕ್ಷತೆ ಗಳನ್ನು ಪಡೆದೆನು. ಇನ್ನೇನು? ಮದುಮಕ್ಕಳನ್ನು ಬಳುವಳಿಯೊಡನೆ ಕಳುಹಿ ಸಿ ಕೊಟ್ಟು ನಿಶ್ಚಿಂತನಾಗಿ ಬಿಡುತ್ತೇನೆ.

ವಾರ್ಧಿಕ

ಧರಣೀಂದ್ರ ಕೇಳಿತ್ತಪರಿಪರಿಯ ವಿಭವದಲಿ। ಮೆರೆಯುತ್ತಲಿರಲಿತ್ತ

ಮಾದ್ರೇಶ ಸುತನಾಗ। ಧುರಧೀರನೆನಿಪ ಕೌಂಡ್ಲಿಕನೆಂಬ ವೀರತಾ
ನುರುತರದ ಶೌರ್ಯದಿಂದ॥ ಇರುತಿರಲು ಕಮಲಾವತಿಯೊಳಾಹ
ಲಗ್ನಮಂ। ಚರರು ತಿಳಿದಾಗಲಯ್ತಂದು ತಮ್ಮಾಳಿದನ। ಚರಣಕಾನ
ರಾಗಿ ಪೇಳಿದರು ವಿಸ್ತರಿಸಿ ಕಮಲಭೂಪನ ಕಥೆಯನು ॥೧॥

ಕೌಂಡ್ಲಿಕ- ನಮ್ಮ ಮದ್ರ ದೇಶವು ಸಕಲ ವಿಧದಿಂದಲೂ ಸಂಪನ್ನವಾಗಿ ಜಗತ್ತಿನಲ್ಲೊಂದು ಸ್ಥಾನ ಪಡೆದಿದೆ. ಪ್ರಜೆಗಳು ಕೂಡ ಶಕ್ತಿ ಸಾಹಸಗಳಿಂದ ಹೆಸರುಪಡೆದಿದ್ದಾರೆ. ತಮ್ಮ ಜೀವನದಲ್ಲಿ ಸಂಪತ್ತನ್ನೂ ಆನಂದವನ್ನೂ ಅನುಭವಿಸುವುದಲ್ಲದೆ ಬೇರೆ ದೇಶದವರಿಗೂ ಮಾರ್ಗದರ್ಶಕರಾಗಿದ್ದಾರೆ. ಇದಕ್ಕೆ ಯಾರು ಕಾರಣ? ಸಮಸ್ತ ರಾಜಧರ್ಮಗಳನ್ನು ತಿಳಿದ ಕೌಂಡ್ಲಿಕನೇ ಕಾರಣ. ಈ ವಿಚಾರದಿಂದಲೇ ರಾಜಪಟ್ಟವನ್ನು ಏರಿರುತ್ತೇನೆ. ಶಕ್ರಾಗಿದ್ದರೂ ತಲೆಯೆತ್ತದಂತೆ ಮಾಡಿ ಹಿರಿಯರ ಆದರ್ಶತೆಗಳನ್ನು ಮುಂದಿಟ್ಟುಕೊಂಡು ರಾಜ್ಯಭಾರಮಾಡುತಿದ್ದೇನೆ. ಆದರೆ ಪ್ರಜೆಗಳ ಆವಶ್ಯಕತೆಗಳನ್ನು ಪ್ರತಿನಿತ್ಯವೂ ವಿಚಾರಿಸುವುದು ಅಗತ್ಯವಲ್ಲವೇ?. ಅದರಂತೆ ಈದಿನವೂ ವಿಚಾರ ಚಾವಡಿಯನ್ನು ಪ್ರವೇಶಿಸುವೆನು. ಏನು ವಿಶೇಷವಿದೆಯೋ ನೋಡೋಣ.

ಚಾರಕರು- ಮಹಾ ಪ್ರಭೊ। ತಮ್ಮ ಪಾದಕ್ಕೆ ವಂದಿಸುತ್ತೇವೆ.

ರಾಗ— ಮುಖಾರಿ॥ ತಾಳ— ಏಕ

ಲಾಲಿಸಿ ಕೇಳು ದೊರೆ ರಾಯ। ನಾವೆಂಬುದೀಗ। ಜಾಲಮಾತಲ್ಲವಿದು
ಜೀಯಾ ॥ ಪಲ್ಲವಿ ॥ ಉತ್ತಮವಾದ ವಾರ್ತೆಯೊಂದ। ಕೇಳ್ವುದ
ನಿನ್ನೊ । ಳರ್ತಿಯಿಂದೊರೆವೆಸಾಂಗದಿಂದ। ಚಿತ್ತವನಿಟ್ಟದನು ನೀ
ಲಾಲಿಸು। ಬಿತ್ತರಿಸುವೆನ್ವೈಹೊತ್ತುಗಳೆಯದೆ ॥ ೧ ॥

ಚಾ.— ದೊರೆಯೇ! ತಮ್ಮ ಸನ್ನಿಧಾನದಲ್ಲಿ ವಿಶೇಷವಾದ ವಾರ್ತೆಯೊಂದನ್ನು ವಿಜ್ಞಾಪಿಸುತಿದ್ದೇವೆ. ದಯೆಯಿಟ್ಟು ಕೇಳಬೇಕು. ಕೇಳಿದಮೇಲೆ ಸಂಪೂರ್ಣ ಸತ್ಯವೆಂದೇ ತಿಳಿಯುವಿರಿ. ಏಕೆಂದರೆ ಈ ಸುದ್ದಿಯು ಗಾಳಿಮಾತಲ್ಲ. ನಿಜವಾದ ಘಟನೆಯಾಗಿದೆ. ಇದನ್ನು ನೋಡಿದವರೇ ಹೇಳಿದ್ದರಿಂದ ವಿಶ್ವಾಸವಿಟ್ಟು ಅಂಕಿತಮಾಡಿಕೊಳ್ಳುತ್ತೇವೆ.

ಕಮಲಾವತಿಯಪುರದಲ್ಲಿ। ನಡೆದ ವಾರ್ತೆಯು। ಸಮನಾಗಿ ಪೇಳ್ವೆವೈ
ನಾವಿಲ್ಲಿ। ಸುಮಶರನಿಗೆ ತನ್ನಣುಗೆಯನಾಭೂ। ರಮಣನು

ಮದುವೆಯ ಕ್ರಮದಿಂ ರಚಿಸುವ ॥ ೨ ॥

ಚಾ.— ಮಹಾ ಸ್ವಾಮಿ! ದೂರದ ವಿಚಾರವಲ್ಲ. ಕಮಲಾವತಿ ಪಟ್ಟಣದಲ್ಲಿ ನಡೆಯುವ ಸಂಗತಿಯಿದು. ಅಲ್ಲಿ ನಿಮ್ಮ ಮಾವನವರಾದ ಕಮಲ ಭೂಪರಿದ್ದಾರಲ್ಲ. ಅವರು ತಮ್ಮ ಮಗಳನ್ನು ಕೃಷ್ಣನ ಮಗನಾದ ಮನ್ಮಥನಿಗೆ ಮದುವೆ ಮಾಡಿಕೊಡುತ್ತಿದ್ದಾರೆ. ಈ ಸಂಗತಿ ನಿಮಗೂ ತಿಳಿಯದಿರುವುದು ಆಶ್ಚರ್ಯದ ಮೇಲೆ ಆಶ್ಚರ್ಯವಲ್ಲವೇ?

ಕೌಂಡ್ಲಿಕ– ನಮ್ಮ ಮಾವನವರ ವಿಷಯದಲ್ಲಿ ಇನ್ನೂ ಸಂಶಯವಿದೆ.

ಸೋದರಳಿಯ ನೀನಿದ್ದಂತೆ। ಪರರಿಗೆ ಹೆಣ್ಣು— ತಾ ಧಾರೆ
ಯೆರೆದು ಕೊಡುವನಂತೆ। ನೀ ದಯಮಾಡೆಂತಾದರು
ಕಾರ್ಯವ। ಸಾಧಿಸದಿರೆ ಮರ್ಯಾದೆ ಮುಂದಿಲ್ಲ ॥ ೩ ॥

ಚಾ.— ಒಡೆಯರೇ! ಏನಿದು ವಿಚಿತ್ರ? ತಮಗೇನು ಮಾವನವರಲ್ಲಿ ವೈಷಮ್ಯವಿದೆಯೇ? ಸಮರ್ಥನಾದ ಸೋದರಳಿಯನಿರುವಾಗ ಬೇರೊಬ್ಬರ ಮಗನಿಗೆ ಮದುವೆ ಮಾಡಿಕೊಡುವುದೆಂದರೆ ಬಹಳಾಶ್ಚರ್ಯ. ಪ್ರಭುಗಳೇ ಹೇಗಾದರೂಮಾಡಿ ರತಿ ದೇವಿಯನ್ನು ವಶಮಾಡದಿದ್ದರೆ ತಮ್ಮ ಮರ್ಯಾದೆಯು ಎಂದೂ ಉಳಿಯಲಿಕ್ಕಿಲ್ಲ.

ಭಾಮಿನಿ॥

ಚಾರರಿಂದದು ಕೇಳುತಾಕ್ಷಣ। ಧೀರ ಕೌಂಡ್ಲಿಕ ಭೂಪತಿ
ಯುತಾ। ತೋರ ಮೀಸೆಯ ತಿರುಹಿ ದೂತರ ಮೊಗವ ನೀಕ್ಷಿ
ಸುತ॥ ಭೂರಿಬಲಸಹ ತೆರಳಬೇಹುದು। ಸಾರಸಾವತಿ ನಗರ
ಕೆನುತಲಿ। ಭೂರಮಣನೇಮಿಸುತ ಸಭೆಯೊಳಗೆಂದ ನಸುನಗುತ॥

ಕೌಂ.— ಚಾರಕರೇ! ಏನು ರತಿಗೆ ಮದುವೆಯೇ?. ಇಲ್ಲ ಇಲ್ಲ. ನಾನು ಜೀವಂತನಿರುವಾಗ ಆ ಕಾರ್ಯವು ಹೇಗೆ ನಡೆದೀತು? ಖಂಡಿತ ಬೇರೊಬ್ಬನಿಗೆ ಕೊಡಲು ಎಂದೂ ಬಿಡಲಾರೆ. ಹಾಗೆ ಬಿಟ್ಟರೆ ಇದಕ್ಕಿಂತ ದೊಡ್ಡ ಅಪಮಾನ ಬೇರೆ ಬೇಡ ಈಗಲೆ ಸಮಸ್ತ ಸೇನೆಯು ಪ್ರಯಾಣಕ್ಕೆ ಸಿದ್ಧವಾಗಲಿ. ಈ ಅಭಿಪ್ರಾಯವನ್ನು ಸರ್ವರೂ ತಿಳಿಯುವಂತೆ ರಾಜಾಸ್ಥಾನ ದಲ್ಲಿ ಹೇಳಿಬಿಡುವೆನು. ಸಭಾಸದರೆ– ಇಲ್ಲಿ ನೋಡಿರಿ.

ರಾಗ- ಸೌರಾಷ್ಟ್ರ ತಾಳ- ತ್ರಿವುಡೆ.

ಏನ ಭ್ರಮೆಯಾಯ್ತಯ್ಯ ಮಾವಗೆ। ಸಾನುರಾಗದಿ
ಮತ್ತೆ ರತಿಯನು। ಮೀನಕೇತನಗಿತ್ತ ವ್ಯರ್ಥದಿ। ತಾನೆ ಕೆಟ್ಟ ॥೧॥

ಕೌ- ಈ ಸುದ್ದಿಯನ್ನು ಸರ್ವರೂ ಅಗತ್ಯವಾಗಿ ಕೇಳಬೇಕು. ಮಾವನವರು ಮಹಾ ಪ್ರಾಜ್ಞರೆಂದು ನಾವೆಲ್ಲ ಈ ತನಕ ಅಭಿಮಾನ ಪಡುತಿದ್ದೆವು. ಈಗ ನೋಡಿದರೆ ಯಾವ ವ್ಯಕ್ತಿತ್ವವೂ ಅವರಲ್ಲಿಲ್ಲ. ಭ್ರಾಂತಿಯೇ ತುಂಬಿದೆ. ಒಬ್ಬಳೇ ಒಬ್ಬಳಾದ ಮಗಳ ಜೀವನ ಸುಖವನ್ನು ಹಾರೈಸದೇ ಮನ್ಮಥನನ್ನು ಆರಿಸುವ ಮನಸ್ಸು ಮಾಡುತಿದ್ದರೇ? ಛೇ ಛೇ! ರತಿಯ ವಿಚಾರ ಹಾಗಿರಲಿ. ನಮ್ಮ ಮಾವನವರು ಖಂಡಿತ ಕೆಟ್ಟು ಹೋದರು.

ಸೋದರಳಿಯನು ತಾನಿರಲು ಹಗೆ। ಯಾದ ಕೃಷ್ಣನಸುತನಿಗೀಪರಿ।
ಭೇದದಿಂದಲಿ ಕೊಡುವನೆಂಬುದು। ಚೋದಿಗವಿದು ॥ ೨ ॥

ಕೌ— ಎಂತಹ ಹುಚ್ಚು ಕೆಲಸವಿದು? ಸೋದರಳಿಯನೂ ರತಿಗೆ ತಕ್ಕ ವರನೂ ನಾನೇ ಇರುವಾಗ ಆ ಗೊಲ್ಲನ ಮಗನಲ್ಲಿ ಯಾವ ಯೋಗ್ಯತೆಯನ್ನು ಕಂಡರೋ ದೇವರೇ ಬಲ್ಲ. ವಿಚಾರಮಾಡಿ ನೋಡಿದರೆ ಆ ಕೃಷ್ಣನ ಸ್ನೇಹ ಸಂಬಂಧವನ್ನು ಎಂದೂ ಮಾಡಬಾರದಿತ್ತು. ಏಕೆಂದರೆ ಕೃಷ್ಣನು ನಮಗೆ ಬದ್ಧ ದ್ವೇಷಿ. ಆ ಸಂಬಂಧದಿಂದ ಮಾವನವರಲ್ಲಿದ್ದ ಪ್ರೇಮವೂ ತಪ್ಪಿಹೋಯಿತು ಆಗಲಿ, ಇನ್ನೂ ಆಲೋಚನೆಯಿದೆ.

ಪೋಗಿ ಕೇಳುವೆನೊಂದು ಮಾತನು। ನಾಗವೇಣಿಯನೆನಗೆ ಕೊಡದಿರೆ।
ಭೋಗಿ ಭೂಷಣ ತಡೆಯೆ ಬಿಡೆನು ಸ। ರಾಗದಿಂದ ॥ ೩ ॥

ಕೌ— ಸ್ವಲ್ಪವೂ ಸಮಾಧಾನವಿಲ್ಲ. ಕಮಲಾವತಿಯನ್ನು ಸೇರಿ ಮಾವನವರನ್ನು ಕಂಡು ರತಿಯನ್ನು ಮದುವೆಮಾಡಿ ಕೊಡುವಂತೆ ಕೇಳುತ್ತೇನೆ. ಆಗದೆಂಬ ಮಾತು ಬಂದರೆ ಸಾಕು. ಮಾವನೆಂಬ ದಾಕ್ಷಿಣ್ಯವಿಲ್ಲ. ಯುದ್ಧಕ್ಕಿಳಿಯುವುದು ನಿಶ್ಚಯ. ಆ ಸಂದರ್ಭದಲ್ಲಿ ನಾಗಭೂಷಣನಾದ ಪರಮೇಶ್ವರನೇ ಬರಲಿ, ನನ್ನ ಶೌರ್ಯಾಗ್ನಿಯನ್ನು ಕೆರಳಿಸಿ ಬಿಡುತ್ತೇನೆ.

ಹೊಡೆದುದಿಗು ಬಲಿಕೊಡುವೆ ಮಾವನ। ತಡೆಯಲಯ್ತಪ ಭಟರ
ಜಯಿಸುವೆ ನಡೆಯಲ್ಕೆ ದಿಬ್ಬಣವು ಸಹಿತೆ। ಮೊದಲೆ ಬೇಗ ॥ ೪ ॥

ಕೌ— ರತಿಯನ್ನು ಕೊಡದಿದ್ದರೆ ಮಾವನೆಂಬ ಬಂಧುತ್ವವೆಲ್ಲಿ? ಯುದ್ಧದಲ್ಲಿ ಕೆಡಹಾಕಿ ದಿಕ್ಕು ದಿಕ್ಕುಗಳಿಗೆ ಬಲಿಕೊಟ್ಟು ನನ್ನ ಕೈಚಳಕವನ್ನು ತೋರಿಸಿಬಿಡುತ್ತೇನೆ. ಈ ಮಧ್ಯದಲ್ಲಿ ಯಾರೇ ಬರಲಿ ತಡೆದು ನಿಂತರೆ ಸಂಗ್ರಾಮ ಕೊಟ್ಟು ವಿಜಯಲಕ್ಷ್ಮಿಯನ್ನು ಸಂತೋಷಪಡಿಸುವೆನು. ಆದ್ದರಿಂದ ನಮ್ಮ ದಿಬ್ಬಣವು ಸೈನ್ಯ ಸಮೇತವಾಗಿ ತಟ್ಟನೆ ಹೊರಡಲಿ. ಇದೇ ನನ್ನಾಜ್ಞೆ.

ರಾಗ— ಶಂಕರಾಭರಣ॥ ತಾಳ— ಮಟ್ಟೆ.

ಧೀರವಾದ್ರಪತಿಯು ರಥವ। ನೇರಿಖಶಿಯೊಳು॥ ವಾರಿಸಿಧಿಯ
ಘೋಷದಿಂದಲಾರುಭಟೆಯೊಳು॥ ಭೂರಿಬಲವು ಸಹಿತ ನಡೆದ
ನಾಗ ನಲಿವುತ। ನಾರಿಯರ ಸಮೂಹವೆರಸಿ। ಬಂದಕನಲುತ ॥೫॥

ಕೌ— ನನ್ನ ಆಜ್ಞೆ ಆಗುವುದೇ ತಡ, ಸಮಸ್ತ ಸೇನೆಯು ಸಮುದ್ರ ಘೋಷದಂತೆ ಆರ್ಭಟಿಸುತ್ತಾ ಬಂದು ನಿಂತಿದೆ. ದಿಬ್ಬಣ ಹೊರಡುವುದಕ್ಕಾಗಿ ಲೆಕ್ಕವಿಲ್ಲದಷ್ಟು ಸ್ತ್ರೀಸಮೂಹವು ನಲಿಯುತ್ತಾ ಬರುತ್ತಿದೆ. ಈ ಸಂಭ್ರಮವನ್ನು ನೋಡಿದರೆ ನಮ್ಮ ಮಾವನು ರತಿಯನ್ನು ಕೊಟ್ಟು ಬಿಡುವುದು ನಿಶ್ಚಯ; ಇರಲಿ. ಈ ಎಲ್ಲ ಪರಿವಾರದೊಡನೆ ರಥಾರೂಢನಾಗಿ ಕಮಲಾವತಿಪುರಕ್ಕೆ ಬೇಗನೆ ಧಾವಿಸುತ್ತೇನೆ.

ಬಂದು ಮುಸುಕಿ ಕಮಲಾವತಿಯ। ಪುರದದ್ವಾರದಿ॥ ನಿಂದ
ಚರರ ಕಾಣುತಾಗ। ಲಂದು ಕೋಪದಿ ॥ ಎಂದನೇಲವೂ
ನಮ್ಮ ದಿಬ್ಬಣಿಗರ ಬೇಗನೆ। ಮುಂದೆ ಬಿಡೆನು ತಡೆಯೆ
ನಿಮ್ಮ । ನೀರಣಾಗ್ರದಿ ॥ ೨ ॥

ಕೌ— ಕಮಲಾವತಿಯ ಹೊರವಲಯಕ್ಕೆ ಬರುವಾಗಲೆ ಏನು? ಕಾವಲಿಗಾಗಿ ನೇಮಿಸಿದ ಸೈನ್ಯವು ಕೋಟಿ ಸಂಖ್ಯೆಯಲ್ಲಿ ನಮ್ಮ ಮೇಲೆ ಏರಿ ಬರುತ್ತಿದೆ. ಎಲ್ಲರನ್ನು ಹೊಡೆದು ಹಾಕುವೆನು. ಆಹಾ! ಈಗ ಮಾತ್ರ ಒಬ್ಬನೂ ಇಲ್ಲ. ಆಗಲಿ. ಇಷ್ಟೆಲ್ಲ ವ್ಯವಸ್ಥೆಯಿಂದ ಮದುವೆ ನಡೆಸಿದ ನಮ್ಮ ಮಾವನು ಈಗೆಲ್ಲಿರಬಹುದು? ಅದಕ್ಕಾಗಿ ಸಭಾಂಗಣವನ್ನು ಪ್ರವೇಶ ಮಾಡುತ್ತೇನೆ. ಏನು ನಡೆಯುತ್ತದೊ ನೋಡೋಣ.

ಭರದಿಬಂದು ಸಭೆಯ ನಾಗ ಪೊಕ್ಕನಗುಣಲಿ। ಹರಿಯದಿಬ್ಬಣವನು
ಕಂಡು ದೂರದಿಂದಲಿ॥ ಭರಿತ ವಿಭವದಿಂದ ಮಂಟಪದೊಳು

ಕುಳಿತನು। ಕರಿದು ಕಮಲಭೂಪನೊಡನೆ ಪೇಳ್ದನಾತನು ॥೩॥

ಕೌ— ಸಭೆಯನ್ನು ಹೊಕ್ಕಾಯಿತು, ಮನ್ಮಥನ ವಿವಾಹಕ್ಕಾಗಿ ಬಂದ ಯಾದವರನ್ನೂ ಕಂಡಂತಾಯಿತು. ಏನಾಶ್ಚರ್ಯವಿದು? ಸರ್ವರೂ ಗಡ ಗಡ ನಡುಗುತ್ತಾ ಇದ್ದಾರಲ್ಲದೆ ಮಾತನಾಡುವಂತೆ ಕಾಣುವುದಿಲ್ಲ. ಏನೇ ಆಗಲಿ ಉನ್ನತವಾದ ಪೀಠದಲ್ಲಿ ಕುಳಿತು ನಾನೇ ವಿಚಾರಮಾಡುತ್ತೇನೆ. ತಾನಾಗಿ ಕರಿದು ಗೌರವಿಸದ ಮೇಲೆ ಕಮಲ ಭೂಪಾಲನು ಮಾವನಾದರೇನು? ಹಿರಿಯನಾದರೇನು? ಯಾವ ಬಂಧುತ್ವವೂ ನನಗೆ ಕಾಣುವುದಿಲ್ಲ. ಈ ಕ್ರಮವು ಸಭ್ಯ ರೀತಿಗೆ ವಿರುದ್ಧವಾದರೂ ಜಗತ್ತಿಗೆ ಪಾಠವಾಗಲಿ.

ರಾಗ— ಭೈರವಿ। ತಾಳ— ಏಕ.

ಲಾವುದೆಲೆ ಭೂವರನೆ। ಈ- ಖೂಳತನವನಾರೊಡನೆ ॥
ಜಾಲಿಸಿ ಕಲಿತೆಯೊ ನೀನು। ಮನ- ದಾಲೋಚನೆಗಳಿದೇನು ॥೧॥

ಕೌ— ಕಮಲ ಭೂಪನೆ! ನನ್ನ ಮಾತುಗಳನ್ನು ಮನಸ್ಸಿದ್ದರೆ ಲಕ್ಷ್ಯ ಕೊಡು. ಈ ವರೆಗೂ ಇಲ್ಲದ ದುಷ್ಟ ಬುದ್ಧಿಯು ಇಂದೆಲ್ಲಿ ಬಂತು? ನಿನ್ನ ಪರಂಪರೆಯಲ್ಲಿ ಆಗಿ ಹೋದ ಯಾವ ರಾಜನಿಗೂ ಈ ರೀತಿಯ ನೀಚತನವಿರಲಿಕ್ಕಿಲ್ಲ. ಇಂತಹ ಜಾಲವಿದ್ಯೆಗಳನ್ನು ಎಲ್ಲಿಂದ ಕಲಿತೆ? ಯಾರು ಕಲಿಸಿದವರು? ರಾಜನಾದವನು ಹೀಗೂ ನಡೆಯಬಹುದೇ?

ಸೋದರಳಿಯ ತಾನಿರಲು। ಬಿ- ಟ್ಟಾಧರಿಸಿದೆ ನೀಬದಲು ॥
ಮಾಧವನಣುಗಗೆ ರತಿಯ। ನೀ। ಮೋದದೊಳೀವೆಯ ಜೀಯ ॥೧॥

ಕೌ— ಈಗ ನಡೆದಿರುವ ಅನರ್ಥವನ್ನು ಗ್ರಹಿಸಿದರೆ ಆಶ್ಚರ್ಯವಾಗುತ್ತಿದೆ. ನಾನು ನಿನಗೆ ಏನಾಗಬೇಕು? ಸೋದರಳಿಯನಲ್ಲವೇ?. ನನಗೂ ನಿನಗೂ ಇದ್ದ ಸಂಬಂಧವನ್ನು ಹೇಗೆ ಮರೆತುಬಿಟ್ಟೆ? ಸಮರ್ಥನಾದ ನನ್ನನ್ನು ಬಿಟ್ಟು ಇನ್ನೊಬ್ಬರನ್ನು ಆರಿಸುವ ವಿಚಾರ ಮಾಡಬಹುದೇ? ನನಗೆ ಮಡದಿಯಾಗತಕ್ಕ ರತಿಯನ್ನು ಮನ್ಮಥನಿಗೆ ಕೊಟ್ಟು ಮದುವೆ ಮಾಡುವುದೆಂದರೆ ಯಾವ ನೀತಿಯೋ! ಅಂತಹ ಸಾಮರ್ಥ್ಯವು ಹೇಗೆಬಂತು? ಅಹಹಃ ಎಂಥಾ ಅನ್ಯಾಯವಿದು?

ನಡವಳಿಕೆಯ ಪದ್ಧತಿಯ। ನೀ- ಬಿಡಬಹುದೇ ಸನ್ಮತಿಯ ॥
ಪೊಡವಿಪರೆಂಬರೆ ನಿನಗೆ। ಈ- ಕಡು ದ್ರೋಹವ ನೀನೆಸಗೆ ॥ ೨ ॥

ಕೌ- ಹಿರಿಯನಾದ ನಿನಗೆ ಸ್ವಲ್ಪವಾದರೂ ನಡೆ ನುಡಿಯಿರಬೇಕು. ಅದು ಹೋಗಲಿ, ಯಾರೂ ಹೇಳದಿದ್ದರೂ ಕಣ್ಣಿಲ್ಲವೇ ನಿನಗೆ? ಲೋಕಾಚಾರ ಬಿಟ್ಟವನು ಮತಿವಂತನಾಗುವನೇ? ಸೋದರ ಮಾವನ ಮಗಳನ್ನು ನಾನೇ ಕೇಳಬೇಕಾದ ಪರಿಸ್ಥಿತಿಯಾಯಿತು. ಛೀ ಛೆ! ನೀನೊಬ್ಬ ಮಹಾರಾಜ. ಈ ವ್ಯವಹಾರ ನೋಡಿದರೆ ಅರಸನೆಂದು ಯಾರು ಹೇಳುವರು? ನೀನು ಮಾಡಿದ ದ್ರೋಹದಿಂದಾಗಿ ನನ್ನ ಮನಸ್ಸಿನ ಶಾಂತಿಯೇ ಕೆಟ್ಟುಹೋಯಿತು. ಆದರೂ ಇನ್ನು ಮಾಡಬೇಕಾದ ಕೆಲಸವನ್ನು ನಾನೇ ಹೇಳುತ್ತೇನೆ.

ಮಾವನು ನೀನೆಂಬುದಕೆ। ಸದ್ಭಾವದಿ ನಾ ಪೇಳ್ವುದಕೆ ॥
ನೀವೊಲಿದೀಕ್ಷಣಸುತೆಯ। ಎನಗೀವುದುಚಿತವಿದುರಾಯ ॥ ೪ ॥

ಕೌ— ನೀನೂ ಮರೆತರೂ ನಾನು ನಿನ್ನನ್ನು ಮಾವನೆಂಬ ಭಕ್ತಿಯಿಂದ ಕಾಣುತ್ತಿದ್ದೇನೆ. ಹೃದಯದ ಸದ್ಭಾವನೆಯಿಂದ ಹೇಳುತಿದ್ದೇನೆ. ಈಕ್ಷಣವೇ ಮಗಳನ್ನು ಕರೆದು ನನಗೆನೇ ಮದುವೆ ಮಾಡಿಬಿಡು. ಎಲ್ಲವನ್ನೂ ಬಿಟ್ಟು ಗೌರವಿಸುತ್ತೇನೆ. ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಸಮಯವಿಲ್ಲ. ದಿಬ್ಬಣಕ್ಕೆ ದಿಬ್ಬಣವಾಗಿ, ಸೇನೆಗೆ ಸೇನೆಯಾಗಿ ದೊಡ್ಡ ಪರಿವಾರವನ್ನು ತಂದಿದ್ದೇನೆ. ನಿನ್ನ ಕ್ಷೇಮವನ್ನು ನೀನೇ ಚಿಂತಿಸುವೆಯಾದರೆ ಈಗಲೆ ಮದುವೆ ನಡೆಯುವುದು ಯೋಗ್ಯ.

ರಾಗ- ಬಿಲಹರಿ- ತಾಳ- ಏಕ.

ಕಂದ ಕೌಂಡ್ಲಿಕ ನೀನು ಬಂದುದರಿಂದಲಿ। ಚಂದವಾದುದು
ನಮಗಿಂದು ಸರ್ವರಿಗೆ।। ಮಂದಗಮನೆ ರತಿಕಂದರ್ಪನರಸಿ
ಹೀ। ಗೆಂದು ಪೇಳುವರಿನ್ನು ಸಂದೇಹ ವಿರದೆ ॥ ೧ ॥

ಕ. ಭೂ.– ಮಗು ಕೌಂಡ್ಲಿಕ! ಚೆನ್ನಾಯಿತು, ಈ ಶುಭ ಸಂದರ್ಭದಲ್ಲಿ ನೀನೂ ಬಂದು ಸೇರಿದ್ದರಿಂದ ಬಹಳ ಸಂತೋಷವಾಯಿತು. ಆದರೆ ಕೋಪೋದ್ರೇಕವಾಗಿ ನೀನು ಹೇಳುವ ಮಾತನ್ನು ಕೇಳಿ ಆಲೋಚಿಸುವಾಗ ತುಂಬಾ ದುಃಖವಾಗುತ್ತದೆ. ಈ ರತಿಯು ಈಗ ನನ್ನ ಅಧಿಕಾರದಲ್ಲಿಲ್ಲ ಮನ್ಮಥನ ಅರಸಿಯಾಗಿದ್ದಾಳೆ. ಇನ್ನು ಮುಂದೆ ಅವಳ ಮೇಲೆ ಆಸೆಪಟ್ಟು ಏನೇನೋ ಹೇಳಿದರೆ ಅಪರಾಧವಾದೀತು. ಇನ್ನೊಬ್ಬರ ಹೆಂಡಿರನ್ನು ನೋಡಿ ಹಾಗೆಲ್ಲಾ ತಿಳಿಯಬಾರದಪ್ಪಾ.

ಮಾವನೀ ಮಗಳಾದ ಸೋದರಳಿಯನಿಗೆ। ದೇವಕಿಯ
ಣಾಗನಸುತನಿಗೆ॥ ಈವುದುಚಿತವಲ್ಲ ಬೇಗದೊಳಾರತಿ।
ದೇವಿಯನೆನಗಿತ್ತು ಕರುಣಿಪುದೆನಗೆ ॥ ೨ ॥

ಕೌ– ಮಾವ! ನಾನು ಸಣ್ಣ ಮಗುವೇನಲ್ಲ. ಇಂತಹ ಉಪದೇಶವನ್ನು ಯಾರಿಗಾದರೂ ಹೇಳು. ನಾನು ಹೇಳುವುದಾದರೆ ನೀವಂತೂ ಭ್ರಾಂತರಾಗಿದ್ದೀರಿ. ಮೊದಲಾಗಿ ಸೋದರಳಿಯ, ಅವಿವಾಹಿತನೂ ಆಗಿದ್ದ ಕೌಂಡ್ಲಿಕನಿರುವಾಗ ಕೃಷ್ಣನ ಮಗನಿಗೆ ಕಣ್ಮುಚ್ಚಿ ಹೆಣ್ಣು ಕೊಟ್ಟಿರಲ್ಲಾ! ಇದಕ್ಕೇನೆನ್ನಬೇಕು. ಆ ಮದುವೆ ಮದುವೆಯೇ ಅಲ್ಲ. ಕೌಂಡ್ಲಿಕ-ರತಿದೇವಿಯರ ವಿವಾಹವೇ ನಿಜವಾದವಿವಾಹ. ಹೀಗೆಂದು ಸರ್ವರೂ ತಿಳಿಯುವಂತೆ ಮದುವೆ ಮಾಡುವುದು ನ್ಯಾಯ.

ಕ. ಭೂ.– ಸ್ವಲ್ಪ ಉದ್ರಿಕ್ತನಾಗಬೇಡ.

ಮೊದಲೇ ನಿನಗೆ ಮನಸಿಹುದೆಂದು ತಿಳಿದರೆ। ಮದನಗೆರತಿಯ ನೀ
ವುದಕೊಪ್ಪೆನಯ್ಯ॥ ಚದುರೆ ದ್ರೌಪದಿಗೆ ಭಾಷೆಯನಿತ್ತ ಕಾರಣ।
ಬದಲು ಮಾತಿಲ್ಲ ನೀನದಕೆತೋಷಿಸುವುದು ॥ ೩ ॥

ಕ. ಭೂ.– ಕೌಂಡ್ಲಿಕ! ವಿಚಾರವಂತನಾಗಿ ಹೀಗೇಕೆ ಹೇಳುವಿ? ರತಿ ಮನ್ಮಥರ ಮದುವೆ ನಡೆದು ಹೋಯಿತು. ಇನ್ನೊಮ್ಮೆ ನಡೆಯುವ ಹಾಗಿಲ್ಲ. ರತಿಯನ್ನು ಮದುವೆಯಾಗಬೇಕೆಬ ಇಚ್ಛೆ ಇರುತಿದ್ದರೆ ಮೊದಲಾಗಿ ತಿಳಿಸಬಹುದಿತ್ತು ದ್ರೌಪದಿಯು ಬಂದಾಗ ತಿರಸ್ಕರಿಸುತಿದ್ದೆ. ಈಗೇನು ಮಾಡಲಿ? ಮದುವೆಯೆಂಬುದು ಋಣಾನುಬಂಧವಲ್ಲವೇ? ದೈವೇಚ್ಛೆಯಂತೆ ನಡೆದ ಕಾರ್ಯಕ್ಕಾಗಿ ಅಸ್ವಸ್ಥನಾಗಬೇಡ.

ಕೌ– ಮಾವ! ಹೀಗಾದುದಕ್ಕೆ ಸಂತೋಷಪಡಬೇಕೆ?

ಎನಗೊಂದು ಮಾತ ಪೇಳವೆ ಪರರಿಗೆ ಭಾಷೆ। ಯನು
ಕೊಡಬಹುದೆ ಮಾವಯ್ಯ ನೀವಿಂದು॥ ಇನಿತು ಚಾಳಿಸಿದರೆ ಬಿಡುವೆ
ನೆ ತರಳೆಯ। ನೆನಗಿತ್ತು ಹರುಷದಿ ಕರುಣಿಪುದಯ್ಯ ॥ ೪ ॥

ಕೌ– ಮಗಳನ್ನು ಮದುವೆಮಾಡಿಕೊಡಬೇಕೆಂದು ಯಾರು ತಿಳಿಸಬೇಕು? ಮಗಳು ಪ್ರಾಯಕ್ಕೆ ಬಂದಾಗ ವಿದ್ಯಾ ಬುದ್ಧಿಗಳಿಂದ ಪ್ರಸಿದ್ಧನಾದ ಸೋದರಳಿಯನನ್ನು ಮರತೇ ಹೋಯಿತೇ! ಅದಿರಲಿ. ದ್ರೌಪದಿಗೆ ಭಾಷೆ

ಕೊಡುವಾಗಲಾದರೂ ಒಂದು ಮಾತನ್ನು ನನ್ನಲ್ಲೂ ಕೇಳಬಹುದಿತ್ತು. ಅವಿಚಾರದಿಂದ ಮಾತು ಕೊಟ್ಟು ಕಾರ್ಯವಾಯಿತೆಂದು ಹಾಸ್ಯ ಮಾಡಿದರೆ ನಾನೇನೂ ಬಿಡುವಂತಿಲ್ಲ. ಸಂತೋಷದಿಂದ ರತಿಯನ್ನು ಮದುವೆ ಮಾಡಿಸಿದರಾಯಿತು. ಜಾಗ್ರತೆ ಯಿರಲಿ!

ಕ. ಭೂ.– ಎಷ್ಟು ಹೇಳಿದರೂ ನಿನಗೇಕೆ ಅರ್ಥವಾಗುವುದಿಲ್ಲ?

ನೀಮುನ್ನ ಬಾರದೆ ಸುಮ್ಮನೆ ಬಂದೀಗ! ಕಾಮಿನಿಮಣಿಯನ್ನು
ನನಗೀವುದೆನುತ॥ ಈ ಮಹೋತ್ಸವಕೆ ವಿಘ್ನವನೆಸಗಲು ಪರಿ।
ಣಾಮವೆಂತಹುದೋ ನೀ ತಿಳಿದು ನೋಡಿದನು ॥ ೫ ॥

ಕ. ಭೂ – ಆ ಮಾತು ಬೇಡ. ರತಿಯನ್ನು ಮದುವೆಯಾಗಬೇಕೆಂದು ಮನಸ್ಸು ಮೊದಲೇ ಇದ್ದರೆ ಈ ವರೆಗೂ ಏಕೆ ಬರಲಿಲ್ಲ? ಸುಮ್ಮನೆ ಇದ್ದು ಕೊಂಡು ಈಗೇಕೆ ತರ್ಕ ಮಾಡುತ್ತೀಯಾ? ಪ್ರಾಯಕ್ಕೆ ಬಂದ ಹೆಣ್ಣನ್ನು ಮನೆಯಲ್ಲಿಟ್ಟುಕೊಳ್ಳುವುದು ಕಷ್ಟದ ಮಾತು. ಏನೋ ವಿಧಿನಿಯಮದಂತೆ ಇಷ್ಟೆಲ್ಲಾ ನಡೆದ ಮೇಲೆ ಆ ಹೆಣ್ಣು ನನಗೆ ಸಲಬೇಕೆನ್ನುವುದು ಯಾವ ಸಭ್ಯತೆಯೋ? ಮದುವೆಯಂತಹ ಮಂಗಲ ಕಾರ್ಯಕ್ಕೆ ವಿಘ್ನಮಾಡುವುದು ಯಾವ ಘನತೆಯೋ ತಿಳಿಯದು. ಕೌಂಡ್ಲಿಕ! ಸುಮ್ಮನಿರು. ಇನ್ನೂ ತರ್ಕ ಮಾಡಿದರೆ ಯಾವ ಪರಿಣಾಮವಾದೀತೆಂದು ಈಗ ಹೇಳಲಾರೆ.

ಕೌ– ಪರಿಣಾಮವೇನೇ ಇರಲಿ. ಆ ಮಾತು ಈಗೇತಕ್ಕೆ?

ಸಂತಸದಿಂದ ನಿನ್ನಣುಗೆಯನೆನಗೆನಿ। ಶ್ಚಿಂತೆಯೊಳ್ ಮದುವೆಯ
ನೆಸಗದೆಬರಿದೆ॥ ಅಂತೆ ಕಾರಣಗಳಿಂದೆನಗೊಡಬಡಿಸಿದ।
ರೆಂತು ಸೈರಿಪೆನು ಸ್ವತಂತ್ರವಲ್ಲಿನ್ನು ॥ ೬ ॥

ಕೌ– ಮಾವ! ನಾನು ಯಾವಾಗ ಬಂದರೇನು? ರತಿಯು ನನ್ನವಳೇ ಇರುವಾಗ ವಿವಾಹವಾಗುವ ಅಧಿಕಾರವು ಬೇರಾರಿಗೂ ಇಲ್ಲ. ಬೇಗನೆ ರತಿಯನ್ನು ನನ್ನ ವಶಕ್ಕೆ ಕೊಟ್ಟು ನಿಶ್ಚಿಂತರಾಗಿರುವುದು ಒಳ್ಳೇದು. ಅಲ್ಲದೆ ನನ್ನ ಇಷ್ಟಕ್ಕೆ ವಿರೋಧವಾಗಿ ನಡೆದರೆ ಖಂಡಿತ ಸಹಿಸಲಾರೆನು. ಯಾವ ಕಾರಣಗಳೂ ನನಗೆ ಬೇಡ. ನಾನು ಬರುವ ಮೊದಲು ಇಲ್ಲಿ ನಡೆದದ್ದಾಯಿತು. ಇನ್ನು ಮೇಲಣ ಸ್ವಾತಂತ್ರ್ಯವು ನಿಮಗಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೂ ಯೋಚನೆಯುಂಟೇ

ರಾಗ- ಕೇತಾರ ಗೌಳ। ಅಪ್ಪ ತಾಳ.

ಎಷ್ಟು ಪೇಳಿದರೇನು ಕೊಟ್ಟ ಭಾಷೆಯ ತಪ್ಪಿ। ಹುಟ್ಟಿದಾ
ತ್ಮಜೆಯನೀಗ॥ ಕೊಟ್ಟರೆ ತನಗಪಕೀರ್ತಿಯು ಬಪ್ಪುದು।
ತಟ್ಟನೆ ನಡೆಯೆಂದನು ॥ ೧ ॥

ಕ. ಭೂ- ಮಾದ್ರೇಶನೇ! ಎಷ್ಟೇ ಹೇಳು, ಎಂದಿಗೂ ಕೊಟ್ಟ ಭಾಷೆಯನ್ನು ಮೀರಿ ಲೋಕಾಪವಾದಕ್ಕೆ ಗುರಿಯಾಗುವವನಲ್ಲ. ಒಮ್ಮೆ ಧಾರೆಯೆರೆದು ಕೊಟ್ಟಮೇಲೆ ಬೇರೊಬ್ಬರಿಗೆ ಮದುವೆ ಮಾಡುವುದೆಂದರೇನು?. ಇಂತಹ ಅನ್ಯಾಯಕ್ಕಿಂತ ಸಾಯುವುದೇ ಲೇಸು. ಅಪಕೀರ್ತಿಯನ್ನು ಹೊತ್ತುಕೊಂಡು ಜೀವಿಸುವುದೇಕೆ? ಸುಮ್ಮನೆ ಜಗಳಮಾಡದೆ ಬಂದ ಹಾಗೆ ಹೋಗು.

ಕೌ- ಆಡಿದಂತೆ ನಡೆಯತಕ್ಕವನು ನೀನು ಮಾತ್ರವೇ?.

ಭ್ರಷ್ಟ ಮಾತಾಡದಿರೀಗ ನಿನ್ನಣುಗೆಯ। ಜಿಷ್ಣೀಗ ಪೋದರಾನು॥
ಸೃಷ್ಟಿಪಾಲಕರಪಹಾಸ್ಯ ಮಾಳ್ಪರು ಮನ। ದಿಷ್ಟವ ಕರುಣಿಪುದು॥೨॥

ಕೌ- ಆತ್ಮ ಗೌರವವು ನನಗೂ ಇದೆ. ಮಾವನಮಗಳನ್ನು ತರುತ್ತೇನೆಂದು ರಾಜ ಸಭೆಯಲ್ಲಿ ಘೋಷಿಸಿ ಬಂದಿರುವಾಗ ಅದರಂತೆ ನಡೆಯದಿದ್ದರೆ ನನಗೂ ಅಪಕೀರ್ತಿಯಿದೆ. ಇದನ್ನು ಕೇಳಿದವರು ಅಪಹಾಸ್ಯಮಾಡುವಾಗ ನನಗೆಂದರೇನು? ನಿನಗೂ ಅಪಮಾನವಿದೆ. ಇಂತಹ ಸಂದರ್ಭವನ್ನು ಅಪೇಕ್ಷೆ ಮಾಡದೆ ನನ್ನ ಇಷ್ಟಾರ್ಥವನ್ನು ನೆರವೇರಿಸಿ ಕೊಟ್ಟರೆ ನಮ್ಮಿಬ್ಬರಿಗೂ ಶ್ರೇಯಸ್ಸಿದೆ. ವೃಥಾ ಕೆಟ್ಟ ಮಾತುಗಳನ್ನಾಡಿ ಸಮಯ ಕಳೆಯುವುದು ಬೇಡ.

ಬಿಡು ಮನದಾಶೆಯ ಕೊಡುವವನಲ್ಲಿನ್ನ। ಹುಡುಗಿಯ
ನಿನಗೆನಲು॥ ಕಿಡಿಸೂಸುತಲಿ ಧನುವಿಡಿದು ನಿಂದಿರೆ ಕಾಣು।
ತೊಡನೆ ಭೂಮಿಪನೆಂದನು ॥ ೩ ॥

ಕ. ಭೂ.- ಕೌಂಡ್ಲಿಕ! ಸಾರಿ ಹೇಳುತ್ತೇನೆ. ಇನ್ನು ಮುಂದೆ ಏನಾದರೂ ದೊರಕಲಾರದ ವಸ್ತುವನ್ನು ಮನಸ್ಸಿನಲ್ಲಿ ಆಶೆಮಾಡಿ ಹಾಳಾಗಬೇಡ. ನಮ್ಮ ರತಿಯ ವಿಚಾರವನ್ನು ಬಿಟ್ಟು ನೆಟ್ಟಗೆ ಮನೆಗೆ ಹೋಗು.

ಕೌ.- ಮಾವ! ಇನ್ನು ಹೇಳುವುದು ಬೇಡ. ಆದರೆ ನಾನು ಧರಿಸಿ

ರುವ ಬಿಲ್ಬಾಣಗಳಿಗೆ ಮಾತ್ರ ಉತ್ತರ ಕೊಡು ಜಾಗ್ರತೆ.

ರಾಗ– ಶಂಕರಾಭರಣ। ತಾಳ– ಮಟ್ಟೆ.

ಹುಡುಗನೆಂದು ಬಿಟ್ಟರೀಗ। ಪಿಡಿದೆ ಧನುವನು॥ ಹುಡುಗಿಯಾಸೆಬಿಟ್ಟು
ಮನೆಗೆ। ನಡೆಯೊ ಘಮ್ಮನೆ॥ ಬಿಡುವನಲ್ಲದಿರಲು ಶಿರವ।
ಕಡಿವೆನೀಗಲು॥ ಫಡಫಡೆಂದು ಘರ್ಜಿಸಲ್ಕೆ। ನುಡಿದನಾಗಳು ॥೧॥

ಕ. ಭೂ.– ಎಲಾ ಕೌಂಡ್ಲಿಕ! ಹುಡುಗನೆಂದು ಬಿಟ್ಟರೆ ಘರ್ಜಿಸಿ ಮಾತಾಡುತ್ತೀಯಾ? ಕೈಯಲ್ಲಿ ಬಿಲ್‌ಬಾಣಗಳನ್ನು ಹಿಡಿದ ಮಾತ್ರಕ್ಕೆ ಯಾರು ಹೆದರುವರು? ಇದೋ ಹೇಳುತ್ತೇನೆ. ಮದುವೆಯಾಸೆಯನ್ನು ಬಿಟ್ಟು ಹೋದರೆ ಒಳ್ಳೆಯದು, ಇಲ್ಲದಿದ್ದರೆ ನಿನ್ನ ರುಂಡವೇ ಕತ್ತರಿಸಿ ಹೋಯಿತೆಂದು ತಿಳಿದುಕೋ! ಹೂಂ, ಏನೆಂದುಕೊಂಡೆ ನನ್ನನ್ನು?

ಮಂದಮತಿಯಿದೇಕೆ ಮಾವ। ಚಂದವಲ್ಲಿದು॥
ಇಂದು ನಿನ್ನ ಸುತೆಯನಿತ್ತು ಮುಂದೆ ಕಾಯ್ವುದು॥
ಒಂದು ತೃಣವ ಮುರಿದು ಸಾರ್ದೆ। ನೊಂದು ಬಾರಿಗೆ॥
ಎಂದು ಪೇಳಲಾಗ ಭೂಪ। ನೆಂದನಳಿಯಗೆ ॥ ೨ ॥

ಕೌ– ಮಂದ ಬುದ್ಧಿಯು ನಿಮ್ಮ ಪಾಲಿಗೆ ಇರಲಿ. ಅದೇನು ಕ್ಷೇಮವಲ್ಲ. ಇನ್ನಾದರೂ ಕಡ್ಡಿಮುರಿದು ಕೊನೆಯದಾಗಿ ಹೇಳುತ್ತೇನೆ. ಈಕ್ಷಣವೆ ನನ್ನವಳಾದ ರತಿಯನ್ನು ಮದುವೆಮಾಡಿ ಕೊಟ್ಟರಾಯಿತು. ಇಲ್ಲವಾದರೆ ಇದರ ಪರಿಣಾಮವು ಭಯಂಕರವಾದೀತು. ಜಾಗ್ರತೆ!

ಸಲುಗೆಯಿಂದ ನಮ್ಮ ಕೆಣಕಿ। ಬಲುಹ ನೋಳ್ಪೆಯಾ॥
ಲಲನೆಯಾಸೆ ಪಿಡಿದು ಬರಿದೆ। ಕಲಹ ಮಾಳ್ಪೆಯಾ॥
ಮಲೆತು ನಿಂದರೀಗ ನಿನ್ನ। ಕೊಲುವೆನೆನುತಲಿ॥
ಸೆಳೆದು ಬಿಟ್ಟಸಸ್ತ್ರ। ಸಂಕುಲವನಾಗಲೆ ॥ ೩ ॥

ಕ. ಭೂ.– ಹುಡುಗ! ಸಾಕು ಸಾಕು ನಿನ್ನ ಭ್ರಷ್ಟಾಚಾರ. ಎಷ್ಟು ಸಲುಗೆಯೋ! ನಿನ್ನಲ್ಲಿ ಬಲವಿದ್ದರೆ ಅನ್ಯರಲ್ಲಿ ತೋರಿಸುವುದು ಬಿಟ್ಟು ನನ್ನ ಮುಂದೆ ಹೋರಾಡುವುದಕ್ಕೆ ಬಂದೆಯಾ? ಈ ವರ್ತನೆಯು ನಿನ್ನ ಶ್ರೇಯಸ್ಸಿಗೂ ಪ್ರಾಣಕ್ಕೂ ಹಾನಿ. ಹೆಣ್ಣಿಗಾಗಿ ಮಣ್ಣು ಸೇರುವುದೇ ಇಚ್ಛೆಯಾದರೆ ಇದಿರಾಗಿ ಬಾ! ನನ್ನ ಬಾಣಗಳ ರುಚಿಯನ್ನು ಒಮ್ಮೆಯಾದರೂ ನೋಡಿಬಿಡು.

ಬಂದ ಶರವ ನಡುವೆತರಿದು। ಕೌಂಡ್ಲಿಕಾಖ್ಯನು॥ ಮುಂದು
ವರಿವುತಾಗ ವಿಶಿಖದಿಂದಲೆಚ್ಚನು॥ ಬಂದು ನೃಪನಜಠ
ರಕಾಗಲಂದು ಬಡಿಯಲು॥ ಒಂದೇ ಕ್ಷಣದಿ ಮೂರ್ಛೆ
ಯಿಂದ। ಲೊರಗೆ ಧರೆಯೊಳು ॥ ೪ ॥

ಕೌ.— ನಿನ್ನ ಘೋರವಾದ ಅಸ್ತ್ರಗಳೆಲ್ಲವೂ ವ್ಯರ್ಥವಾಗಿವೆ. ಇನೂ ನಿನಗೆ ಪಂಥವೇ? ಹಾಗಿದ್ದರೆ ನಾನು ಬಿಡುವ ಈ ಮಹಾಸ್ತ್ರಕ್ಕೆ ಇದಿರಾಗು ನೋಡುವ.

ಹ ಹ್ಹ ಹಾ! ಉಪದೇಶ ಮಾಡಿದಷ್ಟು ಯುದ್ಧ ಕಾರ್ಯವು ಸುಲಭ ವಲ್ಲವೆಂದು ಕಮಲಭೂಪನಿಗೆ ಈಗ ತಿಳಿದಿರಬೇಕು. ದೊಪ್ಪನೆ ಬಿದ್ದುಬಿಟ್ಟಿ ದ್ದಾನಲ್ಲ. ಇನ್ನಾರು ಸಹಾಯಕ್ಕೆ ಬರುತ್ತಾರೋ ನೋಡುತ್ತೇನೆ.

ರಾಗ— ನಾದನಾಮ ಕ್ರಿಯೆ। ತಾಳ- ಅಷ್ಟ.

ಧರಣೀಶನಂದು ಮೂರ್ಛಿತನಾಗೆ। ಕಂಡು- ಹರಿಯ
ಕುಮಾರಕನನುವಾಗೆ। ದುರುಳನ ಕೊಲ್ಲುವೆನೆನುತಲೆ।
ಬಂದು। ಶರವಿಡಿದುಸುರಿದನಾಗಲೆ ॥ ೧ ॥

ಮನ್ಮಥ- ಅತ್ಯಾಶ್ಚರ್ಯ! ಆಕಾಶದಿಂದ ಎದ್ದು ಬರುವ ಧೂಮಕೇತು ವಿನಂತೆ ಕಾಣುವ ಕೌಂಡ್ಲಿಕನಿಂದ ಎಂತಹ ಉತ್ಪಾತವಾಯಿತು? ಕಮಲಭೂ ಪನ ಸೋಲಿನೊಡನೆ ಸರ್ವರೂ ಚದರಿ ಹೋಗುತಿದ್ದಾರೆ. ಇದನ್ನು ನೋಡಿ ನಾನೇಕೆ ಸುಮ್ಮನಿರಬೇಕು? ಈ ಕ್ಷಣವೇ ಬಿಲ್ಲು ಹಿಡಿದು ಕೌಂಡ್ಲಿಕನನ್ನು ಕೊಂದೇ ಬಿಡುವುದಕ್ಕಾಗಿ ಮುಂದರಿಯುತ್ತೇನೆ- ಎಲಾ ಕೌಂಡ್ಲಿಕಾ!

ಎಲವೊ ಕೌಂಡ್ಲಿಕನೆನೀಗರ್ವದಿ। ಬಂದು। ಛಲವಿಡಿ
ದೆನ್ನೊಳತ್ಯುಗ್ರದಿ॥ ಲಲನೆಗೋಸುಗ ನಿನ್ನ ಪ್ರಾಣವ।
ಕೊಡ। ದುಳುಹಿಕೊಳ್ಳೆನುತೆಚ್ಚಬಾಣವ ॥ ೨ ॥

ಮ.— ಕೌಂಡ್ಲಿಕ! ನಿನ್ನ ಗರ್ವವನ್ನು ಸಾಕುಮಾಡು. ಪ್ರತಿಭಟನೆ ಗಾಗಿ ನಿಂತ ಮನ್ಮಥನನ್ನು ನೋಡಿದೆಯಾ? ಈತನ ಮುಂದೆ ಯಾರ ಪಂಥ ಪೌರುಷಗಳೂ ನಡೆಯಲಾರವು. ಹೆಣ್ಣಿಗಾಗಿ ಪ್ರಾಣ ಕೊಡುವ ಛಲವನ್ನು ಬಿಟ್ಟು ಬಂದಹಾಗೆ ಹೋಗು; ಇಲ್ಲವಾದರೆ ಕಾಳಗಕೊಡು. ನನ್ನ ಬಾಣಗಳು ಇದೋ ನಿನ್ನ ನೆತ್ತರನ್ನು ಹೀರುವುದಕ್ಕಾಗಿ ಬರುತ್ತಿವೆಂಬುದು ತಿಳಿದುಕೋ.

ಧುರಧೀರ ನಹುದೊ ನೀನೆಂಬುದು। ಹಿಂದೆ। ಹರನಕಣ್ಣಿಚ್ಚಿನಿಂದುರಿ
ದುದು। ಅರಿತಿಹೆನೆಂದವನಸ್ತ್ರವ। ಕಡಿ। ದುರುಳಿಚುತೆಚ್ಚನು ಶಸ್ತ್ರವ ॥೩॥

ಕೌ— ಮದನಾ! ನಿನ್ನ ಬಡಿವಾರಗಳನ್ನು ಕಟ್ಟಿಡು. ಯುದ್ಧವೀರ ನೆಂಬುದು ನಿನ್ನ ಚರಿತ್ರೆಯೇ ಹೇಳುತ್ತದೆ. ಹಿಂದೆ ತ್ರಿಶೂಲಿಯ ನೇತ್ರಾಗ್ನಿಯಿಂದ ಉರಿದುಹೋದ ನೀನು ಏನು ಹೇಳಿದರೂ ನಿರರ್ಥಕ. ಅಸಾಧ್ಯವಾದುದನ್ನು ಸಾಧಿಸುವ ಯೋಚನೆಯೇತಕ್ಕೆ? ನೆತ್ತರನ್ನು ಹೀರುವುದಕ್ಕಾಗಿ ಬರುವ ನಿನ್ನ ಬಾಣಗಳು ಎತ್ತಲೋ ಹೋದುವು. ಈಗ ನಾನು ಬಿಡುವ ಬಾಣ ಮಾತ್ರ ಪುಷ್ಪಬಾಣವೋ ಏನೆಂದು ನೋಡು! ಅದೂ ಆಗದಿದ್ದರೆ ಅಲ್ಲೇ ಬಿದ್ದಿರು.

ಇಂತು ಕುಸುಮ ಬಾಣನೊರಗಲು। ಬಲು। ಚಿಂತೆಯಿಂ
ಸುರರೆಲ್ಲ ಮರುಗಲು। ಅಂತರಂಗದಿ ತಿಳುವುತದರನು।
ನರಾರಂತೆ ಶ್ರೀ ಕೃಷ್ಣನಳಲ್ದನು ॥ ೪ ॥

ಕೃ.— ಕೌಂಡ್ಲಿಕನ ಯುದ್ಧದಲ್ಲಿ ಮನ್ಮಥನಿಗಾದ ಸೋಲನ್ನು ಕಂಡು ಸುರಪಾದಿಯಾಗಿ ಸರ್ವರೂ ದುಃಖಿತರಾಗಿದ್ದಾರೆ ಆದರೆ ಈಗಲೇ ನಾನೊಂದು ನಾಟಕ ಮಾಡಬೇಕಾಗಿದೆ. ಎಲ್ಲರಿಗಿಂತ ಮೊದಲೇ ನಾನೇ ಸೋತಂತೆ ಮಾಡಿದರೆ ಬ್ರಹ್ಮಾದಿಗಳೂ ಹಾಗೆ ನಡೆಯುವರು. ಮತ್ತೇನು? ಎಲ್ಲರೂ ಬಿದ್ದಾಗ ಸಂಹಾರರೂಪಿಣಿಯಾದ ಚಂಡಿಕೆಯೇ ಮೈತೋರುತ್ತಾಳೆ. ಇದರಿಂದ ಲೋಕದ ದೈವೀಚೇತನವು ಶಂಕರನಲ್ಲಾಗಲೀ ಇಲ್ಲನೆಂಬುದು ವ್ಯಕ್ತವಾಗುವುದು. ಅದಕ್ಕಾಗಿ ಮನ್ಮಥನನ್ನು ಕಂಡು ಸಾಮಾನ್ಯ ಮನುಷ್ಯನಂತೆ ಅಳಬೇಕಾಗಿದೆ.

ರಾಗ- ನೀಲಾಂಬರಿ, ತಾಳ- ಏಕ

ಏತಕೆ ಮಲಗಿದೆ ರಣದೊಳು। ಮಾತುಗಳಾಡದೆ ಸುಮ್ಮನೆ।
ನೀತಿಯೆ ನಿನಗಿದು ನೋಡಲು। ಪ್ರೀತಿಯೆ ಸರ್ವರಿಗೆ॥
ಪಾತಕಿಯುದರದಿ ನೀಬಂ। ದೇತಕೆ ಜನಿಸಿದೆ ಕಲಹದಿ।
ಘಾತಕಿ ಕೌಂಡ್ಲಿಕನಿಂದೆಮ। ಗೀತೆರನಾಯ್ತು ಕಟಾ ॥೧॥

ಕೃ- ಹಾ ಮಗನೆ! ಪ್ರದ್ಯುಮ್ನ! ಇದೆಂತಹ ಅವಸ್ಥೆ? ಮಾತನಾಡುವ ತ್ರಾಣವೂ ಇಲ್ಲದೆ ರಣಕ್ಷೇತ್ರದಲ್ಲಿ ಮಲಗಿರುವೆಯಲ್ಲಾ! ಹೆತ್ತ ತಾಯಿತಂದೆಯರಲ್ಲಿ ಕೂಡಾ ಪ್ರೀತಿಯಿಲ್ಲವೇ? ಯಾರ ಮಮತೆಗಾಗಿ ಈ ಸ್ಥಿತಿಯನ್ನು

ಹೊಂದಿದೆ? ಅಯ್ಯೋ! ಈ ಘಾತಕಿಯಿಂದ ಜನನಕ್ಕೆ ಬಂದು ಏನು ಫಲವಾಯಿತು? ದುಷ್ಟ ಕೌಂಡ್ಲಿಕನ ಬಾಣದಿಂದಾಗಿ ನೀನೀರೀತಿ ಒರಗಿದರೆ ನನಗಾರು ಧೈರ್ಯ ಕೊಟ್ಟಾರು? ಹಾ ಶಿವನೇ! ನಿನ್ನ ಮದುವೆಗಾಗಿ ಬಂದವರು ಈ ಸ್ಥಿತಿಯನ್ನು ಕಂಡರೆ ಏನೆಂದುಕೊಂಡಾರೊ? ಕಂದಾ ಏಳು!

ಇಂದುಧರನ ಸತ್ಕರುಣಗ। ಳಿಂದಲಿ ಪಡೆದೆನು ನಿನ್ನನು।
ಬಂದುದು ನಿನಗೀವಿಧಿ ಶಿವ। ಮುಂದಿನ್ನೆಂತಹುದೊ?॥
ಚಂದಿರಬಿಂಬವ ಪೋಲುವ। ಕಂದನೆ ನಿನ್ನಯ ವದನವು।
ಕಂದುತ ಕಾಂತಿಗಳೆಲ್ಲವು। ಕುಂದಿದುದೇಕಿನಿತು ॥೨॥

ಕೃ- ಮಗನೇ! ಪರಮೇಶ್ವರನ ಅನುಗ್ರಹದಿಂದ ನೀನು ನನಗೆ ಮಗನಾಗಿ ಜನಿಸಿದ್ದೀ, ನಿನ್ನ ಮದುವೆಯ ಮಂಗಲಕಾರ್ಯವನ್ನು ನೋಡುವ ಭಾಗ್ಯದ ಬಟ್ಟಿಗೇ ಈ ಅಮಂಗಲ ದುರ್ಭಾಗ್ಯ ನನಗೇಕೆ ಘಟಿಸಿತ್ತೋ ಕಾಣೆ. ಚಂದ್ರನಂತೆ ಕಾಂತಿಯುತವಾದ ನಿನ್ನ ಮುಖವು ಹೀಗೇಕೆ ಕಂದಿಹೋಯಿತು? ದೇವಾ! ನನ್ನ ಅಪರಾಧವಿದ್ದರೆ ಮನ್ನಿಸಿ ಮಗನನ್ನೊಮ್ಮೆ ಚೇತರಿಸಿ ಏಳುವಂತೆ ಮಾಡು. ಶಿವ ಶಿವಾ! ಮೃತ್ಯುಂಜಯಾ!

ರಾಗ-ಕೇತಾರಗೌಳ, ತಾಳ-ಅಷ್ಟ.

ಏತಕೆ ಮರುಗುವೆ ಹರಿಯೆ ನೀ ರಣದೊಳು। ರೀತಿಯಲ್ಲಿದು ನಿನಗೆ॥
ಪ್ರೀತಿಯಿಂದುಸುರುವೆ ಕಲಹಕಂಗೈಸದೆ। ನೀ ತೆರಳ್ಮೆ ಮನೆಗೆ ॥೧॥

ಕೌ- ಕೃಷ್ಣಾ! ಯುದ್ಧ ಮಧ್ಯದಲ್ಲಿ ಹೀಗೇಕೆ ಮರುಗುತ್ತೀ? ವಿಚಾರಶೂರನು ರಣಕಣದಲ್ಲಾದ ಸೋಲಿಗೆ ಅಳುವುದಿಲ್ಲ. ಈ ದೌರ್ಜನ್ಯವು ನಿನಗೇಕೆ ಬಂತು? ~~ಇನ್ನಾದರೂ ನನ್ನ ಮಾತನ್ನು~~ ಕೇಳಿ ಸುಮ್ಮನೆ ಮನೆಗೆಹೋಗು. ಕೃಷ್ಣಾ! ನಿನ್ನ ಮೇಲೆ ಕನಿಕರದಿಂದ ಹೇಳುತ್ತಿರುವೆ. ಕೇಳು! ರಣಭಯಂಕರ ಕೌಂಡ್ಲಿಕನೊಡನೆ ನಿನ್ನ ಪರಾಕ್ರಮ ಸಾಲದೆಂಬುದನ್ನು ಅರಿತುಕೊಳ್ಳಲು ಬೇರೊಂದು ಕಾರಣವನ್ನು ಹೇಳಲೇ?

ಮೊದಲೊಂದುಬಾರಿ ಕಂಸಾಸುರನಾಗಿ ನಾ। ಸಾಧಿಸಿದೆನವನಿಯೊಳು॥
ಚದುರತೆಯಲಿ ಬಿಲ್ಲ ಹಬ್ಬದ ನೆವದಿಂದ। ಸದೆಬಡಿದ್ಯೆನಿನ್ನನು ॥೨॥

ಕೌ- ಕಂಸನಿಗೆ ತಂಗಿಯ ಎಂಟನೇ ಮಗನಿಂದ ಸಾವೆಂಬ ಅಶರೀರವಾಣಿಯ ಫಲದಂತೆ ಜನಿಸಿದ್ದರೂ ನಿನ್ನನ್ನು ಬಿಲ್ಲಹಬ್ಬಕ್ಕೆಂದು ಮಮತೆಯಿಂದ

ಕರಿಸಿದ್ದನು. ಅಂಥ ಪರಾಕ್ರಮಶಾಲಿಯಾದ ನನ್ನನ್ನು ಕುತಂತ್ರದಿಂದ ಕೊಂದು ಗೊಲ್ಲರೆದುರು ಮೆರೆದೆಯಲ್ಲಾ! ಆ ನಿನ್ನ ಮಾವ ಕಂಸನೇ ಈಗ ಬನ್ನಿದುರಿರುವ ನಿನ್ನ ಈ ಹಿಂಸೆಗೆ ಕಾರಣನಾಗಿದ್ದವನೆಂಬುದನ್ನು ತಿಳಿ.

ಎರಡನೆ ಜನ್ಮದಿ ತವಭಗಿನಿಯೊಳುನು। ತರಳನೆಂದೆನಿಸಿದೆನು॥
ವರಚಕ್ರವ್ಯೂಹದೊಳೆನ್ನನುಕೊಲಿಸಿದೆ। ಪರಮಘಾತಕಿಯೆ ನೀನು ॥೩॥

ಕೌ– ಅಳಿಯನಿಂದ ಅಳಿದ ಅಪಮಾನದ ಸೇಡನ್ನು ಅಳಿಯನಾಗಿಯೇ ತೀರಿಸಬೇಕೆಂಬ ಛಲದಿಂದ ನಿನ್ನ ತಂಗಿ ಸುಭದ್ರಾ ಸಂಜಾತನಾಗಿ ಎರಡನೆ ಜನ್ಮವೆತ್ತಿದೆ. ಅಂದು ನನ್ನ ಬಾಲಲೀಲೆಗಳನ್ನೇ ಕಂಡು ಬೆದರಿದ ನೀನು ನಮ್ಮಂದಿರೊಳಗಾದ ಯುದ್ಧ ಕಾಲವನ್ನು ಹೊಂದಿಸಿಕೊಂಡು, ನನ್ನ ತಂದೆಯನ್ನು ಆ ದಿನ ಉಪಾಯದಿಂದ ತಪ್ಪಿಸಿ, ಚಕ್ರವ್ಯೂಹದಲ್ಲಿ ಅಕ್ರಮದಿಂದ ಕೊಲಿಸಿದೆ. ಅಭಿಮನ್ಯುವಿನ ನೆನಪಿದೆಯೇ ಕೃಷ್ಣಾ! ಜನ್ಮಾಂತರದಿಂದ ನನ್ನ ನಿನ್ನ ಹಗೆ ಹೆಮ್ಮರವಾಗಿ ಈ ಸಲ ಅಧಿಕಶಕ್ತಿಯುತನಾಗಿ ಬಂದಿದ್ದೇನೆ.

ಈಗ ಮಾದ್ರಾಧೀಶನುದರದಿ ಕೌಂಡ್ಲಿಕ। ನಾಗಿ ನಾ ಜನಿಸಿದೆನು॥
ಬೇಗದಿ ರಣಕಿದಿರಾಗಿ ನೀ ನಿಲ್ಲೆನು। ತಾಗಲಾರ್ಭಟಿಸಿದನು ॥೪॥

ಕೌ– ನಿನ್ನ ನೆಂಟತನವನ್ನೇ ತೋರಿದು ಮಾದ್ರೇಶನ ಸುತನಾಗಿ ಸಮಯಕಾಯುತ್ತಿರುವಾಗ ನೀನಾಗಿಯೇ ಈ ನೆಂಟತನಕ್ಕೆ ಗಂಟುಬಿದ್ದದ್ದು ಒಳಿತಾಯಿತು. ಮದುವೆಯು ಮದುಮಗನ ದುರವಸ್ಥೆಯಲ್ಲಿ ಮುಕ್ತಾಯವಾದುದನ್ನು ನೋಡಿದೆಯಲ್ಲ! ಈ ಮೊದಲೇ ರತಿ ನನ್ನವಳು. ಇನ್ನು ಮುಂದೆ ಹೇಗೂ ನನ್ನವಳೆ! ಆದರೆ ಮೊದಲು ನನ್ನ ಹಗೆಯೂ ಸಮಾಪ್ತಿಯಾಗಬೇಕಾಗಿದೆ. ಅಳುವನ್ನು ನಿಲ್ಲಿಸಿ ಯುದ್ಧಮಾಡುವುದೊಂದೇ ಬಾಕಿಯಿದೆ ಈ ಸಾರಿ ನೀನು ನನ್ನಿಂದ ತಪ್ಪಿಸಿಕೊಳ್ಳುವಂತಿಲ್ಲ. ರಣಹೇಡಿಯೇ ಏಳು.

ಎಂದವಾತನುಕೇಳುತಂದುಮನದಲಿ ಮು। ಕುಂದನು ಕೋಪತಾಳ್ದು॥
ಇಂದು ನಿನ್ನನು ಸಂಹರಿಸದಿರೆ ನಾನೆನು। ತೆಂದಚಕ್ರವ ಪಿಡಿದು ॥೫॥

ಕೃ– ಎಲಾ! ಬಾಯಿಗೆ ಬಂದಂತೆ ಒದರಬೇಡ! ದ್ವೇಷಸಾಧನೆಗಾಗಿ ಇದು ನಿನ್ನ ಮೂರನೇ ವೇಷವೋ? ಹುಡುಕುವ ಬಳ್ಳಿಯೇ ಕಾಲಿಗೆತಡೆದಂತಾಯಿತು. ನೀನಿನ್ನು ಎಷ್ಟು ಜನ್ಮವೆತ್ತಲು ಬಾಕಿಯಿದೆಯೋ! ನಿನಗೆ ಎರಡು ಅಭ್ಯಾಸವಾಗಿದೆಯಲ್ಲ! ಈ ಕೃಷ್ಣನಿಂದಲೇ ನಿನಗೆ ಪುನರ್ಜನ್ಮವೆಂದು ಬ್ರಹ್ಮ

ದೇವನು ಬರೆದಿರಬೇಕು! ಇದೋ ನೋಡು ಸುದರ್ಶನ ಚಕ್ರ! ಮತ್ತೊಂದು ಜನ್ಮ ತೊಡಗಲು ಸಿದ್ಧನಾಗು.

ರಾಗ-ದೇಶಿ, ತಾಳ-ಮಟ್ಟೆ.

ಹರಿಯು ಕೋಪವ ತಾಳಿಚಾಪವ॥
ಭರದಿ ಪಿಡಿದು ಝೇಂಕರಿಸುತಲೆಸೆದನಸ್ತ್ರವ ॥೧॥

ಕೃ— ತೃಣಪ್ರಾಯನಾದ ಕೌಂಡ್ಲಿಕನ ಮೇಲೆ ಮಹಾಶಕ್ತಿಯುತವಾದ ಚಕ್ರವನ್ನೆಸೆಯುವುದು ಅಗತ್ಯವಿಲ್ಲ. ಎಲಾ ಕೌಂಡ್ಲಿಕ! ಯುದ್ಧ ಪ್ರಾರಂಭದಲ್ಲಿ ಬಿಟ್ಟ ಅಸ್ತ್ರಶಕ್ತಿ ಮೊದಲು ಪರೀಕ್ಷಿಸು.

ಕೌ— ಕೃಷ್ಣಾ! ನಿನ್ನ ಅಸ್ತ್ರಮಧ್ಯದಲ್ಲಿಯೇ ತುಂಡರಿಸಿದ್ದೇನೆ. ಮುಂದ ರಿಯುವ ಪ್ರತ್ಯಾಸ್ತ್ರಗಳನ್ನು ನೋಡು!

ಎಸೆದ ಬಾಣವುಮುಸುಕೆ ಹರಿಯನು।
ಕುಸುಮನಾಭನಾಗ ಮೂರ್ಛೆವಶದಿ ಬಿದ್ದನು ॥೨॥

ಕೌ— ಕೃಷ್ಣನ ಹೆಮ್ಮೆ ಸದಾಕಾಲ ಮೆರೆದೀತೆ? ನಾನು ಬಿಟ್ಟ ಶರಗಳ ಸಾಮರ್ಥ್ಯದ ಅರಿವಾಯಿತು ಇವನಿಗೆ. ನಿಲ್ಲಲೂಸಹಾ ತ್ರಾಣವಿಲ್ಲದೆ ಬಿಲ್ಲನ್ನು ಬಿಸುಟು ಬಿದ್ದನಲ್ಲ! ನಳಿನಾಕ್ಷ! ಕಮಲನಾಭ! ಕೋಮಲವಾದ ಹೆಸರುಗ ಳನ್ನಿಟ್ಟುಕೊಂಡ ಕಪಟಿ! ಇವನ ಕುಟಿಲತೆಗಳನ್ನು ಸಂಪೂರ್ಣ ತಿಳಿದಿದ್ದೇನೆ. ಈಗ ಇವನ ವತಿಯಿಂದ ಬರುವವರಿದ್ದರೆ ಅವರನ್ನೂ ಗತಿಕಾಣಿಸುವೆನು.

ಹರಿಯು ಬೀಳಲು। ಹರನು ಖತಿಯೊಳು।
ವರ ತ್ರಿಶೂಲಧಾರಿಯಾಗಿ। ಶರವನೆಸೆಯಲು ॥

ಶಿವ— ರಣರಂಗದಲ್ಲಿ ಕೃಷ್ಣನೂ ಒರಗಿದನೇ? ಅವನ ದಿಬ್ಬಣದೊಟ್ಟಿಗೆ ಬಂದ ನಾನು ಅವನಲ್ಲಿರುವ ದೇವತ್ವದ ಸೋಲಾದ್ದನ್ನು ನೋಡಿ ಸುಮ್ಮನಿರ ಲಾದೀತೇ? ವೈರಿಯನ್ನು ಈ ಕ್ಷಣ ಹಣೆಗಣ್ಣಿನ ಜ್ವಾಲೆಯಿಂದ ಸುಟ್ಟೇ ಬಿಡು ತಿದ್ದೆ. ಆದರೆ ಅವನು ನನಗೆ ನಂಬಿನ ಭಕ್ತಶಿರೋಮಣಿಯಾಗಿದ್ದಾನೆ. ಈಗ ಕರ್ತವ್ಯದೃಷ್ಟಿಯಿಂದ ನೋಡಿದರೆ ಬಂದಪಕ್ಷದ ಹೊಣೆಗಾರಿಕೆಯೇ ನನ್ನನ್ನಾವ ರಿಸುತ್ತದೆ. ಆದುದರಿಂದ ವೈರಿಯ ಸ್ಥಾನದಲ್ಲಿದ್ದ ಕೌಂಡ್ಲಿಕನ ಹೆಮ್ಮೆ ಮುರಿ ಯಬೇಕಾಗಿದೆ. ಎಲಾ! ಕೌಂಡ್ಲಿಕಾ! ತ್ರಿಶೂಲಿಯನ್ನು ಇದಿರಿಸುವೆಯಾ? ನಿನ್ನ ತಲೆಗೇರಿದ ಗರ್ವ ಇಳಿಸಲು ಬಂದಿದ್ದೇನೆ ಯುದ್ಧಮಾಡು.

ಹರನ ಶರದಲಿ। ಸೋಲದಾತನು।
ಮರಳಿ ಪ್ರತಿಶರೌಘದಿಂದ। ಭರದೊಳೆಚ್ಚನು ॥೪॥

ಕೌ- ದೇವಾ! ಭಕ್ತನಿಗೆ ಯುದ್ಧಮುಖದಲ್ಲಿ ದರ್ಶನವಿತ್ತೆಯಾ? ನಿನ್ನ ದರ್ಶನ ಲಾಭದಿಂದ ನನಗೆ ಜಯವಾಗುವುದು ಖಂಡಿತವೆಂದು ನಂಬಿದ್ದೇನೆ. ಆದರೆ ಮಾನವರಾದ ನಮ್ಮ ಜಗಳಕ್ಕೆ ದೇವತ್ವವನ್ನು ಲಘುಗೊಳಿಸಿ ಬಂದ ನಿನ್ನೊಡನೆ ನಾನು ಕಾದಾಡುವ ಪರಿ ನೋಡು. ನಿನ್ನ ಅಸ್ತ್ರಗಳೆಲ್ಲಾ ನನ್ನಿಂದ ಪುಡಿಯಾಗುತ್ತಿವೆಯಲ್ಲ! ಮತ್ತೆ ಹೇಗೆ ಯುದ್ಧ ಮಾಡುವಿ? ದೇವಾ! ನಾನು ನಿನ್ನ ಪಾದವನ್ನು ನಂಬಿದ ಭಕ್ತನೆಂಬುದನ್ನರಿತುಕೊ!

ಭಕ್ತನೀತನು। ಎಂಬ ಬಿರುದನು॥
ಯುಕ್ತಿಯಿಂದಲರಿವುತಾ। ನಿಶ್ಶಕ್ತನಾದನು ॥೫॥

ಶಿವ- ಭಕ್ತನ ಮೇಲೆ ತ್ರಿಶೂಲಬಿಡಲೇ? ನನ್ನ ದೇವತ್ವಕ್ಕೇ ಕುಂದು ಬಂದೀತು. ಇವನು ನಿಜವಾದ ಪರಾಕ್ರಮಿಯಾಗಿದ್ದಾನೆ. ಭಕ್ತನಾದ ಇವನ ಬಾಣಗಳಿಂದ ಮೈ ತುಂಬಾ ಗಾಯಗಳಾಗುತ್ತಲಿವೆ. ಇದೇ ಸಂದರ್ಭದಲ್ಲಿ ಸೋತವನಂತೆ ಬೀಳುತ್ತೇನೆ. ಏನೆಂದರೂ ಭಕ್ತಾಧೀನನಲ್ಲವೇ ನಾನು!

ಕೌ- ದೇವಾ! ಭಕ್ತನ ಮರ್ಯಾದೆ ಉಳಿಸಿದೆ. ಇನ್ನಾರಿಗೂ ನಾನು ಹೆದರುವವನಲ್ಲ! ಬೇರೆ ಯಾರು ಬರುವರು? ನೋಡಬೇಕಾಗಿದೆ.

ಹರನು ಮೂರ್ಛೆಗೆ। ಸಂದು ಮಲಗಿರೆ॥
ಸರಸಿಜೋದ್ಭವನು ಬಂದು।ಶರವ ಪಿಡಿದನು ॥೬॥

ಬ್ರಹ್ಮ- ಕೌಂಡ್ಲಿಕನು ಶಿವನ ಪರಾಜಯದಿಂದ ಹಾರಾಡುವನಲ್ಲ! ಈತನ ಗರ್ವವನ್ನು ಕ್ಷಣಮಾತ್ರದಲ್ಲಿ ಇಳಿಸಬಲ್ಲೆ! ಎಲೈ ಇದುರಾಳಿಯೆ! ಈಗ ಸರಸಿಜೋದ್ಭವನಾದ ಚತುರ್ಮುಖನ ಪರಿಯನ್ನು ಬಲ್ಲೆಯಾ?

ರಾಗ- ನಾದನಾಮಕ್ರಿಯೆ, ತಾಳ- ಅಷ್ಟ

ಬೊಮ್ಮನತಾ ಕಂಡು ಕೋಪದಿ। ಬಲು। ಹೆಮ್ಮೆಯಿಂದಲಿಸುಪ್ರತಾಪದಿ॥
ನಮ್ಮೊಡನೀಪರಿ ಕಲಹಕೆ। ಬಂದ। ಹಮ್ಮನಿಳಿಸುವೆನು ನಿಮಿಷಕೆ ॥೧॥

ಕೌ- ಬ್ರಹ್ಮದೇವರೇ! ಒಳಿತಾಯಿತು. ಎಲ್ಲರ ಹಣೆಯಲ್ಲಿ ಭವಿಷ್ಯ ಬರೆಯುವ ನೀವು ನಿಮ್ಮ ಸೋಲಿನ ಬರಹವನ್ನು ತಿಳಿಯಲಿಲ್ಲವೇ? ಫಲಕ್ಕೆಬಾರದ ನಿಮ್ಮ ಹೆಮ್ಮೆಯನ್ನು ಒಂದೇ ಶರದಿಂದ ಇಳಿಸುತ್ತೇನೆ.

ವಾಣಿಯರಮಣನು ಬೀಳಲು। ಮತ್ತೆ। ಕಾಣುತ್ತ
ಬಲರಾಮ ಖತಿಯೊಳು। ಜಾಣತನದೊಳಿಮ್ಮಗೆಲಲೆಂದು।
ಬಂದುಪ್ರಾಣವ ಕೊಡದಿರು ನೀನಿಂದು ॥೨॥

ಬಲರಾಮ— ಎಲೈ ಹುಡುಗಾ! ಹರನನ್ನೂ, ಬ್ರಹ್ಮನನ್ನೂ ಗೆದ್ದೆನೆಂಬ ಗರ್ವವೇ? ಯಾದವರಲ್ಲಿ ಬಲಿಷ್ಠನಾದ ಬಲರಾಮನ ಹಲಾಯುಧದ ಪರಿಯನ್ನು ಅರಿತಿರುವೆಯಾ? ನಿನ್ನ ಶಕ್ತಿಯನ್ನು ನನ್ನಲ್ಲಿ ತೋರು.

ಪರಿಪರಿಯಸ್ತ್ರವನೆಸೆಯುತ್ತ। ಕಾದು। ತಿರಲಾಗ ಖಳನತಿ
ಕನಲುತ್ತ। ತರುಬಿ ಶರೌಘವನೆಸೆಯಲು। ನೀಲಾಂ-ಬರ
ನಾಗ ಮೂರ್ಛೆಯೊಳೊರಗಲು ॥೩॥

ಕೌ— ಇವನು ಬಲಭದ್ರನಂತೆ. ಬಲವೂ ಇಲ್ಲ, ಭದ್ರತೆಯೂ ಇಲ್ಲ. ಒಂದೇ ಗಳಿಗೆಯಲ್ಲಿ ಇವನಿಗೂ ಮೂರ್ಛೆ ಪ್ರಾಪ್ತವಾಯಿತು. ಇನ್ನು ದಿಬ್ಬಣದೊಟ್ಟಿಗೆ ಬಂದ ವೀರರ್‍ಯಾರಾದರೂ ಇದ್ದರೆ ಬರುವರೋ ನೋಡುತ್ತೇನೆ.

ವಾರ್ಧಿಕ

ಧರಣಿಪತಿ ಲಾಲಿಸೈ, ಹಲಧರನು ರಣದಿ ಮೈ। ಮರೆಯಲ್ಕೆ
ಕಾಣುತರಿಮುಸಗಿ ಬಹುಕೋಪದಿಂ। ಸುರರೆಲ್ಲ ನಡೆತಂದು
ನಿಲ್ಲಲಾಹವಕಾಗ ಕೌಂಡ್ಲಿಕಾಖ್ಯನು ಕಾಣುತ॥ ಉರಿಯನುಗುಳು
ತಲೊಡನೆ ಮೂದಲಿಸುತ ಮರನೊಂ। ದರೆ ಗಳಿಗೆಯೊಳು
ಕೆಡಹಿ ಮುಂದಯ್ದಿ ಬರುತಿಪ್ಪ। ದುರುಳ ಮಾದ್ರಾಧಿಪನ
ಕಂಡು ಗದೆಯಂತಿರುಹಿ ಮಾರುತಸುತನಿದಿರಾದನು ॥ ೧ ॥

ಕೌ— ಯುದ್ಧದಲ್ಲಿ ಒಬ್ಬೊಬ್ಬರೇ ಸೆಣಸಿದರೆ ಪ್ರಯೋಜನವಿಲ್ಲವೆಂದು ಅವಿವೇಕಿಗಳಾದ ದೇವತೆಗಳು ತಾವೇ ತಿಳಿದಿರಬೇಕು. ಹಾಗೆ ಒಟ್ಟಾಗಿ ಬಂದು ನನ್ನಮೇಲೆ ಧಾಳಿನಡೆಸಿದರು. ಏನುಫಲವಾಯಿತು? ಎಲ್ಲರೂ ಹಬ್ಬಕ್ಕೆ ಹೋದವರಂತೆ ದಣಿದು ಬಿದ್ದರು. ಇನ್ನಾರು ಬರುವವರಿದ್ದಾರೆ? ಭೀಮಾರ್ಜುನರನ್ನು ಕಾಣಲಿಲ್ಲವಲ್ಲ ಕಾದಿರುತ್ತೇನೆ.

ಭೀಮ— ಆಹಾ! ಹೋದವರಿಗೆಲ್ಲ ಅಪಜಯವಾಯಿತು. ಯುದ್ಧಕ್ಕೆ ನಿಂತವರಲ್ಲಿ ಯಾರೂ ಕೌಂಡ್ಲಿಕನಿಂದ ತಪ್ಪಿಸಿ ಬರಲಿಲ್ಲ. ಅದೆಂತಹ ಶಕ್ತಿವಂತನೋ ಅವನು? ಇಂತಹ ಅನರ್ಥವನ್ನು ನೋಡಿ ರಣಭಯಂಕರನಾದ ಭೀಮ

ನು ಸುಮ್ಮನೆ ಕುಳಿತಿರುವುದೆಂದರೇನು? ಅಪಮಾನವಲ್ಲವೇ? ಛೀ ಛೀ! ಕೌರವಾದಿಗಳನ್ನು ಸಂಹಾರಮಾಡಿದ ಯಶಸ್ಸು ವ್ಯರ್ಥವಾದೀತು. ಆದ್ದರಿಂದ ಗದಾಪಾಣಿಯಾಗಿ ಈಕ್ಷಣವೇ ಯುದ್ಧಕ್ಕೆನಿಲ್ಲುತ್ತೇನೆ.

ರಾಗ-ಭೈರವಿ, ತಾಳ-ಏಕ

ಗದೆಯನು ತಿರುಹುತ ಬಂದು। ಖಳ-ನುದರವತಿವಿಯಲ್ಕಂದು।
ಕದನದಿ ಮೈಮರೆದಾಗ। ನಿಮಿಷದೊಳೆದ್ದನು ತಾಬೇಗ ॥ ೧ ॥

ಭೀಮ— ಎಲೋ ಕೌಂಡ್ಲಿಕ! ಯುದ್ಧಕ್ಕೆ ನಿಂದವನು ಯಾರೆಂದು ಬಲ್ಲೆಯಾ? ಇದೋ ನೋಡು, ಮೃತ್ಯುದಂಡವನ್ನು ತಿರುಗಿಸುತ್ತಾ ನಿನ್ನ ಸಂಹಾರಕ್ಕಾಗಿ ಕಾಲರುದ್ರನೇ ಬಂದಿರುವನು, ಇನ್ನಾದರೂ ಗರ್ವಪಡಬೇಡ. ಸಾಯುವುದೇ ಹಿತವಾಗಿದ್ದರೆ ಇದೋ ಗದೆಯನ್ನು ನೋಡಿ ಕಾದಾಟಕ್ಕೆನಿಲ್ಲು.

ಕೌ— ಯಾರು ಭೀಮನೇ! ದೂರ ಹೋಗು.

ಬಕನನ್ನು ಮುರಿದಂತಲ್ಲ। ನಿನ್ನ— ಯುಕುತಿಗೆ ಬೆದರುವುದಿಲ್ಲ।
ಶಕುತಿಯ ನೋಡೆಂದೆನುತ। ಕೌಂಡ್ಲಿಕಶರವೆಚ್ಚನು ನಗುತ ॥೨॥

ಕೌ— ಎಲಾ ಕ್ಷುದ್ರ, ಮನುಷ್ಯನೆ। ಕೌಂಡ್ಲಿಕನಿಗಿದಿರಾಗಿ ನೀನೂ ಬಂದೆಯಾ? ಈ ಹಿಂದೆ ಬಂಡಿಯ ಭೀಮನಾಗಿ ಬಕಾಸುರನನ್ನು ಹೊಡೆಗಿಕ್ಕಿದ ರೀತಿಯೆಂದು ತಿಳಿದೆಯಾ? ಅಂತಹ ಉಪಾಯಕ್ಕೆ ನಾನು ಹೆದರುವವನಲ್ಲ. ಇದೋ ಎಚ್ಚರಿಸುತ್ತೇನೆ. ಮರ್ಯಾದೆಯಿಂದ ಸುಮ್ಮಗಿರುವುದೇ ಲೇಸು. ಅಲ್ಲದಿದ್ದರೆ ನಾನು ಹೂಡುವ ದಿವ್ಯಾಸ್ತ್ರಗಳನ್ನು ಪರೀಕ್ಷೆಮಾಡುನೋಡುವ.

ಬರುವಸ್ತ್ರವಗದೆಯಿಂದ। ತರಿ— ದುರೆಗರ್ಜಿಸಿ ಖಳಗೆಂದ।
ತರುಣಿಯನೆವದಲಿ ಬಂದು। ಯಮ-ಪುರಕಯ್ದುವೆ ನೀನಿಂದು ॥ ೩ ॥

ಭೀಮ— ಕೌಂಡ್ಲಿಕಾ! ಭೀಮನ ಪೌರುಷವನ್ನು ನೀನೆಲ್ಲಿ ಬಲ್ಲೆ? ಕುರುಕ್ಷೇತ್ರದಲ್ಲಿ ನಿನ್ನಂತಹ ಎಷ್ಟೋ ಬಲಿಷ್ಠರು ಈ ಗದಾ ಪ್ರಹಾರದಿಂದ ನಾಶ ಹೊಂದಿರುತ್ತಾರೆ. ಅದೇ ಗತಿ ನಿನಗಾದೀತು. ಹೆಣ್ಣಿನ ನಿಮಿತ್ತವಾಗಿ ಯಮಲೋಕಕ್ಕೆ ಹೋಗುವ ಆಸೆಯಿದ್ದರೆ ಮಾತ್ರ ಕಾಳಗಕ್ಕೆ ನಿಲ್ಲು, ಒಂದೇ ಪೆಟ್ಟಿನಿಂದ ಅಟ್ಟಿಬಿಟ್ಟೇನು.

ಕೌ— ನಿನ್ನಲ್ಲಿ ಗದೆಯಿದ್ದರೆ ನನಗೇನು ಲಕ್ಷ್ಯ. ಒಂದೇ ಬಾರಿಗೆ ಮೃತ್ಯುಸ್ವರೂಪದಂತಿರುವ ಏಳು ಬಾಣಗಳನ್ನು ನಿನ್ನಮೇಲೆ ಎರಗುತ್ತಿದ್ದೇನೆ.

ರಾಗ- ಕೇತಾರ ಗೌಳ। ತಾಳ- ಅಷ್ಟ.

ಮರುತಜರಣದೊಳು ಬೀಳಲು ಕಾಣುತ್ತ। ಧರಣಿಪಧರ್ಮಜನು॥
ದುರುಳನಪರಿಯನೀಕ್ಷಿಪೆನೆಂದು ಕೋಪದಿ। ಶರವಿಡಿದಯ್ತಂದನು ॥೧॥

ಧರ್ಮರಾಯ- ಹಾ ದೈವವೇ! ನಾನು ನೋಡುತಿದ್ದ ಹಾಗೆ ಭೀಮನೂ ತಲೆತಿರುಗಿ ಬಿದ್ದನು. ಪರಮೇಶ್ವರನಾದಿಯಾಗಿ ಸರ್ವರೂ ಮೈಮರೆತು ಹೋದರು. ಹಾಗಾದರೆ ನಾನೇಕೆ ಸುಮ್ಮನಿರಬೇಕು? ಕೌಂಡ್ಲಿಕನ ಶಕ್ತಿಸಾಮರ್ಥ್ಯಗಳನ್ನು ಪರೀಕ್ಷೆ ಮಾಡುವುದು ಯೋಗ್ಯ.

ಧರ್ಮಜ ಸಮರಕ್ಕೈತಂದುದ ಕಾಣುತ್ತ। ದುರ್ಮತಿ
ಕೌಂಡ್ಲಿಕನು॥ ಮರ್ಮವಿಲ್ಲನಗೆ ನಿಷ್ಕಪಟ ಪುಣ್ಯಾತ್ಮನು।
ಷ್ಕರ್ಮಕ್ಕೆ ಗುರಿಯಾಹೆನು ॥ ೨ ॥

ಕೌ.— ಇದೇನು ಚೋದ್ಯ! ಅಜಾತ ಶತ್ರುವಾಗಿದ್ದ ಯುಧಿಷ್ಠಿರನೂ ಯುದ್ಧಕ್ಕಾಗಿ ಬರುತ್ತಿರುವನು. ಪುಣ್ಯಪುರುಷನೂ ಜಗಳಕ್ಕೆಳಿಯುವುದೆಂದರೆ ಪರಿಸ್ಥಿತಿಯೇ ಪ್ರಚೋದಿಸಿರಬೇಕು. ಹಾಗೆ ಧರ್ಮಜ್ಞನ ಮೇಲೆ ಕೈ ಮಾಡುವುದೆಂದರೆ ನೀತಿಯಲ್ಲ. ಮಹಾ ಪಾಪಕ್ಕೆ ಒಳಗಾಗಬೇಕಾದೀತು.

ಎಂದು ತಿಳಿದು ದೂರದಿಂದಲಿ ಯಮಸುತಗೆಂದತಾ ನಮಿಸುತಲಿ॥
ಸಂದೇಹವಿಲ್ಲದೈತಂದಿರೇತಕೆರಣ। ಕೆಂದು ಮಾತ್ರುಸುರಿದನು ॥ ೩ ॥

ಕೌ— ಧರ್ಮರಾಯನಲ್ಲಿ ಯುದ್ಧನೀತಿಯನ್ನು ಬಿಟ್ಟು ವಿನಯೋಕ್ತಿಗಳಿಂದ ಸಮಾಧಾನಪಡಿಸಿ ಹಿಂದೆಕಳುಹಿಸುವುದು ಯೋಗ್ಯ. ದೂರದಿಂದಲೇ ನಮಸ್ಕಾರಮಾಡಿ ಮಾತಾಡಿಸಿ ನೋಡುತ್ತೇನೆ. ಧರ್ಮಪುತ್ರರಿಗೆ ವಂದನೆ ಏನು ಸ್ವಾಮಿ! ಕಾಳಗಕ್ಕೆ ಬಂದಿರಾ? ಧರ್ಮನೀತಿಗಳನ್ನು ಬಿಟ್ಟು ನೀವೇ ಕಲಹಮಾಡುವುದೆಂದರೆ ಯಾವ ನ್ಯಾಯವೋ ಹೇಳಿರಿ.

ಹಿರಿಯರು ನೀವು ಧರ್ಮಿಷ್ಠರು ನೋಡೆಸು। ತ್ಪುರುಷರಿಂದೆನ್ನೊಡನೆ॥
ಧುರಕಿದಿರಾದರೆಬಹುದಪಕೀರ್ತಿಯು। ನರಕಭಾಜನವಾಹುದು ॥೪॥

ಕೌ— ನೀವು ಮಹಾ ಪುರುಷರು, ಧರ್ಮ ಸ್ವರೂಪರು. ಪ್ರಾಯದಲ್ಲಿಯೂ ಹಿರಿಯರು. ಯುದ್ಧಕ್ಕೆ ಕರೆದರೂ ಹೋಗತಕ್ಕವರಲ್ಲ. ಹಾಗಿದ್ದು ಕೊಪೋದ್ರೇಕದಿಂದ ಇದಿರುನಿಂತರೆ ನಾನೇನು ಮಾಡಬೇಕು? ನಿಮ್ಮಂಥವರಲ್ಲಿ ಕೈಯೆತ್ತಿದರೆ ನರಕಕ್ಕೂ ಅಪಕೀರ್ತಿಗೂ ಪಾತ್ರನಾಗಬೇಕಲ್ಲವೇ? ಅಯ್ಯೋ!

ನ್ಯಾಯ ನೀತಿಗಳನ್ನು ಹೇಳತಕ್ಕವರು ನನ್ನನ್ನೇಕೆ ನರಕಕ್ಕೆ ದೂಡುತ್ತೀರಿ? ಅಜಾತ ಶತ್ರುಗಳಾಗಿದ್ದ ನಿಮ್ಮ ಪಾಲಿಗೆ ನಾನೇನು ಅಪರಾಧ ಮಾಡಿದೆನೋ ತಿಳಿಯದು.

ಎಂದು ನಾನಾಪರಿಯಿಂದ ಸಂಸ್ತುತಿಸಲಿ। ಕಂದು ಧರ್ಮಾತ್ಮಜನು॥
ಅಂದವನೊಳು ಕಾದುವಂದವ ಕಾಣದೆ। ಹಿಂದಕೆ ಮರಳಿದನು ॥೫॥

ಧರ್ಮ– ಕೌಂಡ್ಲಿಕನು ಧರ್ಮಸಮ್ಮತವಾದ ಪ್ರಶ್ನೆಗಳನ್ನೇ ಮುಂದಿಡುವನು. ಹೇಗೆ ಕಾದಾಡಲಿ? ಹೃದಯದಲ್ಲಿದ್ದ ಕೋಪವು ಇಳಿದುಹೋಯಿತು. ಇನ್ನು ಯುದ್ಧ ಮಾಡುವ ಇಚ್ಛೆಯೇ ಉಳಿದಿಲ್ಲ. ಏನೂ ಬಂದರೂ ಬರಲಿ, ಹಿಂತಿರುಗುತ್ತೇನೆ. ಸತ್ಯಧರ್ಮಗಳಿದ್ದರೆ ಎಲ್ಲಿಯೂ ಗೌರವವಿದೆ. ಕೌಂಡ್ಲಿಕ! ಏನೇ ಮಾಡು. ನಾನು ಯುದ್ಧ ಮಾಡುವಹಾಗಿಲ್ಲ.

ಭಾಮಿನಿ॥

ಧರಣಿಪಾಲಕ ಲಾಲಿಸೀಪರಿ। ಧುರಕೆ ನಿಲುವರ ಕಾಣದೆಲ್ಲರು।
ಮರುಗುತಿರೆ ಕಲಿಪಾರ್ಥ ಸ್ಮರಿಸಿದನಾಗ ಮಾರುತಿಯ॥
ಬರಲವನ ಸತ್ಕರಿಸಿರದೆ ಬಲು। ಭರದಿರಥವೇರುತ್ತ ಬಿಲು
ರ್ಧಿಾಂ। ಕರಿಸುತಾರ್ಭಟಿಯಿಂದ ಕೌಂಡ್ಲಿಕಗೆಂದನೂದಲಿಸಿ॥೬॥

ಅರ್ಜುನ– ಹೀಗೂ ಇದೆಯೋ? ಕೌಂಡ್ಲಿಕನ ಪರಾಕ್ರಮದ ಮುಂದೆ ಹರಿ ಹರರೂ ಸೋತರು. ಏನೋ ಆಶ್ಚರ್ಯವಿರಬೇಕು. ಇರಲಿ. ಮೂರು ಲೋಕದ ಗಂಡನಾದ ಈ ಪಾರ್ಥನನ್ನು ಕೆಣಕಿ ಹೇಗೆ ಬದುಕುವನೋ ನೋಡೋಣ. ಅದಕ್ಕಾಗಿ ಮುಖ್ಯಪ್ರಾಣನನ್ನು ಸ್ಮರಿಸಿಕೊಳ್ಳುತ್ತೇನೆ.

ಹನುಮಂತ– ಫಲ್ಗುಣನೇ! ನನ್ನನ್ನು ಸ್ಮರಿಸಿದೆಯಾ?

ಅರ್ಜುನ– ಆಂಜನೇಯ! ನಮ್ಮವರನ್ನೆಲ್ಲಾ ಸೋಲಿಸಿದ ಕೌಂಡ್ಲಿಕನೊಡನೆ ಕಾದಾಡಬೇಕಾಗಿದೆ. ನೀನು ನನ್ನ ಧ್ವಜಾಗ್ರವನ್ನೇರಿ ಕಾಪಾಡಬೇಕು ಬಲ್ಲೆಯಾ? ಇನ್ನು ಸಾವಕಾಶವಿಲ್ಲ. ಈಗಲೆ ರಥಾರೂಢನಾಗುತ್ತೇನೆ.

ರಾಗ– ಭೈರವಿ। ತಾಳ– ಅಪ್ಪ.

ದುರುಳ ಕೌಂಡ್ಲಿಕನೆ ಕೇಳು। ಸಂಗರದಲಿ! ಹರಿಹರಸುರವರೊಳು
ಮೆರಸಿದೆ ಪಂಥವನೆಂದು ಗರ್ವಿಸದಿರು। ಬರಿಬಯಲಾಸೆಯೊಳು॥೧॥

ಅರ್ಜುನ– ಎಲಾ ದುಷ್ಟ ಕೌಂಡ್ಲಿಕನೇ! ಅಹಂಕಾರದಿಂದ ಮುಂದರಿಯಬೇಡ. ಹರಿ, ಹರ, ಇಂದ್ರ ಮೊದಲಾದವರು ಸೋತರೆಂದೂ ನಾನೇ ಗೆದ್ದೆನೆಂದೂ ಗ್ರಹಿಸಬೇಡ! ಆ ಗ್ರಹಿಕೆಯು ಬರಿಯ ಭ್ರಾಂತಿಯೆಂದು ಪ್ರಕಟಪಡಿಸುತ್ತೇನೆ. ಬಾ ಮುಂದೆ. ಮಹಾ ಧನುರ್ಧಾರಿಯೆಂದು ಕೀರ್ತಿಪಡೆದ ಈ ಸವ್ಯಸಾಚಿಯು ನಿನ್ನ ಪಾಲಿಗೆ ಹೊಸತಾದ ಅನುಭವ ಕೊಡುವನು. ನಿನ್ನ ಜೀವಿತದ ಕೊನೆಯ ಭಾಗವೇ ಇದೆಂದು ಯೋಚಿಸು.

ಧೀರನೀನಾಗಿರಲು। ನಪುಂಸಕ। ನಾರಿಯಾಕಾರದೊಳು। ಸೇರಿ
ವಿರಾಟನ ಪುರದೊಳು ಮೆರೆದಿಹ। ವಾರತೆ ಕೇಳಿಹೆನು ॥ ೨ ॥

ಕೌ– ಧುರಧೀರನಾದ ನನ್ನ ಸಾಮರ್ಥ್ಯವು ಇಲ್ಲಿಯೇ ಮೆರೆದಿರುವಾಗ ನೀನೇಕೆ ಹೊಗಳಿಕೊಳ್ಳಬೇಕು ಮೊದಲಾಗಿ ನೀನೇ ನಿನ್ನಲ್ಲಿ ತಿಳಿದರೆ ಸಾಕು ವಿರಾಟನಗರದಲ್ಲಿ ನಪುಂಸಕನಾಗಿ ಕಾಲಕಳೆಯುತ್ತಿದ್ದ ಚರಿತ್ರೆಯನ್ನು ಕೇಳಿ ತಿಳಿದಿರುವವರಿಗೆ ಬೇರೆ ಹೇಳುವುದು ಬೇಡ. ಅಂತಹ ನಡತೆಯಿದ್ದರೆ ಇದೋ ಪರ್ವತಾಸ್ತ್ರದಿಂದ ಕುಸಿದು ಹೋಗುವುದು ನೋಡು.

ಎಂದದ್ರಿಬಾಣವನು। ಬಿಡಲು ವಜ್ರ। ದಿಂದತರಿವುತೆಂದನು। ಇಂದು
ಮುಖಿಯು ನೆವದಿಂದ ನೀ ಕಲಹಕ್ಕೆ। ನಿಂದು ಸಾಯದಿರೀವ್ರೋ ॥೩॥

ಅರ್ಜುನ– ಎಲೊ ದುಷ್ಟನೇ! ನಾನು ನಪುಂಸಕನಾಗಿದ್ದುದು ಒಂದು ವರ್ಷ ಮಾತ್ರ. ಇದೀ ಜೀವಮಾನ ನಪುಂಸಕನಾಗಿಯೇ ಸಾಯಲು ನೀನೀಗ ಹೊರಟು ನಿಂತಿರುವೆ. ಈ ಮಾತಿಗೆ ಸಾಕ್ಷಿಯಾಗಿ ಇದೋ ವಜ್ರದಿಂದ ನಿನ್ನ ಪರ್ವತಾಸ್ತ್ರವನ್ನು ಛೇದಿಸಿಬಿಟ್ಟಿದ್ದೇನೆ.

ಗುರುಭೀಷ್ಮಾದಿಗಳ ಹಿಂದೆ। ರಣಾಗ್ರದಿ। ಮರೆಮೋಸದಿಂದ ಕೊಂದೆ।
ಪರಮಪಾತಕಿ ನಿನ್ನ ಪರಿಯನಾಬಲ್ಲೆನೆಂ। ದಿರದೆಚ್ಚನರಸಿಗಂದು ॥೪॥

ಕೌಂಡ್ಲಿಕ- ಪಾರ್ಥ! ಸಾಕು ನಿನ್ನ ಬಡಿವಾರ. ಕುರುಕ್ಷೇತ್ರ ಯುದ್ಧದಲ್ಲಿ ಹೇಗೆ ಜಯಶಾಲಿಯಾದೆಯೆಂದು ವಿಚಾರವಂತರಿಗೆಲ್ಲ ತಿಳಿದದೆ ಶಿಖಂಡಿಯನ್ನು ಮುಂದಿಟ್ಟು ಭೀಷ್ಮರನ್ನೂ, ಅಸತ್ಯದಿಂದ ದ್ರೋಣರನ್ನೂ ಗೆದ್ದ ಪರಾಕ್ರಮಕ್ಕೆ ಇದೋ ಧಿಕ್ಕಾರವಿರಲಿ. ಆ ಬಗೆಯ ಮೋಸಗಾರಿಕೆಗೆ ಇಲ್ಲೇನೂ ಎಡೆಯಿಲ್ಲ. ಅಂತಹ ಪಾಪಕ್ಕೆ ತಕ್ಕ ಫಲಕೊಡುವುದಕ್ಕಾಗಿ ಬಾಣಗಳ ಮಳೆಯನ್ನೇ ಸುರಿಸಿಬಿಡುತ್ತೇನೆ.

ಭಾಮಿನಿ॥

ಹಲವು ಮಂತ್ರಾಸ್ತ್ರಗಳ ಬಿಡಲದ। ಗೆಲಿದು ಕೌಂಡ್ಲಿಕ ಮೆರೆವುತಿರಲಾ
ಫಲುಗುಣನು ಚಿಂತಿಸಿದನಚ್ಚರಿಗೊಳುತ ಮನದೊಳಗೆ॥ ಇಳೆಯ
ಪಾಲಕರೆನ್ನೊಳೀಪರಿ। ಕಲಹದೊಳು ಜಯಿಸಿದುದ ಕಾಣೆನು।
ನಳಿನನಾಭನು ಮುನಿದನೆಂದಿಗೆನುತ್ತಲಳಲಿದನು ॥ ೧ ॥

ಕೌ.— ಅರ್ಜುನನು ಎಷ್ಟು ಸಮರ್ಥನಾದರೂ ನನ್ನ ಮುಂದೆ ಅವಿವೇಕಿಯಾಗಿ ಒಳ್ಳೆಯ ಪಾಠವನ್ನು ಕಲಿತನು. ಅವನಿಂದ ಬಿಡಲ್ಪಟ್ಟ ಮಂತ್ರಾಸ್ತ್ರಗಳೆಲ್ಲ ಮೂಲೆ ಸೇರಿವೆ. ಇನ್ನೇನು ಮಾಡುವನೋ ನೋಡುತ್ತೇನೆ. ಈಗಲೇ ಸೋತು ತಲೆ ತಗ್ಗಿಸಿ ನಿಂತಿದ್ದಾನೆ.

ಅರ್ಜುನ– ರಾಜರಲ್ಲಿ ಈ ರೀತಿಯಾಗಿ ಕಾದಾಡುವವರಿದ್ದಾರೆಯೇ? ಎಷ್ಟು ದೊಡ್ಡ ಪ್ರಮಾದವಾಯಿತು. ಕೃಷ್ಣಾ! ನೀನೂ ಮುನಿದೆಯಾ?

ಸಾಂಗತ್ಯ। ತಾಳ— ರೂಪಕ.

ಹರ ಹರ ಸಮರದಿ ಕೈಸೋತೆನಲ್ಲನಾ। ನಿರದೆ ಕೌಂಡ್ಲಿಕ
ನೊಡನಿಂದು॥ ಧುರಧೀರನಾನೆಂದು ಜಗದಿ ಕೊಂಡಾ
ಡುವ। ಬಿರುದೆತ್ತಲಡಗಿತು ಶಿವನೆ ॥ ೧ ॥

ಅರ್ಜುನ– ಶಿವ ಶಿವಾ! ನನ್ನ ಅವಸ್ಥೆಯು ಹೀಗೇಕಾಯಿತು? ತ್ರಿಲೋಕವೀರನಾದ ನಾನು ಕೂಡ ಸೋತೆನಲ್ಲಾ! ಇದರಿಂದ ಜಗತ್ತಿನಲ್ಲಿ ನಾನು ಪಡೆದ ಪ್ರಸಿದ್ಧಿಯು ವ್ಯರ್ಥವಾಗುವಂತಾಯಿತು. ಅಯ್ಯೊ! ನನ್ನಲ್ಲಿದ್ದ ಶಕ್ತಿ ಸಾಮರ್ಥ್ಯಗಳು ಈಗೆಲ್ಲಿ ಹೋದುವು? ಯಾವ ಪ್ರಯತ್ನವೂ ಈತನಲ್ಲಿ ನಡೆಯದಾಯಿತಲ್ಲಾ!

ಸಾರಥಿಯಿಲ್ಲದೆ ಕೆಟ್ಟೆನಲ್ಲಯ್ಯೊ ನಾ। ನೀರೀತಿಯಿಂದ
ಕಟಕಟಾ!॥ ಮೂರು ಲೋಕದೊಳೆಲ್ಲ ಧೀರನಾನೆಂದೆಂಬ।
ವಾರತೆ ಕೊಂಡಾಡುತಿಹರು ॥ ೨ ॥

ಅರ್ಜುನ– ಶ್ರೀ ಕೃಷ್ಣನು ಜೊತೆಯಲ್ಲಿ ಸಾರಥಿಯಾಗಿದ್ದಾಗ ಎಷ್ಟೋ ಸಾಹಸಗಳನ್ನು ತೋರಿಸಿದ್ದೆನು. ಆದರೆ ಈ ಯುದ್ಧದಲ್ಲಿ ಸರಿಯಾದ ಸಾರಥಿಯಿಲ್ಲದೆ ಸೋತು ಹೋದೆನು. ಅಯ್ಯೋ! ಮೂರುಲೋಕದ ಮಂದಿಗಳೆಲ್ಲ

ಶೌರ್ಯದ ಸಂಕೇತವೆಂದು ನಂಬಿಕೊಂಡಿರುವಾಗ ಇಂತಹ ಅಪಮಾನವನ್ನು ಹೇಗೆ ಸೈರಿಸಲಿ? ಶಿವ ಶಿವಾ! ನನ್ನ ಅವಸ್ಥೆಯು ಇಷ್ಟು ಹೀನವಾಯಿತೇ?

ಮಾತೆಗೋಸುಗ ಪುರಂದರನೈರಾವತವ ನೀ। ಭೂತಳಕಿಳಿಸಿತಂದಿಹೆನು॥
ಸೋತವನಿಪರುಬಿಟ್ಟಿಹಧನುವೆತ್ತಿಸಂ। ಪ್ರೀತಿಯಿಂಗೆಲಿದೆ ದ್ರೌಪದಿಯ॥

ಅರ್ಜುನ– ನನ್ನ ಪಂಥ ಪೌರುಷಗಳು ಸಾಮಾನ್ಯವಲ್ಲ. ನಮ್ಮ ತಾಯಿಗೆ ಐದು ಮಂದಿ ಮಕ್ಕಳಿದ್ದರೂ ದೇವಲೋಕದ ದೇವೇಂದ್ರನೇರುವ ಐರಾವತವನ್ನು ಭೂಲೋಕಕ್ಕಿಳಿಸಿರುತ್ತೇನೆ. ದ್ರೌಪದೀಸ್ವಯಂವರದಲ್ಲಿ ರಾಜಾಧಿರಾಜರನ್ನು ಅವಮಾನಗೊಳಿಸಿದ ಮಹಾಧನುಸ್ಸನ್ನೆತ್ತಿ ಮತ್ಸ್ಯ ಯಂತ್ರವನ್ನು ಭೇದಿಸಿರುತ್ತೇನೆ. ಖಂಡ ಖಂಡಗಳ ರಾಜರನ್ನು ಗೆದ್ದು ರಾಜಸೂಯಕ್ಕೆ ಬೇಕಾದ ಧನವನ್ನು ತಂದು ಧನಂಜಯನಾಗಿರುತ್ತೇನೆ. ಅಂಥ ಪರಾಕ್ರಮವು ಮಾದ್ರ ರಾಜನಲ್ಲಿ ವ್ಯರ್ಥವಾಯಿತೆಂದರೆ ಕಾಲ ಮಹಾತ್ಮೆಯೇ ಸರಿ.

ಹರನ ಮೆಚ್ಚಿಸಿ ಪಡೆದಿಹೆ ಪಾಶುಪತವೆಂಬ। ಶರವನ್ನು
ಸಮರದೊಳಾನು॥ ತುರುವಿಗೋಸುಗ ಕುರುಕುಲವನ್ನು
ಜಯಿಸಿದೆ। ದುರುಳ ರಕ್ಕಸರ ಮರ್ದಿಸಿದೆ ॥ ೪ ॥

ಅರ್ಜುನ– ಇಂದ್ರಕೀಲದಲ್ಲಿ ಪರಶಿವನನ್ನು ಭಕ್ತಿಯಿಂದಲೂ ಶಕ್ತಿಯಿಂದಲೂ ಮೆಚ್ಚಿಸಿ ಪಾಶುಪತಾಸ್ತ್ರವನ್ನು ಪಡೆದಿದ್ದೆ. ಗೋವುಗಳನ್ನು ಬಿಡಿಸುವುದಕ್ಕಾಗಿ ಕುರುಕುಲವನ್ನೇ ಗೆದ್ದ ಪರಾಕ್ರಮಿ ನಾನು. ಇಂದ್ರನಿಂದ ಗೆಲಲಾಗದ ಎಷ್ಟೋ ರಾಕ್ಷಸರನ್ನೂ ಮರ್ದಿಸಿದ್ದೆ. ಕುರುಕ್ಷೇತ್ರದಲ್ಲಿ ಕೃಷ್ಣನ ಸಾರಥ್ಯದಿಂದ ಭೀಷ್ಮಾದಿಗಳನ್ನೂ ಜಯಿಸಿದ್ದೆ. ಅಂತಹ ಶೌರ್ಯವು ಈ ಕ್ಷೇತ್ರದಲ್ಲಿ ವಿಫಲವಾಯಿತಲ್ಲವೇ?.

ಎಂದು ನಾನಾ ಪರಿಯಿಂದ ದುಃಖಿಸುತಿರೆ। ಬಂದು ಕಾಣುತ
ಮಾದ್ರಾಧಿಪನು॥ ಮುಂದುವರಿದು ನಡೆತಂದು ಪಾರ್ಥನ
ಜರೆ। ದೆಂದನು ಕನಲಿ ಗರ್ಜಿಸುತ ॥ ೫ ॥

ಶೌ.– ಅಹಹ! ಈ ಅರ್ಜುನನು ಮೂರು ಲೋಕದ ಗಂಡನಂತೆ. ಈತನ ಅವಸ್ಥೆಯನ್ನು ನೋಡಿದರೆ ನಗುವೇ ಬರುತ್ತದೆ. ವಿಚಾರ ಮಾಡಿದರೆ ಕ್ರೋಧವೂ ಉಕ್ಕುತ್ತದೆ. ಇದಕ್ಕೇನು ಪರಿಹಾರ! ಮೂದಲಿಯ ಮಾತುಗಳನ್ನಾಡಿ ಯುದ್ಧ ಕಾರ್ಯಕ್ಕೆಳಸಿಬಿಡುತ್ತೇನೆ. ಎಲೇ ಪಾರ್ಥ! ಏಕೆಅಳುತ್ತಿಯೋ

ರಾಗ- ಭೈರವಿ, ತಾಳ- ಮಟ್ಟೆ

ಪಾರ್ಥನೆಂಬ ಬಿರುದ ನೀನು। ವ್ಯರ್ಥ ಕಳೆದೆಲಾ॥
ಧೂರ್ತತನದೊಳಾತ್ಮಸ್ತುತಿಯ। ಕೀರ್ತಿಸುವೆ ಭಲಾ ॥೧॥

ಕೌ- ಭಲಾ ಅರ್ಜುನಾ! ಪಾರ್ಥನೆಂಬ ಹೆಸರನ್ನು ಇಷ್ಟು ಸುಲಭವಾಗಿ ಕಳೆದುಕೊಳ್ಳುವಿಯೆಂದು ನಾನು ತಿಳಿದಿರಲಿಲ್ಲ. ಪೃಥಾದೇವಿಯ ಮಕ್ಕಳು ಪಾರ್ಥರೇ ಆದರೂ ನಿನ್ನನ್ನು ಮಾತ್ರ ಹಾಗೆ ಹೇಳಲು, ನೀನು ಸಂಪಾದಿಸಿದ ಬಿರುದಾಗಿರುತ್ತದೆ. ಅದನ್ನು ನೀನು ರಣಕ್ಷೇತ್ರದಲ್ಲಾಗಲೀ ಕಣ್ಣೀರಿನಕೆಸರಿನಲ್ಲಾಗಲೀ ಗಳಿಸಿರುತ್ತೀಯಾ? ಛಿ! ಎಂತಹ ನಾಚಿಕೆ! ಕಳೆದುಹೋದ ಕಥೆಗಳನ್ನು ಹೇಳಿಕೊಳ್ಳುತ್ತಾ ಮಾಡಬೇಕಾದ ಕಾರ್ಯವನ್ನು ಮರೆತುಬಿಟ್ಟರೆ ಯಾವ ಪರಿಣಾಮವಾಗುವುದು ಬಲ್ಲೆಯಾ? ದಶನಾಮಾವಳಿಯನ್ನು ಪಡೆದ ವೀರನೇ! ಎಲ್ಲಿ ಹೋಯಿತು ನಿನ್ನ ಶೂರತನ?

ನಿನ್ನ ಸಲಹುತಿಹ ಹರಿಯು। ಮುನ್ನ ಸೋತನು॥
ಇನ್ನು ತಡೆಯಲೇಕೆ ತೋರು। ನಿನ್ನ ಬಲವನು ॥೨॥

ಕೌ- ಈ ಹಿಂದೆ ನಿನ್ನ ಗೌರವವನ್ನು ಕಾದುಕೊಟ್ಟ ದೇವನಿಂದು ತನ್ನ ಗೌರವವನ್ನೇ ಕಳೆದುಕೊಂಡು ಬಿದ್ದಿದ್ದಾನೆ. ನಿನಗೆ ಶಕ್ತಿಯಿದ್ದರೆ ನಡೆಯುವ ಯುದ್ಧದಲ್ಲಿ ಗೆದ್ದು, ಮಾನವನ್ನು ಉಳಿಸಿಕೊಳ್ಳು. ಅಲ್ಲದೆ ನೀನೀಗ ಎಷ್ಟೇ ಗೋಳಾಡಿದರೂ ನಿನಗೆ ಭಾವನಾಗಿಯೂ ದೇವನಾಗಿಯೂ ಇರುವ ಕೃಷ್ಣನು ಖಂಡಿತ ಬರುವುದಿಲ್ಲ. ಅವನಿಗಾದ ಅವಸ್ಥೆ ಅವನಿಗೆ ಸಾಕಾಗಿದೆ.

ಎಂದು ಮೂದಲಿಸಲು ಪಾರ್ಥ। ನಂದು ಖತಿಯೊಳು॥
ನಿಂದು ರಣಕೆ ಚಾಪವಿಡಿವು। ತೆಂದನವನೊಳು ॥೩॥

ಅ- ಯುದ್ಧಮಧ್ಯದಲ್ಲಿ ಸ್ವಲ್ಪ ವಿಚಾರಮಗ್ನನಾದುದಕ್ಕೆ ಬಾಯಿಗೆ ಬಂದಂತೆ ನಿಂದಿಸುವೆಯಾ? ಪಾಪಿಯೆ! ನರನ ಯೋಗ್ಯತೆ ತಿಳಿಯದವನಾದ ನಿನಗೆ ಗರ್ವ ಬಂದಿದೆ. ಅದನ್ನು ದಿವ್ಯ ಶರಗಳಿಂದಲೇ ಇಳಿಸುತ್ತೇನೆ.

ಕುಸುಮನೇತ್ರನನ್ನು ಜಯಿಸಿ। ದಸಮು ಬಲವನು॥
ಕಸುರಿದುವೆನೆನುತಲಸ್ತ್ರ। ವಿಸರವೆಸೆದನು ॥೪॥

ಅ- ಮುಚ್ಚು ಬಾಯಿ! ದೇವನನ್ನು ಗೆದ್ದವನೇ ನೀನು? ಪರಂಜ್ಯೋತಿಯಾದ ಕಮಲಾಕ್ಷನನ್ನು ಸೋಲಿಸುವವರು ಯಾರು? ಭಕ್ತರ ಸೇವೆಗಾಗಿ ಎಡೆ

ಮಾಡಿಕೊಟ್ಟ ಅವನ ನಟನೆಯೆಂಬುದು ನೀನರಿಯೆ. ಕೃಷ್ಣನನ್ನು ಗೆದ್ದೆನೆಂಬ ಸಾಹಸವಿದ್ದರೆ ಇದೊ! ಬಿಟ್ಟಿರುವ ಮಂತ್ರಶರಗಳು, ಖಂಡಿಸು ನೋಡುವಾ!

ಬರುವ ಶರವ ಕೌಂಡ್ಲಿಕಾಖ್ಯ। ತರಿವುತಾಕ್ಷಣ ॥
ಮರೆಳಿ ಶರವನೆಸೆಯೆ ಮ್ಯ। ಮರೆದಫಲುಗುಣ ॥೫॥

ಕೌ– ಆಹಾ ಫಲ್ಗುಣ! ನಿನ್ನ ಮಾತುಗಳನ್ನು ಕೇಳಿದಾಗ ಯಾವ ದೊಡ್ಡ ಶಕ್ತಿಯನ್ನು ಪ್ರಯೋಗಿಸುತ್ತೀಯೋ ಎಂದು ಹೆದರಿಹೋದೆ. ಈಗ ನೋಡಿದರೆ ಆ ಬಾಣಗಳು ಉರಿದುಹೋಗಿವೆ. ಇನ್ನು ನಿನಗೆ ಹೀಗೇ ಬಿಡುವಂತಿಲ್ಲ. ಕ್ರೂರವಾದ ಶರದಿಂದ ಕೆಡಹಾಕಿ ಮತ್ತಾರು ಬರುವರೋ ನೋಡುತ್ತೇನೆ.

ಭಾಮಿನಿ

ವೀರ ಪಾರ್ಥನು ಬೀಳೆ ರಣದಲಿ। ಧೀರ ಕೌಂಡ್ಲಿಕ ಮೆರೆವುತಿರಲದ।
ನಾರಿ ದ್ರುಪದಾತ್ಮಜೆಯು ಕಾಣುತಲಧಿಕ ರೋಷದಲಿ॥
ಘೋರಪಾತಕಿಯಿವನ ಕೆಡಹುತ। ಮಾರಿಗೌತಣವೀವೆನೆನುತಲಿ।
ಕ್ರೂರ ಚಂಡಿಯ ರೂಪವಾಂತಳು ಜವದಿ ಬೊಬ್ಬಿಡುತ॥

ದ್ರೌಪದಿ– ವೀರರಲ್ಲಿ ವೀರರೆಂದು ಪ್ರಸಿದ್ಧರಾದ ಪಾಂಡವರೂ ಸೋತರೆಂದಮೇಲೆ ಉಳಿದ ಪರಿವಾರದವರು ಏನು ಮಾಡುವರು? ಈತನ ಎದುರು ಯುದ್ಧ ಮಾಡಲು ಭಯಗ್ರಸ್ತರಾಗಿ ಮೂಕಸನ್ನೆಯಿಂದಲೇ ಅಸಮ್ಮತಿಯನ್ನು ಸೂಚಿಸುತ್ತಿದ್ದಾರೆ ಎದುರಾಳಿಯಾದ ಕೌಂಡ್ಲಿಕನಂತೂ ವಿಜಯೋತ್ಸಾಹದಿಂದ ಕುಣಿದಾಡುತಿದ್ದಾನಲ್ಲ! ಭೂಭಾರಕನಾದ ಇವನನ್ನು ಈಗಲೇ ಸಂಹರಿಸಬೇಕಾಗಿದೆ. ಆದುದರಿಂದ ಅಯೋನಿಜೆಯೂ, ಶಕ್ತಿಸ್ವರೂಪಳೂ ಆದ ನಾನು ಸುಪ್ತವಾಗಿ ನನ್ನಲ್ಲಡಗಿರುವ ಶಕ್ತಿಗಳನ್ನೆಲ್ಲಾ ವ್ಯಕ್ತಪಡಿಸಿ, ಭಯಂಕರ ರೂಪದ ಚಂಡಿಕೆಯಾಗಿ ಕೌಂಡ್ಲಿಕನನ್ನು ಸೀಳಿ ರಣದೇವತೆಗೆ ಔತಣ ಮಾಡಿಸಬೇಕಾಗಿದೆ. ಎಲೈ ದುಷ್ಟನೇ! ನಿನ್ನಲ್ಲಿ ಶಕ್ತಿಯಿದೆಯೊ?

ರಾಗ- ಮಾರವಿ, ತಾಳ- ಏಕ

ಘೋರಾಕಾರವ। ತಾಳುತ ರೌದ್ರದೊ। ಳಾರುಭಟಿಸುತಾಗ॥
ಮಾರಿಯ ರೂಪದಿ ಭೋರಿಡುತಯ್ತರೆ। ಧಾರಿಣಿ ಕಂಪಿಸಿತು ॥೧॥

ಚಂಡಿಕೆ– ಎಲೋ ಚಂಡಾಲಾ! ಇಲ್ಲಿ ಬಾರೋ! ನಿನ್ನ ಸಂಹಾರಕಾರಿಣಿಯ ಉಗ್ರಸ್ವರೂಪವನ್ನು ಕಣ್ತುಂಬಾ ನೋಡು. ನನ್ನ ಹತ್ತಿರ ತಪ್ಪಿ ಹೋ

ಗುವ ಬಗೆಯಿದೆಯೋ ನಿನ್ನಲ್ಲಿ?

ಚಂಡಿಯ ರೂಪವನೀಕ್ಷಿಸುತಾಕ್ಷಣ। ಕೌಂಡ್ಲಿಕ ಭೂಪತಿಯು ॥
ಭಂಡರ ತೆರದೊಳಗೋಡುತಲಿರಲದ। ಕಂಡವಳುಸುರಿದಳು ॥೨॥

ಕೌ- ಅಯ್ಯಯ್ಯೊ! ಏನಾಶ್ಚರ್ಯ? ಭೂಮಿಯೂ ಆಕಾಶವೂ ಒಂದಾಗುವಂತೆ ಭಯಂಕರವಾದ ಅಟ್ಟಹಾಸ ಕೇಳಿಸುತ್ತಿದೆ. ನೋಡುವಾಗಲೇ ಭಯ ಹುಟ್ಟಿಸುವ ಕೋರೆದಾಡೆಗಳು! ಕಿಡಿಕಾರುವ ಕೆಂಗಣ್ಣುಗಳು! ಅಬ್ಬಾ! ಇಲ್ಲಿ ನಿತ್ತರೆ ಪ್ರಾಣವುಳಿಯಲಿಕ್ಕಿಲ್ಲ. ಅದಕ್ಕಾಗಿ ಈ ವೈರಿಯೊಡನೆ ಬೇರೆ ತರದಲ್ಲಿ ಯುದ್ಧಮಾಡಬೇಕಾಗಿದೆ. ಆಪತ್ಕಾಲದಲ್ಲಿ ಬಂದ ನವೀನ ಆಲೋಚನೆಗಳು ಒಮ್ಮೊಮ್ಮೆ ಫಲಿಸುವುದುಂಟು. ಇಷ್ಟು ದೊಡ್ಡ ಘೋರ ರೂಪಿಗೆ, ಲಘು ದೇಹದ ನನ್ನೊಡನೆ ಓಡಲು ಸಾಧ್ಯವಿದೆಯೆ? ಇಲ್ಲ. ಎಲ್ಲಿಯಾದರೂ ಏನಾದರೂ ಎಡವಿ ತಡವಿ ಬೀಳದಿರದು. ಹಾಗೆ ಬಿದ್ದಲ್ಲಿ ಈ ಗುಡ್ಡದಂತಿದ್ದ ದೇಹ ಎದ್ದು ನಿಲ್ಲುವಷ್ಟರಲ್ಲಿ ನಾನೇ ಗೆದ್ದೇನು. ಇದೂ ಒಂದು ಉಪಾಯವಲ್ಲವೇ? ಇಷ್ಟರ ತನಕ ಎದುರಾಳಿಗಳನ್ನು ಗೆದ್ದವನೇ ಗೆಲಬೇಕು! ಆ ಧೈರ್ಯ ನನಗಿದೆಯಾದ್ದರಿಂದ ಈ ಪರಿಯಾಗಿ ಯುದ್ಧ ಪ್ರಾರಂಭಿಸುತ್ತೇನೆ. ಬರಲಿ!

ಎಲ್ಲಿಗೆ ಪೋಗುವೆ ತಲ್ಲಣಗೊಳುತಲಿ। ನಿಲ್ಲೆಲೆ ಪಾತಕಿಯೆ॥
ಎಲ್ಲರ ಗೆಲಿದಂತಲ್ಲ ರಣಾಗ್ರದಿ। ಕೊಲ್ಲುವೆನಿನ್ನುವನು ॥೩॥

ಚಂ- ಎಲಾ ಪಾತಕಿಯೇ! ಓಡುವಿಯಾ? ರಣಹೇಡಿಯೇ! ಇಷ್ಟರ ತನಕ ಶಿವ, ಬ್ರಹ್ಮಾದಿಯಾಗಿ ಎಲ್ಲರನ್ನೂ ಗೆದ್ದಿರುವ ಪೌರುಷವೆಲ್ಲಿ? ತೋರು. ಓಡಿದರೆ ಬಿಡಲು ಬಂದವಳಲ್ಲ ನಾನು.

ರಾಗ- ನೀಲಾಂಬರಿ, ತಾಳ- ಏಕ

ಪರಹರ ರಣದೊಳಾನು। ಜಯಿಸಿದೆನಿಂದು। ಧರಣಿಪರೆಲ್ಲರನು॥
ತರುಣಿಯ ಕರದೊಳಗೆ। ಸುಮ್ಮನೆ ಸಿಕ್ಕಿ। ಸರಿವುದಾಯ್ತೆಮಪುರಿಗೆ ॥

ಕೌ— ಹಾ, ಮಹಾದೇವನೇ! ಎಂತಹ ಉತ್ಪಾತವಿದು? ಕಾದಾಟಕ್ಕೆ ಬಂದ ವೀರಭಟರೆಲ್ಲರನ್ನು ಗೆದ್ದು ವಿಜಯ ಗಳಿಸಿದ ನಾನು, ಈ ಕುರೂಪಿ ಹೆಣ್ಣು ಪಿಶಾಚಿಯ ಕೈಗೆ ಸಿಕ್ಕಿ ಸಾಯುವುದಾಯಿತೇ? ಇನ್ನು ಓಡಲಿಕ್ಕೂ ಶಕ್ತಿಯಿಲ್ಲ. ಅದರ ಶಕ್ತಿ ಕುಂದುವಂತೆ ಕಾಣುವುದೇ ಇಲ್ಲವಲ್ಲ! ಇನ್ನೇನು ಮಾಡಲಿ?

ಏತಕಿಲ್ಲಿಗೆ ಬಂದೆನು। ಪಂಥವ ಮಾಡಿ। ಭೂಪಾಳಾಧಿಪರೊಳಾನು।
ಪಾತಕಕೊಳಗಾದೆನ । ಭವವಿರಂಚಿ ಶ್ರೀ। ನಾಥರಗೆಲಿದು ತಾನು ॥೨॥

ಕೌ- ಅಯ್ಯೋ! ಸಮಸ್ತ ಸುಖಸೌಕರ್ಯಗಳಿರುವುದನ್ನು ಬಿಟ್ಟು ನಾನಿಲ್ಲಿಗೇಕೆ ಬಂದೆನೋ ಕಾಣೆ! ರತಿಯ ಮೇಲಿನ ಅತಿಯಾಸೆಯಿಂದ ಅನರ್ಥವನ್ನು ತಂದುಕೊಂಡೆನಲ್ಲ! ರಾಜರನ್ನೆಲ್ಲ ಕೆಡಹಾಕಿದ್ದಲ್ಲದೆ ಜಗತ್ತಿನ ಆಧಾರ ಶಕ್ತಿಗಳಾದ ತ್ರಿಮೂರ್ತಿಗಳಿಗೂ ದ್ರೋಹ ಮಾಡಿದೆನು. ಅಂತಹ ಪಾಪಕ್ಕೆ ಇದೇ ಪ್ರಾಯಶ್ಚಿತ್ತವಿರಬೇಕಲ್ಲವೆ?

ಆವಜನ್ಮದ ಫಲವಿ। ಹೆಂಗುಸಿನೊಳು। ಸಾವುದಾಯ್ತೀತೆರದಿ॥
ಕಾವದೇವನಕರುಣ। ತಪ್ಪಿದ ಮೇಲಿ!ನ್ನಾವ ದೊಡ್ಡಿತು ಮರಣ॥೩॥

ಕೌ- ಶಿವನೇ! ಹೀಗೆ ಸಾಯಬೇಕಾದರೆ ಯಾವುದೋ ಜನ್ಮದಲ್ಲಿ ಪಾಪಮಾಡಿರಬೇಕು. ಅದಕ್ಕಾಗಿ ದುಃಖಪಡುವುದು ಧರ್ಮವಲ್ಲ. ದೈವ ದ್ರೋಹಿಯಾಗಿ ಬದಕುವುದೂ ನೀತಿಯಲ್ಲ. ಆದ್ದರಿಂದ ಪರಮ ಪಾತಕಿಯಾಗಿ ದೈವಾನುಗ್ರಹವನ್ನು ಕಳಕೊಂಡ ಮೇಲೆ ವೀರ ಮರಣಕ್ಕಾಗಿ ಇಷ್ಟಪಡುವುದು ಶ್ರೇಯಸ್ಕರವಲ್ಲವೇ? ಇಂತಹ ಸಂದರ್ಭವನ್ನು ಯಾರು ನೋಡುವರು?

ಭಾಮಿನಿ॥

ಧಾರಿಣೀಪತಿ ಕೇಳು ಬಳಿಕಾ। ಭೂರಿ ರೋಷವಿದ್ರುಪದ ನಂದನೆ।
ವೀರ ಕೌಂಡ್ಲಿಕನುರವಬಗಿದಾ ಭೂತಗಣಗಳಿಗೆ॥ ಪಾರಣೆಯುಗೆ
ಯ್ಯುತ್ತ ಮತ್ತಾ। ಘೋರರೂಪವನುಳಿದುರಣದಲಿ। ಮಾರುತಿ
ಯುಕುಳ್ಳಿರಲು ಕರೆದಿಂತೆಂದಳವನೊಡನೆ ॥ ೧ ॥

ಚಂ.— ಪ್ರಲಾಪಿಸುತ್ತಿದ್ದ ಕೌಂಡ್ಲಿಕನನ್ನು ಒಗಿದು ಭೂತಗಣಗಳಿಗೆ ತೃಪ್ತಿಪಡಿಸಿದ್ದಾಯಿತು. ಇನ್ನು ಮೊದಲಿನಂತೆ ಸೌಮ್ಯ ರೂಪವನ್ನು ತಾಳಿ ಹನುಮಂತನ ಸಹಾಯ ಪಡೆದು ಆಗಬೇಕಾದ ಕಾರ್ಯವನ್ನು ನೆರವೇರಿಸುತ್ತೇನೆ.

ರಾಗ- ಭೈರವಿ। ತಾಳ— ಝಂಪೆ.

ಕೇಳಯ್ಯ ಹನುಮಂತ। ಶೀಲ ಸದ್ಗುಣವಂತ।
ಕಾಲಕರ್ಮ ವಿದೂರ। ಕಾಳಗದಿ ಶೂರ ॥ ೧ ॥

ದ್ರೌಪದಿ- ಮುಖ್ಯಪ್ರಾಣ! ಮಹಾಗುಣವಂತನೂ ಕಾಲಕರ್ಮಗಳಿಗೆ ಒಳಗಾದವನೂ ಅದ ನೀನು ಇಲ್ಲಿ ನಡೆದುದನ್ನೆಲ್ಲ ನೋಡಿರುವೆಯಷ್ಟೆ! ತಾನೇ ಪ್ರತ್ಯಕ್ಷದರ್ಶಿಯೂ ರಣ ಶೂರನೂ ಆಗಿರುವಾಗ ಯಾವುದೂ ನಿನಗೆ ಹೇಳ ಬೇಕಾಗಿಲ್ಲ, ಆದರೂ ಕೇಳು.

ರಣದಿ ಕೌಂಡ್ಲಿಕನೊಡನೆ। ಸೆಣಸಿ ಮೂರ್ಛಿಸಿದ ಫಲು।ಗುಣ
ಹರಿ ಹರಾದ್ಯಮರ। ಗಣಸಹಿತಲಿಂದು ॥೨॥ ಇವರ ಜೀವಿಸುವ
ಯತ್ನವ ಕಾಣೆ ಬದಲೇನು। ತವಕರುಣವಿರಲು ಬದುಕುವರು
ತತ್‌ಕ್ಷಣದಿ ॥ ೩ ॥

ದ್ರೌ- ನೀನೇ ಕಂಡಿರುವೆಯಷ್ಟೆ! ಕೌಂಡ್ಲಿಕನೊಡನೆ ಕಾದಾಡಿ ಭೀಮಾರ್ಜುನರೇ ಮೊದಲಾದ ಸಮಸ್ತ ವೀರರೂ ಮೂರ್ಛಿತರಾಗಿರುತ್ತಾರೆ. ಇವರನ್ನು ಎಬ್ಬಿಸಬೇಕಾದರೆ ನೀನೇ ಸರಿ. ನಿನ್ನ ಅನುಗ್ರಹವಿದ್ದರೆ ಕೂಡಲೆ ಎಚ್ಚತ್ತು ಶಕ್ತಿವಂತರಾಗುವುದು ನಿಶ್ಚಯ.

ಹಿಂದೆ ಲಂಕೆಯುಲಿ ರಘುನಂದನನ ಮಾರ್ಬಲವ। ನಿಂದ್ರಾರಿ
ಕಪಟದಲಿ। ಕೊಂದ ವೇಳೆಯುಲಿ ॥ ೪ ॥ ತಂದು ಸಂಜೀವಿನಿ
ಯೊ। ಳಂದವರನೆಬ್ಬಿಸಿದೆ। ಇಂದು ನೀಹೊರತನ್ಯ। ರಿಂದಲೇ
ನಹುದು ॥ ೫ ॥

ದ್ರೌ— ಆಂಜನೇಯಾ! ಹಿಂದೆ ಶ್ರೀ ರಾಮಚಂದ್ರನ ಸೈನ್ಯವನ್ನು ರಾವಣನ ಮಗನಾದ ಮೇಘನಾದನು ಮೋಸದಿಂದ ಕೊಂದಿದ್ದನಲ್ಲವೇ? ಆಗ ನೀನೆ ಹೋಗಿ ಸಂಜೀವಿನಿಯನ್ನು ತಂದು ಎಬ್ಬಿಸಿರುತ್ತೀ! ಹಾಗೆ ಇವರನ್ನು ಕೂಡ ಎಬ್ಬಿಸಬೇಕಾದರೆ ಬೇರಾರಿಂದಲೂ ಸಾಧ್ಯವಿಲ್ಲ. ಆ ಪ್ರಯತ್ನಕ್ಕಾಗಿ ಈಗಲೆ ಸಿದ್ಧನಾಗು.

ರಾಗ— ಕೇತಾರ ಗೌಳ। ತಾಳ- ಅಷ್ಟ

ಇಂತು ದ್ರೌಪದಿ ಪೇಳಿದಂತರವರಿತಾಗ। ಸಂತಸದಲಿ ಬಳಿಕ ॥
ಪಿಂತಣತೆರದಲೌಷಧ ವನೆತರುವೆ ಶ್ರೀ। ಕಾಂತನ ಕರುಣದಲಿ ॥೧॥

ಹನುಮಂತ- ದ್ರೌಪದೀ ದೇವಿ! ಚಿಂತಿಸಬೇಡಮ್ಮಾ! ಇದೀಗಲೇ ಹೊರಟೆನು. ಶ್ರೀ ಕಾಂತನಾದ ನಾರಾಯಣನ ಅನುಗ್ರಹವಿದ್ದರೆ ಅದೇನೂ ದೊಡ್ಡದಲ್ಲ, ಈ ಹಿಂದೆ ತಂದಂತೆ ಸಂಜೀವಿನಿಯನ್ನು ತಂದು ತಮ್ಮ ಪಾದಕ್ಕೆ

ಒಪ್ಪಿಸುತ್ತೇನೆ. ಜಯ ಜಯ! ಶ್ರೀ ರಾಮಚಂದ್ರಾ! ರಕ್ಷಿಸೋಣಾಗಲಿ.

ಅಲ್ಲಿಗಯ್ತಂದುತಾನರಸಲು ಕಂಡನು। ಚೆಲ್ವಮಹೌಷಧಿಯಾ ॥
ಮೆಲ್ಲನೆ ಕೊಂಡದ ಮರಳಿದನಾಕ್ಷಣ। ಫುಲ್ಲನಾಭನ ದೂತನು ॥೨॥

ಹನುಮಂತ– ಶ್ರೀರಾಮನ ಧ್ಯಾನ ಮಾಡುತ್ತಾ ಕ್ಷೀರ ಸಮುದ್ರಕ್ಕೆ ಹೋಗಿ ಸಂಜೀವಿನಿದಿವ್ಯೌಷಧವನ್ನು ಸಂಗ್ರಹಿಸಿದ್ದಾಯಿತು. ಈಗಲೆ ದ್ರೌಪದಿಯ ಸನ್ನಿಧಾನದಲ್ಲಿ ಅರ್ಪಿಸಿಬಿಡುವೆನು.

ದ್ರುಪದತನುಜೆ ಕಂಡು। ಹರುಷದೊಳಾತನ। ನುಪಚರಿಸುತಲೆಂದಳು॥
ನಿಪುಣ ನಿನ್ನಯಬಾಲತುದಿಗದ್ದು ತವರಜೀ।ವಿಪುದಯ್ಯ ವೀರಸೇನ॥೩॥

ಹನುಮಂತ– ಅಮ್ಮಾ! ಸಂಜೀವಿನಿಯನ್ನು ತಂದಿರುವೆನು.

ದ್ರೌಪದಿ– ಹನುಮಂತ! ಬಹಳ ಕಷ್ಟಪಟ್ಟೆಯಲ್ಲ! ಇರಲಿ. ಆ ಮಹೌಷಧವನ್ನು ಬಾಲದಲ್ಲಿರಿಸಿ ಎಲ್ಲರನ್ನೂ ಎಬ್ಬಿಸು.

ದ್ವಿಪದಿ–

ಅರಿದು ಬಾಲದೊಳದ್ದಿ ಬಿದ್ದವರಿಗೆಲ್ಲ॥
ಪರನು ಸಂಜೀವಿನಿಯ ತಾನಿತ್ತನಲ್ಲ ॥೧॥

ಹನು.– ಇದೋ ಸಂಜೀವಿನಿ ಮಹೌಷಧವನ್ನರಿದು ಬಾಲದಲ್ಲದ್ದಿ ಮೂರ್ಛಿತರಾದವರಿಗೆ ಈಗಲೆ ಸಿಂಚನಗೊಳಿಸುತ್ತೇನೆ.

ಎಂದು ತನ್ನೊಳು ಮಾತನಾಡುತಿರಲಾಗ॥
ಬಂದು ಹರಿಯೊಳುಯುಮಜ ತಾನೆಂದ ಬೇಗ ॥ ೨ ॥

ಧರ್ಮ– ಅಹಾ ಏನು ವಿಚಿತ್ರ? ಹನುಮಂತನು ತಂದ ಸಂಜೀವಿನಿಯ ಲೇಪದಿಂದ ಎಲ್ಲರೂ ಎದ್ದು ಬಂದಿರುವರು. ಆದರೂ ಸತ್ಯಸ್ಥಿತಿ ಯಾರಿಗೂ ತಿಳಿದಿರುವುದಿಲ್ಲ. ಕೌಂಡ್ಲಿಕನಿಂದ ಸೋಲಲ್ಪಟ್ಟರೂ ಮತ್ತೂ ಅವನನ್ನಿದಿರಿಸುವ ಆವೇಶವುಂಟಾಯಿತಲ್ಲವೇ? ಮತ್ತೆ ನೋಡಿದರೆ ಸತ್ತುಬಿದ್ದ ಕಳೇಬರವನ್ನು ಕಂಡು ಸಮಾಧಾನಪಟ್ಟು ತಮ್ಮಲ್ಲಿ ತಾವೇ ಯೋಚಿಸುತಿದ್ದಾರೆ. ಆದರೆ ನಿಜ ಸ್ಥಿತಿಯನ್ನು ಕಣ್ಣಾರೆ ಕಂಡ ನಾನು ಎಲ್ಲರೂ ಕೇಳುವಂತೆ ಶ್ರೀ ಕೃಷ್ಣನ ಮುಂದೆ ಹೀಗೆ ಹೇಳುತ್ತೇನೆ.

ರಾಗ- ಮಾಧವಿ। ತಾಳ- ಏಕ

ಕೇ... ಲಾಲಿಪುದು ನಾ ಪೇಳ್ವ ಬಿನ್ನಪವ॥ ಭೂವರ ಕೌಂಡ್ಲಿ
ಕನುರು ಪರಾಕ್ರಮವ॥ ನೀವೆಲ್ಲ ಸೋತಿರೆಂದೆನುತಲರ್ಜುನನು॥
ತಾವೊಬ್ಬನುಳಿಯಲೇಕೆನುತ ಕಾದಿದನು ॥ ೧ ॥

ಧರ್ಮ- ಶ್ರೀ ಕೃಷ್ಣ ಸ್ವಾಮಿ! ಸರ್ವವನ್ನು ತಿಳಿದವ ನೀನು. ಆದ
ಈ ಮಾತುಗಳನ್ನು ಅವಧರಿಸಬೇಕು. ದೇವ! ಕೌಂಡ್ಲಿಕನಪರಾಕ್ರಮಾ
ಯಿಗಳನ್ನು ಎಲ್ಲರೂ ತಿಳಿದುಕೊಳ್ಳಲೆಂದು ಬಿನ್ನವಿಸುತ್ತಿದ್ದೇನೆ. ಯುದ್ಧ
ಸರ್ವರೂ ಕೈಸೋತಮೇಲೆ ಅರ್ಜುನನೂ ಹೋರಾಡಿದನು. ಕೊನೆಗೆ ಅವ
ಕೂಡಾ ಕಾದಾಡಲಾರದೆ ಮೂರ್ಛೆ ಹೊಂದಿದನು.

ಚಂಡಿಕಾ ರೂಪವನಾಂತು ಕನಲುತಯ್ತಂದು। ಕೌಂಡ್ಲಿಕನನು
ಕದನದೊಳುರಿಕೊಂದು ॥ ೩ ॥ ಮುನ್ನಿನ ರೂಪವನಾಂತು
ಮಾರುತಿಯು। ಕನ್ಯೆತಾ ಕರೆದು ಹೇಳಿದಳೊಂದ್ಯುಕುತಿಯ ॥೪॥

ಧರ್ಮ— ಅಷ್ಟರಲ್ಲಿ ದ್ರೌಪದಿಯು ಕೋಪೋದ್ರಿಕ್ತಳಾಗಿ ರೌದ್ರಾ
ರದಿಂದ ಚಂಡಿಕೆಯ ರೂಪವನ್ನು ತಾಳಿ ಕೌಂಡ್ಲಿಕನ ಇದಿರು ಬಂದಳು.
ಅವನು ಭಯ ಭೀತನಾಗಿ ಓಡತೊಡಗಿದಾಗ ಪತಿವ್ರತೆಯಾದ ಪಾಂ
ಲೆಯು ಆವನನ್ನು ಕೊಂದು ಭೂತ ಗಣಗಳಿಗೆ ತೃಪ್ತಿಪಡಿಸಿದಳು. ಆ ಮೆ
ಸೌಮ್ಯ ರೂಪದಿಂದ ವಿಂತು ಸಂಜೀವಿನಿಯನ್ನು ತರುವಂತೆ ಹನುಮಂತ
ಹೇಳಿದಳು.

ಪೇಳಲಿಕಾ ಸಂಜೀವಿನಿ ಭೇಷಜವನು ಗಾಳಿಯಣುಗ ಪೂಸಿ
ತಾನೆಬ್ಬಿಸಿದನು ॥೫॥ ಮಂದರಧರ ನಿನ್ನ ಮಹಿಮೆಯಿದೆಲ್ಲ।
ಇಂದಿಗೆಮ್ಮ ಷ್ಟಾರ್ಥ ಸಿದ್ಧಿಸಿತಲ್ಲ ॥ ೬॥

ಧರ್ಮ- ಹಾಗೆ ದ್ರೌಪದಿಯು ಸಂಜೀವಿನಿಯನ್ನು ಹನುಮಂತನ
ತರಿಸಿದಳು. ಕೂಡಲೇ ಅವನು ಆ ಔಷಧಿಯನ್ನು ಮೂರ್ಛಿತರಾದವರ
ಹಚ್ಚಿ ಮೇಲೆಬ್ಬಿಸಿರುತ್ತಾನೆ. ಇಂತಹ ಪರಮ ಭಕ್ತರು ಲೋಕದಲ್ಲಿರುತ
ಯೇ! ಕೃಷ್ಣಾ! ಇದೆಲ್ಲವೂ ನಿನ್ನ ಮಹಾತ್ಮೆಯೆನ್ನಬೇಕು. ಇದರಿಂದ ಸ
ಇಷ್ಟವೂ ನೆರವೇರಿಸಲ್ಪಟ್ಟಿತು.

Political Science

ii

ar/Hindi
di Upanyas
l History of
ature

1. Liberalism and Democracy
2. Organisation and Management
3. International Law

nulak Hindi

1. Modern Indian Political Thoug
2. International Politics
3. Major Issues in Indian Admini
since 1950

ysore, (b) (c) P.G. Centres—B.R. Project, Davangere (d
e (Govt. Arts College, K R. Circle) and (f) Trivandr
d on the Answer Books and Admission Ticket.